ಹುಬ್ಬಳ್ಳಿ ತಾ. ೨೭—೨—೫೧

ಕರ್ಮವೀರ

ಸಂಪುಟ ೨೦] [ಸಂಚಿಕೆ ೪೩

ಜನಪ್ರಿಯ ಸಚಿತ್ರ ವಾರಪತ್ರಿಕೆ

ಸಂಪಾದಕರು:
ಹ. ರಾ. ಪುರೋಹಿತ]

[ಸಂಸ್ಥಾಪಕರು:
ರಂ. ರಾ. ದಿವಾಕರ

- ಬಲ್ಲವರ ನುಡಿಗಳು -

ಶ್ರೇಯಸ್ಸನ್ನು ಬಯಸುವವರು ...ರಿಯಾದ ಜಿಜ್ಞಾಸೆಗಳಿಂದ ಪ್ರಾರಂಭಿಸಬೇಕು.

—ಅರಿಸ್ಟಾಟಲ್

★

ನಿನಗಾದ ಅನ್ಯಾಯಗಳನ್ನು ಕುರಿತು ಗೊಣಗುಟ್ಟುವದನ್ನು ಸಾಧ್ಯವಿದ್ದಷ್ಟು ಕಡಿಮೆ ಮಾಡು ಗೊಣಗಾಡುವವನು ಪಾಪಿ, ಏಕೆಂದರೆ ನಮ್ಮ ಆತ್ಮಾಭಿಮಾನದ ಭರದಲ್ಲಿ ನಾವು ನಮಗಾದ ಚಿಲ್ಲರೆ ನೋವುಗಳನ್ನೂ ... ದೊಡ್ಡವೆಂದು ಬಗೆಯುವ ... ಏರುತ್ತದೆ.

—ಸೇಂಟ ಫ್ರಾನ್ಸಿಸ್

★

ಸಮಾಜವನ್ನು ಹೊಸದಾಗಿ ...ಟ್ಟಬೇಕಾಗಿ ಬಂದಾಗ ಹಳೆಯ ...ಮಾದರಿಯ ಮೇಲೆ ಕಟ್ಟಹೋಗು...ವದು ವ್ಯರ್ಥ.

—ಮಿಲ್

★

ಗತಿಗೆಟ್ಟ ಪ್ರಪಂಚದ ಮಾನ ಮುಚ್ಚಲು ದಾಂಭಿಕರು ನೇಯ್ದ ಆವರಣಗಳೂ ಬೇಕಾಗುತ್ತವೆ.

—ಗೋಲ್ಡಸ್ಮಿತ್




ಮಾಯೋ-ತ್ಸೇ-ತಂಗ್

ಚೀನದ ಕಮ್ಯುನಿಸ್ಟ ಮುಖಂಡನಾದ ಮಾಯೋ-ತ್ಸೇ-ತಂಗನಿಂದು ರಾಷ್ಟ್ರೀಯ ಸರಕಾರವನ್ನು ಹಣ್ಣು ಮಾಡಿ ತನ್ನ ಪ್ರಾಬಲ್ಯವನ್ನು ಸ್ಥಾಪಿಸಿದ್ದಾನೆ. ಅವನ ಸಂಬಂಧದ ವೈಶಿಷ್ಟ್ಯವನ್ನು ೩ನೆಯ ಪುಟದಲ್ಲಿ ಸವಿಸ್ತಾರವಾಗಿ ಕೊಡಲಾಗಿದೆ.

ಸಂಕಪ್ಪನ ಸಂಕಲ್ಪ —ನಾ. ಕಸ್ತೂರಿ —ಪುಟ ೨

ಏಶಿಯದ ಆರ್ಥಿಕ ಸಹಕಾರ

—ಪುಟ ೫



MAHEER

—ಕಸ್ತೂರೀ ಪ್ರಣೀತ—

ಸಂಕಣ್ಣನ ಸಂಕಲ್ಪ

ಲೇಖಕರು: ಶ್ರೀ ನಾ. ಕಸ್ತೂರಿ, ಎಂ. ಎ., ಬಿ. ಎಲ್.

ಆ ರೀತಿ ಸಂಕಲ್ಪ ಮಾಡಬೇಕೆಂಬ ಹುಚ್ಚು ಇದೇ ಸಂಕಣ್ಣನಿಗಿರಲಿಲ್ಲ.... ಸಂಜೆ ಗಾಂಧಿ ಮೈದಾನದಲ್ಲಿ ಸಭೆ ಸೇರಿತ್ತು. ಅಂಗಡಿಗಳನ್ನೆಲ್ಲ ಬೇಗನೆ ಮುಚ್ಚಬೇಕೆಂಬ ಕಟ್ಟಳೆ ಒಳಪಟ್ಟು ಸಂಕಣ್ಣನೂ ಬಾಗಿಲು ಹಾಕಿದ್ದ. ಮಾಡಲು ಕೆಲಸ ಬೇರೆ ಯಾವುದೂ ಇರಲಿಲ್ಲ. ಕಾಲು ಮೈದಾನದ ಕಡೆ ಹರಿಯಿತು! ಅಂದಿನ ಭಾಷಣ ಕಾರರು ಕೂಡ, ಎಂದಿನಂತೆ ಸೀರಸವಾಗಿಯೇ ಮಾತನಾಡಿದ್ದರು. ಮಾಮೂಲಿನಂತೆ, ಮಾತೃಭೂಮಿ, ಪುರುಷಾರ್ಥ, ಮಹಾತ್ಮ, ಮಹಾತ್ಯಾಗ, ನಿಸರ್ಗ ಜೀವನ, ಸರಳ ಸುಂದರ.... ಎಂಬುದೇ ಮುಂತಾಗಿ ಹೇಳುತ್ತ. ಇನ್ನು ಒಂದೇ ಒಂದು ಮಾತು, ಎಂದು ಮುಂದು ವರಿಸಿ, ಮೂರು ಮೂರು ಗಂಟೆ ಕೊರೆದು ಬಿಟ್ಟರು, ಅಷ್ಟೆ. ಅದೇ ತರದ ಭಾಷಣಗಳನ್ನು ಸಂಕಣ್ಣ ಬಾಲ್ಯದಿಂದಲೂ ಕೇಳಿ ಕಿವುಡಾಗಿದ್ದ. ಸತ್ಯ ಅಹಿಂಸೆ ಎಂಬ ಮಾತುಗಳನ್ನಂತೂ ಅವನು ಸಾವಿರ ಬಾರಿ ಕೇಳಿದ್ದುಂಟು. ಅವೆಲ್ಲ ಘೋಷಣೆ, ಬರಿಯ ಕೂಗು, ಪುಸ್ತಕದ ಬದನೆಕಾಯಿ ಎಂದು ಅವನು ನಿಶ್ಚಯಿಸಿಬಿಟ್ಟಿದ್ದ. ನೀರಕಲ್ಲ ಮೇಲೆ ನೀರು ಬಿದ್ದಂತೆ. ಅವು ಅವನ ಅಂತರಂಗವನ್ನು ಎಂದೂ ಪ್ರವೇಶಿಸಿರಲಿಲ್ಲ.

ಆದರೆ, ಆ ಮೂವತ್ತನೆಯ ದಿನಾಂಕದ ವಾತಾವರಣವೇ ವಿಲಕ್ಷಣವಾಗಿತ್ತು. ಎಲ್ಲರ ಕಣ್ಣಲ್ಲೂ ಕೊಂಚ ಕಂಬನಿ, ಎಲ್ಲರ ಕಿವಿಯಲ್ಲೂ ಒಂದು ಆರ್ತನಾದದ ಮೊಳಗು, ಎಲ್ಲರ ಬಾಯಲ್ಲೂ ಪ್ರಾಯಶ್ಚಿತ್ತದ ಬಿಂಕ, ಎಲ್ಲರ ಮೊಗದಲ್ಲೂ ಒಂದು ಹೊಸ ಪರಿಮಳ- ಅಂದು ಜನವರಿ ೩೦ ರಂದು! ಆ ದಿನ ಶಾಸ್ತ್ರಿಗಳೊಬ್ಬರು, ಕಳವೇಡ, ಕೊಲಬೇಡ ಎಂಬ ವಚನವನ್ನೂ ಸತ್ಯಮೇವ ಜಯತೇ ನಾನೃತಂ, ಅಹಿಂಸಾ ಪರಮೋಧರ್ಮಃ, ಎಂಬ ಆರ್ಯೋಕ್ತಿ ಸೂಕ್ತಿಗಳನ್ನೂ ಹೃದಯಂಗಮವಾಗಿ ಹೇಳಿದ್ದರು.

ಆ ರಾತ್ರಿ, ಸಂಕಣ್ಣನಿಗೆ ನಿದ್ದೆ ಬರಲಿಲ್ಲ. ಹೃದಯದಲ್ಲಿ ಎಂದೂ ಇಲ್ಲದ ತಳಮಳ! ವಾದ ಪ್ರತಿವಾದಗಳ ಆಂದೋಲನ! ಅಂಗಡಿಯಲ್ಲಿ ಕುಳಿತು ಲಾಭ ಗಳಿಸಲು ಸುಳ್ಳಾಡದೆ, ಹೇಗೆ? ಕೊಳ್ಳುವಾಗ ಒಂದು ತೂಕ, ಕೊಡುವಾಗ ಮತ್ತೊಂದು ತೂಕ, ಬೇಡವೆ? ಕೂಡದೆ? ಆದಾಯ ತೆರಿಗೆ ಇಲಾಖೆಗೆ ಎಲ್ಲ ಆದಾಯ ವನ್ನು ತಿಳಿಸಿ, ಸರ್ಕಾರಕ್ಕೆ ಹಣ ತರಬೇಕೇ? ನಾವು ಶ್ರಮವಹಿಸಿ ಸಂಪಾದಿಸುವುದು ಈ ಸರಕಾರದ ಹೊಟ್ಟೆ ತುಂಬಿಸುವುದಕ್ಕಾಗಿಯೆ? ಮಕ್ಕಳು ಮರಿಗಳ ಪಾಡೇನು? ಇದ್ದದ್ದನ್ನು ಇದ್ದ ಹಾಗೆ ಇತರರು ನಮಗೆ ಹೇಳಬೇಕೇ ಹೊರತು, ನಾವು ಇತರರಿಗೆ ಹೇಳಲೇಬೇಕೆ? ಸಮಾಜದಲ್ಲಿ ಗಣ್ಯರಾಗಿರುವ ವ್ಯಕ್ತಿಗಳೆಲ್ಲ ಲಂಚಕೋರರೂ ಕಾಳಸಂತೆಯವರೂ ಆಗಿರುವಾಗ, ನನ್ನದೇನು ತಪ್ಪು? ಕಲಿಯುಗದಲ್ಲಿ ಇಂಥದ್ದೇ ಹೆಚ್ಚುತ್ತದೆ ಎಂದು ಜೋಯಿಸರು ಹೇಳುತ್ತಿರುವಾಗ, ಯುಗಧರ್ಮಕ್ಕೆ ವಿರೋಧವಾಗಿ, ಕೇವಲ ನನ್ನಿಂದ ಸತ್ಯ ಸಾಮ್ರಾಜ್ಯವನ್ನು ಸ್ಥಾಪಿಸಲು ಸಾಧ್ಯವೆ? ಗಾಂಧಿಯವರು ದೇವರ ಅವತಾರ! ಅವರಿಗೆ ಅಸಾಧ್ಯವಾದದ್ದು ಯಾವುದೂ ಇರಲಿಲ್ಲ. ಗಂಗೆಗೊಂದು ದಾರಿ, ತುಂಗೆಗೊಂದು ದಾರಿ ಎಂದು ಪರಮಾತ್ಮನೇ ವಿಧಾಯಕ ಮಾಡಿರೋವಾಗ, ಗಾಂಧೀಮಾರ್ಗವನ್ನು ನಾವು ಅನುಸರಿಸಬಹುದೆ? ಬೇಕೆ? ಬಾರದೆ? ನನ್ನ ಅಂಗಡಿಗೆ ಬಂದು ನನ್ನಿಂದ ಮೋಸಹೋಗಿ ನನಗೆ ಹಣ ತೆತ್ತು ನನಗೆ ಮಹಡಿ ಮಹಲ್ಲು ಕಲ್ಪಿಸಿಕೊಡಿರೋ ಎಂದು ನನ್ನ ಗಿರಾಕಿಗಳ ಹಣೆಯಲ್ಲಿ ಬ್ರಹ್ಮ ಬರೆದಿಟ್ಟಿರುವಾಗ ಅದನ್ನಳಿಸುವುದಕ್ಕೆ ನಾನು ಯಾರು? ಎಷ್ಟರವನು? ಇಷ್ಟಕ್ಕೂ ಇವತ್ತು ಮಾತನಾಡಿದರಲ್ಲಾ ಶಾಸ್ತ್ರಿಗಳು, ಅವರೇನು, ಅಂಥ ನಿಸ್ಪೃಹರೇನು? ಸಭೆಗೆ ಅಧ್ಯಕ್ಷತೆಗೆ ವಹಿಸಿ ಪುಷ್ಪಾಹಾರ ಹಾಕಿಸಿಕೊಂಡರಲ್ಲಾ, ಆ ಮಹನೀಯ ತಾನೆ, ಏನು? ತ್ಯಾಗಿಯೆ? ಸತ್ಯಹರಿಶ್ಚಂದ್ರನೆ? ಶಿಬಿಚಕ್ರವರ್ತಿಯೆ? ಬುದ್ಧ ದೇವನೆ?... ಎಂದೆಲ್ಲ ಸಂಕಣ್ಣ ಮನದ ಕೊಳದ ಕೊಳೆಯನ್ನು ಕೋಲಿ ತೆಗೆದ. ಕಡೆಗೆ ಬೆಳಗಿನ ಜಾವ ೪ ಗಂಟೆಯ ಹೊತ್ತಿಗೆ ಅದು ತಿಳಿಯಾಯಿತು. ಮನವು ಲ ನಿಂತಿತು. ಯಾವುದೋ ಒಂದು ದಿವ್ಯ ಮಾನುಷಶಕ್ತಿ ಅವನನ್ನು ಹಿಡಿದು ನೂಕಿತು. ಅವನು ಆ ಆವೇಶದಲ್ಲಿ ಲೀನನಾಗಿ, ಸಂಕಲ್ಪ ಮಾಡೇಬಿಟ್ಟ!

ಬೆಳಿಗ್ಗೆ ಎದ್ದು ಶಿವಪೂಜೆ ಮಾಡಿ, ಅಂಗಡಿಗೆ ಹೋಗಿ, ಒರಗುದಿಂಬಿನ ಮೇಲೆ ಮೈಯನ್ನಿರಿಸಿ, ತುರುತ್ತಾಗಿ ಕಳುಹಿಸಬೇಕಾಗಿದ್ದ ನಾಲ್ಕಾರು ಜವಾಬುಗಳನ್ನು ಬರೆದು, ಆಳಿನ ಪತ್ರ ಅಂಚೆಕಚೇರಿಯ ಡಬ್ಬಿಯೊಳಕ್ಕೆ ಅವು ಗಳನ್ನಿಡಲು ಕಳುಹಿಸಿದ. ಅವನ ಪತ್ರಗಳು ಈ ರೀತಿ ಇದ್ದವು; ಅವು ಹೇಗಿತ್ತೆಂಬುದರ ಪರಿವೆಯೇ ಇಲ್ಲದೆ, ಅವನು ಉದ್ದಕ್ಕೂ ಗರಗರನೆ ಗೀಚಿದ್ದ:

" ಸ್ವಾಮಿ! ನಿಮ್ಮ ಪತ್ರ ತಲುಪಿತು. ಆದರೆ ನೀವು ಈ ಸತ್ಕಾರ ಸಮಾರಂಭವನ್ನು ಗುರು ಭಕ್ತಿಯಿಂದ ಏರ್ಪಾಟು ಮಾಡಿದಿರೀ. ಪ್ರತಿಷ್ಠಾವಂತರನ್ನು ಕರೆಸಿ ಅವರನ್ನು ಆದರಿಸಿ, ಅವರಿಗೆ ಬೇಡವಾದ ಉಪಚಾರವನ್ನು ಅವರಿಗೆ ಒದಗಿಸಿದರೆ ನಿಮ್ಮ ಪ್ರತಿಷ್ಠೆ ಹೆಚ್ಚುವುದು ಎಂಬುದೇ ನಿಮ್ಮ ಇಚ್ಛೆ! ಈಗಿನ ಕಷ್ಟ ಪರಿಸ್ಥಿತಿಯಲ್ಲಿ ಇದು ಕೇವಲ ದುರ್ವರ್ತನೆ. ಗಾಂಧೀಜಿಯವರು ಒಮ್ಮೆ ಡಿಳ್ಳಿ ಭಂಗಿ ಕಾಲೊನಿಯ ಹರಿಜನರಿಗೆ, ಅವರ ವರ್ಧಂತಿ ದಿನ ಡಾ|| ರಾಜೇಂದ್ರ ಪ್ರಸಾದರು ಸಿಹಿ ಹಂಚಿದಾಗ, ಅನ್ನವೇಳೆಯಲ್ಲಿ ಹಸಿವಿಲ್ಲದವರಿಗೆ ಆಹಾರ ಹಂಚಿದ್ದಕ್ಕೆ ಬಾಬು ರಾಜೇಂದ್ರರನ್ನು ಖಂಡಿಸಿಲ್ಲವೆ? ನಿಮ್ಮಂಥವರ ಸಿಹಿಯರಿಗೆ ನಾನು ಪ್ರೋತ್ಸಾಹ ಕೊಡುವುದಿಲ್ಲ. ಖಂಡಿತ, " ಇದು ಒಂದು ಪತ್ರ, ಸಂಕಣ್ಣ ಬರೆದದ್ದು.

ಮತ್ತೊಂದು ಪತ್ರ: " ಸ್ವಾಮಿ! ನನ್ನ ಎರಡನೆಯ ಮಗನಿಗೆ ಒಂದು ನೌಕರಿ ಕೊಡಬೇಕೆಂದು ನಾನು ನಿಮಗೆ ಮೊನ್ನೆ ಬರೆದಿದ್ದೆನಷ್ಟೆ. ನಾನು ಹಾಗೆ ಮಾಡಿದ್ದು ಶುದ್ಧ ತಪ್ಪು; ಅಕ್ಷಮ್ಯ. ಅದನ್ನು ಯೋಗ್ಯತೆ ಇರುವ ಯಾರಿಗಾದರೂ ಕೊಟ್ಟು ನಿಮ್ಮ ಕರ್ತವ್ಯವನ್ನು ನಿರ್ಭಯವಾಗಿ ಮಾಡಿ. ನನ್ನ ಮಗನಿಗೆ ಅರ್ಹತೆ ಸಾಲದು. ಅವನು ಶುದ್ಧ ಅಯೋಗ್ಯ. "

ಮೂರನೆಯ ಪತ್ರ: " ಮಾಸ್ಟರೆ! ನೀವು ಬರೆದು ಅಚ್ಚು ಮಾಡಿರುವ ಗ್ರಂಥವನ್ನು ನಾನು ಓದಿದೆ, ಅಂದರೆ, ಪೂರ್ತಿ ಓದಲಿಕ್ಕಾಗಲಿಲ್ಲ, ನನ್ನಿಂದ. ಬರೀ ಕಗ್ಗ! ನೀತಿ ಅಶ್ಲೀಲಗಳ ಕಂತೆ. ನಮ್ಮ ದೇಶಕ್ಕೆ ನಿಮ್ಮಂಥವರು ನಿಜಕ್ಕೂ ದ್ರೋಹಿಗಳು. ಕೂಡಲೇ ನೀವು ಲೇಖನಿಯನ್ನು ಬಿಸಾಕಿ, ಸ್ಯಾನಿಟರಿ ಇನ್‌ಸ್ಪೆಕ್ಟರ್ ನೌಕರಿಗೆ ಸೇರಿಕೊಳ್ಳುವುದು ಸೂಕ್ತವೆಂದು ತೋರುತ್ತದೆ. "

ನಾಲ್ಕನೆಯ ಪತ್ರ: "ಸ್ವಾಮಿ! ನೀವು ಮೊನ್ನೆ ನಮ್ಮ ಅಂಗಡಿಗೆ ಬಂದಾಗ, ನಾನು ನನ್ನಲ್ಲಿ ನಿಮಗೆ ಬೇಕಾಗಿದ್ದ ಪದಾರ್ಥ ಇಲ್ಲವೆಂದೂ ಮತ್ತೊಂದು ಕಡೆಯಿಂದ ತೆಗೆದು ಕೊಡುವದಾಗಿಯೂ ಅದಕ್ಕೆ ೩೫೦೦ ರೂ. ಬೆಲೆಯಾಗುತ್ತದೆಂದೂ ಹೇಳಿದ್ದೆನಲ್ಲವೆ? ಅವೆಲ್ಲ ಸುಳ್ಳು! ನಾಚಿಕೆಯಿಂದ ತಲೆತಗ್ಗಿಸಿ ನಾನೇ ಬರೆಯುತ್ತಿದ್ದೇನೆ, ಕ್ಷಮಿಸಿ. ನನ್ನಲ್ಲೇ ಇದೆ. ಇತ್ತು. ಅದಕ್ಕೆ ನಾನು ೧೫೦೦ ರೂ. ಕೊಟ್ಟು ೬ ತಿಂಗಳ ಹಿಂದೆ ಕೊಂಡಿದ್ದೆ. ಈಗ ನೀವು ೧೫೦೦ ನ್ನೂ ಶೇಕಡ ೩ ರಂತೆ ೬ ತಿಂಗಳ ಬಡ್ಡಿಯನ್ನೂ ಮೇಲೆ ಲಾಭಕ್ಕಾಗಿ ೧೫ ರೂ. ಸೇರಿ ೧೫೬೦ ರೂ ತಲುಪಿಸಿದರೆ ಸಾಕು, ಎಂದು ವಿನಯಪೂರ್ವಕ ತಿಳಿಸಲಿಚ್ಛಿಸುತ್ತೇನೆ."

ಐದನೆಯದು:"ನಾನು ನಿಮಗೆ ಹಿಂದೆ ಮಾತು ಕೊಟ್ಟಂತೆ ಇಕೊ, ಇದರೊಂದಿಗೆ ೧೦೦೦ ರೂ. ಗೆ ಚೆಕ್ಕೊಂದನ್ನಿರಿಸಿದ್ದೇನೆ. ಹೀಗೆಯೇ, ನನ್ನಿಂದಲೂ ಇನ್ನಿತರರಿಂದಲೂ ನೀವು ಶೇಖರಿಸುತ್ತಿರುವ ಹಣವನ್ನೆಲ್ಲ ನೀವು ದೇವಸ್ಥಾನಕ್ಕಾಗಿಯೇ ಉಪಯೋಗಿಸುತ್ತೀರಿ ಎಂಬ ಭರವಸೆ ನನಗಿಲ್ಲ. ಆದರೂ ವಚನಭ್ರಷ್ಟನಾಗಬಾರದಲ್ಲಾ, ಎಂದು ಹಣ ಕಳುಹಿಸಿದ್ದೇನೆ. ನಿಜಕ್ಕೂ ನನಗೆ ನಿಮ್ಮ ದೇವಸ್ಥಾನದಲ್ಲಿ ಆಸಕ್ತಿಯೇ ಇಲ್ಲ. ನಿಮ್ಮಂಥವರು ಕಟ್ಟುವ ಗುಡಿ ಭದ್ರವಾಗಿ ನಿಲ್ಲುವದಿಲ್ಲ. ಅಲ್ಲದೆ, ಒಂದು ಕಡೆ, ಹಳೆಯ ದೇವಸ್ಥಾನಗಳೆಲ್ಲ ಹಾಳುಬೀಳುತ್ತಿರುವಾಗ, ಮತ್ತೊಂದು ಕಡೆ ಹೊಸ ಗುಡಿಗಳಿಗಾಗಿ ಜನರನ್ನು ಹಿಂಸಿಸುವುದೇಕೆ? ಆದರೂ ನೀವು ಹೊತ್ತುತಿರುಗುವ ಚಂದಾಪಟ್ಟಿಯಲ್ಲಿ ನನ್ನ ಹೆಸರೂ ಸೇರದಿದ್ದರೆ, ಜನ ಏನೆಂದಾರು? ಹೇಗೆ ಟೀಕಿಸಿಯಾರು? ಎಂಬ ಪುಕ್ಕಲಿಂದ ನಾನು ಮಂಕನ ಹಾಗೆ ಒಂದು ಸಾವಿರವಾಗ್ದಾನ ಮಾಡಿದೆ. ಚೆಕ್ಕನ್ನು ಕ್ಯಾಷ್ ಮಾಡಿ, ಸುಖವಾಗಿರಿ, ಮತ್ತೊಮ್ಮೆ ಅಂಗಡಿ ಬಾಗಲಲ್ಲಿ ಮಾತ್ರ ತಲೆತೋರಿಸಬೇಡಿ! ಹುಷಾರ್! "

ಹೀಗೆ, ನಾಲ್ಕೈದು ದಿನಗಳವರೆಗೆ, ಬಂದ ಪತ್ರಗಳಿಗೆಲ್ಲ, ಸತ್ಯದಿಂದ ಉತ್ತರ ಬರೆಯಲಾಗಿ ಭಾರಿ ಪ್ರಕಾರೆದ್ದು, ನಂಟರಿಷ್ಟರೂ ಮಿತ್ರರೂ ಸೇರಿ, ಮೊನ್ನೆ ಸಂಕಣ್ಣನನ್ನು ಹುಚ್ಚರ ಆಸ್ಪತ್ರೆಗೆ ಜುಲುಮಿನಿಂದ ಸಾಗಿಸಿದರು ಎಂಬ ಸುದ್ದಿ ಬಂದಿದೆ.

★

ಫೆಬ್ರುವರಿ ಪ್ರಾರಂಭದಲ್ಲಿ ಯುಕ್ತಪ್ರಾಂತ ಭಾಗದ ಸೈನಿಕರ ಮತ್ತು ಅವರ ಕುಟುಂಬದವರ ಸಪ್ತಾಹ ಆಚರಿಸಲ್ಪಟ್ಟಿತು. ಆಗ ಗವರ್ನರ ಶ್ರೀಮತಿ ಸರೋಜಿನಿ ನಾಯಡು ಅವರು ಕುಮಾರಿ ಗೋಸ್ವಾಮಿಯವರಿಗೆ ಸ್ತ್ರೀಯರ ಓಟದ ಸ್ಪರ್ಧೆಯಲ್ಲಿ ವಿಜಯಬಹುಮಾನ ಕೊಡುತಿರುವದು

★



ಕೆಂಪು ಚೀನದ ಇತಿಹಾಸ

ಚಿಯಾಂಗರ ಆಡಳಿತೆಯ ದುಷ್ಪರಿಣಾಮ—ಕೆಂಪು ದಲಕ್ಕೆ ಜನತೆಯ ಸಹಾನುಭೂತಿ— ಸೈನಿಕರ ಆದರ್ಶ ನಡತೆ

ಇಂದು ಚೀನದೇಶದಲ್ಲಿ ಸಮತಾವಾದಿಗಳ (ಕಮ್ಯುನಿಸ್ಟರು) ವಿಜಯವಾಗುತ್ತಿದೆ ಎಂದು ನಾವು ಓದುತ್ತಿದ್ದೇವೆ. ಈ ವಿಷಯವನ್ನು ಕೆಲವರು ಸಂತೋಷದಿಂದ, ಕೆಲವರು ಕಾತರತೆಯಿಂದ, ಇನ್ನುಳಿದವರು ಔದಾಸೀನ್ಯದಿಂದ ಓದುತ್ತಾರೆ, ಗ್ರಹಿಸುತ್ತಾರೆ. ಚಿಯಾಂಗ್ ಕೈಶೇಕನ ಟೊಳ್ಳು ಸರಕಾರದ ಆಡಳಿತೆಯಿಂದ ಇಡೀ ದೇಶದಲ್ಲಿ ದಾರಿದ್ರ್ಯ, ಅಜ್ಞಾನ, ಮೌಢ್ಯ ಮನೆಮಾಡಿರುವುವು. ಒಬ್ಬ ಸಾಧಾರಣ ಚೀನೀಯನು ಅವನ ಜನ್ಮದಲ್ಲಿ ಸ್ನಾನ ಮಾಡುವುದು ಎರಡು ಸಲವಂತೆ— ಒಂದು ಹುಟ್ಟಿದಾಗ, ಇನ್ನೊಂದು ಮದುವೆಯಾದಾಗ. ಶಾಂತಿ ಸುಖ, ಪ್ರಗತಿ, ವಿದ್ಯೆ ಎಂದರೇನೆಂದು ಜನರಿಗೆ ತಿಳಿಯದು. ಚಿಯಾಂಗನೂ ಅವನ ಬಂಧುಗಳೂ (ಎಲ್ಲರೂ ಸೇರಿ ಒಂದೆರಡು ಮನೆತನದವರು) ಇಡೀ ರಾಷ್ಟ್ರವನ್ನು ಆಳುತ್ತಿರುವರು. ಅಥವಾ ಆಳುತ್ತಿದ್ದರು. ಇವರ ದುರಾಶೆಗೆ ಅಂತ್ಯವೇ ಇಲ್ಲ. ಹೀಗಾಗಿ ಚೀನವು— ಪ್ರಾಚೀನ ಸಂಸ್ಕೃತಿಯ ವೈಭವದ ಪ್ರತೀಕನಾದ ಚೀನವು—ಅತ್ಯಂತ ಹೀನ ಸ್ಥಿತಿಗೆ ಇಳಿಯಿತು. ಆದುದರಿಂದ ಯಾವುದಾದರೊಂದು ಬದಲಾವಣೆಯನ್ನು ಮಾಡುವೆವೆಂದು ಮಾತು ಕೊಡುವವರಿಗೆ ಇಂದು ಚೀನದ ಸಾಮಾನ್ಯ ಜನರು ಸಹಾಯ ಮಾಡಲು ಸಿದ್ಧರಾಗಿದ್ದಾರೆ. ಚೀನೀ ಕಮ್ಯುನಿಸ್ಟರ ಜಯಕ್ಕೆ ಇದೇ ಕಾರಣ.

ಕೆಂಪುದಲದ ಕಷ್ಟಗಳು

ಚೀನಿ ಕಮ್ಯುನಿಸ್ಟರ "ಕೆಂಪು ದಳದವರು" ಹೊರಗಿನಿಂದ ಬಂದವರಲ್ಲ. ಚೀನೀ ಸರಕಾರದ ಅನ್ಯಾಯ ತಡೆಯಲಾಗದೇ ಕೆಲವು ಜನ ಬಡವರು ಆದರೂ ಧೀರರು ಮುಂದೆ ಬಂದು ಸಮತಾವಾದಿಗಳ ಸಂಗಡವನ್ನು ಸೃಷ್ಟಿಸಿದರು. ೧೯೨೦ ರಲ್ಲಿ ಇಂದು ಕೆಂಪು ಪಕ್ಷದವರ ಮುಖ್ಯಾಧಿಕಾರಿ ಮಯೊತ್ಸೆ ತಂಗನು ಕೂಲಿಗಾರರಿಗೆ ರಾಜಕೀಯ ಶಿಕ್ಷಣವೀಯಲು ಪ್ರಯತ್ನಿಸಿದನು. ಆಳುವ ಸರಕಾರದ ಅನ್ಯಾಯವನ್ನು ಅವನು ಅರಿತಿದ್ದನು. ಅಲ್ಲದೇ ರಶ್ಯದಲ್ಲಿ ಮೂರು ವರ್ಷದ ಹಿಂದೆ ಸ್ಥಾಪಿಸಲ್ಪಟ್ಟಿದ್ದ ಕೆಂಪು ಸರಕಾರದ ವಿಷಯ ಅಭ್ಯಾಸ ಮಾಡಿದ್ದನು. ಮಾರ್ಕ್ಸನ ಸಿದ್ಧಾಂತಗಳನ್ನು ಓದಿದ್ದನು. ಹೀಗಾಗಿ ಚೀನದ ಕ್ಷಯರೋಗಕ್ಕೆ ಸಮತಾವಾದವೇ ಮದ್ದೆಂದು ಮನಗಂಡು, ಧೈರ್ಯದಿಂದ ಮುಂದೆ ಬಂದು, ಕೆಂಪು ಪಕ್ಷವನ್ನು ಸ್ಥಾಪಿಸಿದನು. ಇದರ ವಿವರಣೆಗೆ ಇನ್ನೊಂದು ಪ್ರತ್ಯೇಕ ಲೇಖನವೇ ಬೇಕಾದೀತು. ಅಂತೂ ಏನೂ ಬಂಡವಾಳವಿಲ್ಲದೆ- ಬಂಡವಾಳಶಾಹಿ ರಾಜ್ಯದಲ್ಲಿ ನಾಲ್ಕು ಜನ ಬಂದುಗಾರರಿಂದ- ಹುಟ್ಟಿದ ಸಂಗಡವಿದು. ನಾಲ್ಕೆಂಟು ದೇಶಪ್ರೇಮಿ ತರುಣರಿಂದ ಮೊದಲಾಗಿ, ಅನೇಕ ಕಷ್ಟ ಸಂಕಟಗಳಿಗೀಡಾಗಿ ಇಂದು ಅವುಗಳ ಫಲವಾದ ವಿಜಯವನ್ನು ಅದು ಗಳಿಸುತ್ತ ಇದೆ. ನದಿಯು ಉದ್ಭವಿಸುವಲ್ಲಿ ಕೇವಲ ಒಂದು ಬಟ್ಟೆಸಿಂದ ಮುಚ್ಚುವಷ್ಟು ಸಣ್ಣ ಒರತೆ ಮಾತ್ರ ಇರುವುದಲ್ಲವೇ? ಈ ಉದಾಹರಣೆಯನ್ನು ಮನಸ್ಸಿನಲ್ಲಿಟ್ಟುಕೊಂಡರೆ ಕೆಂಪು ದಳದವರ ಪ್ರಗತಿ ಸರಿಯಾಗಿ ಅರ್ಥವಾಗುವದು. ಅದರ ವಿಜಯ ಕೇವಲ ಅದೃಷ್ಟ ಪ್ರಾಪ್ತವಲ್ಲ.

ದೇಶಪ್ರೇಮ ಮತ್ತು ಪರಿಶ್ರಮ

ಕೆಂಪು ಸೈನ್ಯದ ಸೈನಿಕರು ತಾವು ದೇಶರಕ್ಷಣೆಗಾಗಿಯೇ, ಬಡವರ ಉದ್ಧಾರಕ್ಕಾಗಿಯೇ ಹೋಟಿರುವವರು, ತಮ್ಮ ಕಾರಣ ನ್ಯಾಯವಾದುದು ಎಂದು ನಂಬಿದರು. ಅವರು ಸ್ವಪ್ರೇರಣೆಯಿಂದ, ಉದಾತ್ತೋದ್ದೇಶದಿಂದ ಸೈನ್ಯ ಸೇರಿದವರೇ ಹೊರತು ಹಣಕ್ಕಾಗಿ ಅಲ್ಲ ಅಥವಾ ಬೇರಾದ ಉದ್ದೇಶಕ್ಕಾಗಿಯೂ ಅಲ್ಲ. ರಾಷ್ಟ್ರೀಯ ಸೈನ್ಯಕ್ಕೆ ಬಲಾತ್ಕಾರದಿಂದ ಚಿಯಾಂಗ್ ಸರಕಾರದವರು ಜನರನ್ನು ಸೇರಿಸಿದರು, ಕೆಂಪು ಸೈನ್ಯಕ್ಕೆ ತಾವಾಗಿಯೇ ಜನರು ಸೇರಿದರು ಈ ಎರಡು ಸೈನ್ಯಗಳಲ್ಲಿನ ಯೋದ್ಧರ ಬೆಳವಣಿಗೆಯು ವಿರುದ್ಧ ಮಾರ್ಗಗಳಲ್ಲಿ ಹೋಗಿರುವುದು. ಕೆಂಪು ಸೈನಿಕರು ಬಿಡುವು ಇರುವಾಗ ವಿದ್ಯಾಭ್ಯಾಸ ಮಾಡಿದರು, ಸಮತಾವಾದದ ಪಕ್ಷಗಳನ್ನು ಕಲಿತರು. ತಾವು ಮಾಡುವ ಯುದ್ಧದ ಕಾರಣವನ್ನು, ಅದರ ನ್ಯಾಯವನ್ನು ತಿಳಿ

ಲೇ- ಶ್ರೀ ಜಿ- ಟಿ. ನಾರಾಯಣರಾವ್, ಎಂ. ಎ., ಮಡಿಕೇರಿ

ದರು. ಇತರ ನಾಗರಿಕರೊಡನೆ ಮರ್ಯಾದೆಯಿಂದಲೂ ಸಮಾನತೆಯಿಂದಲೂ ವರ್ತಿಸುವುದರ ಅವಶ್ಯಕತೆಯನ್ನು ಕಂಡುಕೊಂಡರು- ನಂಬಿಗೆಗೆ ನಂಬಿಕೆಯೇ, ಮರ್ಯಾದೆಗೆ ಮರ್ಯಾದೆಯೇ-ಪ್ರತಿಫಲ. ಆ ಪ್ರಜೆಗಳು ಕೆಂಪು ಸೈನ್ಯದವರನ್ನು ಬಡವರ ಸೈನ್ಯ ಎಂದು ಗೌರವಿಸಿದರು, ಸಹಾಯ ಮಾಡಿದರು. ಆದರೆ ಏನು ಸಹಾಯ ಮಾಡಿಯಾರು ಪಾಪ! ಬಂಡವಾಳವಿಲ್ಲದ ಸಹಾಯ. ಆದರೂ ಈ ಸೌಹಾರ್ದವೇ, ಈ ಸಹಾನುಭೂತಿಯೇ ಕೆಂಪು ಸೈನಿಕರಲ್ಲಿ ಹುರುಪನ್ನು ಹೆಚ್ಚಿಸಿತು.

ಜನಪ್ರಿಯತೆಗೆ ಕಾರಣ

ಹಾಗಾದರೆ ಕೆಂಪು ಸೈನ್ಯದವರ ಮೇಲೆ ಜನರಿಗೆ ಪ್ರೇಮವೇಕೆ? ಸ್ವಂತ ಭೂಮಿ ಇರದೆ, ಸಾಗುವಾಡಿ ಗೇಣಿ ಕೊಡಲಾಗದೆ ಪರಿಪರಿಯ ಹಿಂಸೆಗಳಿಗೆ ತುತ್ತಾಗಿ, ಬೆಂದು ಬಸವಳಿದವರು, ಚೀನದ ಜನಸಂಖ್ಯೆಯ ನೂರಕ್ಕೆ ತೊಂಬತ್ತರಷ್ಟು ಇರುವ ಬಡವರು ಇಂಥವರಿಗೆ ಕೆಂಪು ಸೈನ್ಯದವರು ತಮ್ಮ ವಶದಲ್ಲಿರುವ ಭೂಮಿಯನ್ನೆಲ್ಲ ಹಂಚಿಕೊಟ್ಟರು! ಗೇಣಿಗೂ ಸಿಕ್ಕದೆ ಇದ್ದ ಭೂಮಿಯು ಸ್ವಂತಕ್ಕೆ ದೊರೆಯುವಾಗ ಅವರ ಸಂತೋಷಕ್ಕೆ ಅಂತ್ಯವೇ ಇಲ್ಲ. ಅಷ್ಟೂ ಅಲ್ಲದೆ, ಆ ಭೂಮಿಗಳ ಮೇಲೆ ಕಂದಾಯವೇ ಇರಲಿಲ್ಲ. ಇದು ಚೀನದಲ್ಲಿ ಅಭೂತಪೂರ್ವ ಎಂದು, ಕೆಂಪು ದಳದವರ ಮೇಲೆ ವಾತ್ಸಲ್ಯ, ಗೌರವ ಜನಿಸಿದವು ಕೆಂಪು ಚೀನದಲ್ಲಿ ಶಾಲೆಗಳನ್ನು ಸ್ಥಾಪಿಸಿ, ವಿದ್ಯಾವಿಹೀನರಿಗೆ ಆದಷ್ಟು ವಿದ್ಯಾದಾನ ಮಾಡಿದರು. ವಿದ್ಯೆಯೇ ಪ್ರಗತಿಯ ಅಡಿಗಲ್ಲು. ಕಮ್ಯುನಿಸ್ಟರು ಜತೆಯಲ್ಲಿ ದೇಶಪ್ರೇಮ, ಶುಚಿತ್ವ ಇವುಗಳನ್ನು ಬೋಧಿಸಿದರು. ಅಫೀಮಿನ ಗುಲಾಮರಾಗಿದ್ದ ಚೀನೀಯರು. ಇದರಿಂದ ಸರಕಾರಕ್ಕೆ ತುಂಬ ಲಾಭವಿದ್ದಿತು ಆದರೆ ಕೆಂಪು ಚೀನದಲ್ಲಿ ಅಫೀಮು ಕಾಣದಾಯಿತು. ಈ ತರಹದ ಸುಧಾರಣೆಗಳಲ್ಲಿ ಸೈನ್ಯದ ಮುಂದಾಳುಗಳೇ ಮಾರ್ಗ ಹಾಕಿ ಕೊಡುತ್ತಿದ್ದರು ಊಟ, ಉಪಚಾರ, ವಾಸ ಈಯೆಲ್ಲದರಲ್ಲೂ ಎಲ್ಲರಿಗೂ ಒಂದೇರೀತಿ--ಸರಳತನ. ಚೂಥೇ ಎಂಬವನು ಕೆಂಪು ಸೈನ್ಯದ ಮುಖ್ಯಾಧಿಕಾರಿ. ಇವನು ಕೆಂಪು ಸೈನ್ಯ ಸೇರುವ ಪೂರ್ವದಲ್ಲಿ ವಿಲಾಸಜೀವಿಯಾಗಿದ್ದನು, ಅಫೀಮಿನ ದಾಸನಾಗಿದ್ದನು ಇಂಥವನು ತನ್ನ ಜೀವನದ ಮಧ್ಯಾಹ್ನ ಕಳೆದಮೇಲೆ ಕೆಂಪು ಸೈನ್ಯ ಸೇರಿದನು. ಅಸಾಧಾರಣ ಮನಃಸ್ಥೈರ್ಯದಿಂದ ತನ್ನ ವಿಲಾಸ ಜೀವನವನ್ನು ತೊಡೆದು ಹಾಕಿದನು; ಅಫೀಮಿನ ಕಪಿಮುಷ್ಟಿಯಿಂದ ಬಿಡಿಸಿಕೊಂಡನು. ಈ ರೀತಿ ಕೆಂಪು ಮುಂದಾಳುಗಳು ಸ್ವತಃ ಮಾರ್ಗದರ್ಶಿಗಳಾಗಿದ್ದರು.

ಅಸಂಬದ್ಧ ತರ್ಕ

ಆದರೆ ಈಗಿನ ಯುದ್ಧಗಳಲ್ಲಿ ಜನಬಲವೇ ಮುಖ್ಯವಲ್ಲ ಅಮೇರಿಕೆಯ ಸೈನ್ಯಸಾಮುಗ್ರಿಗಳ ಸಹಾಯ, ಯುದ್ಧ ವಿದ್ಯಾವಿಶಾರದರ ಸಲಹೆಗಳು ರಾಷ್ಟ್ರೀಯ ಸೈನ್ಯಕ್ಕೆ ಇದ್ದವು ಮತ್ತೆ ಅದರಲ್ಲಿ ಸಂಖ್ಯಾಬಲಕ್ಕೆ ಕೊರತೆಯಿರಲಿಲ್ಲ. ಇಂತಹ ಸಕಲ ಸಿದ್ಧತೆಗಳಿಂದ ಒಳಗೊಂಡ ಸೈನ್ಯದ ವಿರುದ್ಧ ಯುದ್ಧಮಾಡಿ ಜಯಿಸುವುದೆಂದರೆ, ಯುದ್ಧ ಮಾಡುವುದೇ ಸಾಧ್ಯವಾದೀತೇ ಸಾಮಾನ್ಯ ಸೈನ್ಯಗಳಿಗೆ? ಚೀನದ ಬಡಜನರಲ್ಲಿ ಜನಿಸಿದ ಕೆಂಪು ಸೈನ್ಯಕ್ಕೆ ಯುದ್ಧ ಸಾಮಗ್ರಿಗಳು ಎಲ್ಲಿಂದ ಬಂದುವು? ಇದಕ್ಕೆ ಅಸಂಬದ್ಧ, ಅಸಮರ್ಪಕ ಊಹೆಗಳನ್ನು ವಿದೇಶೀಯರು ಕೊಟ್ಟಿದ್ದಾರೆ- ಕೆಂಪು ದಳದವರಿಗೆ ರಶಿಯದವರು ಬೇಕಾದಷ್ಟು ಸಹಾಯ ಒದಗಿಸುತ್ತಾರೆ ಎಂದು. ಆದರೆ ತನಗೆಸಹಾಯಬೇಕಾಗಿದ್ದಾಗ ಎಷ್ಟೋ ಸಾವಿರ ಮೈಲು ದೂರವಿರುವ ಚೀನದ ಕೆಂಪು ಸೈನ್ಯದವರಿಗೆ ರಶಿಯವಿಶೇಷ ಫಲಕಾರಿ ಸಹಾಯವನ್ನು ನೀಡಿತು ಎಂದು ಸೂಚಿಸುವುದು ಕವಿಯ ಪ್ರಪಂಚಕ್ಕೂ ಸಲ್ಲದಮಾತು. ರಶಿಯದಿಂದ ಏನೂ ಸಹಾಯ ಬಂದಿಲ್ಲ. ರಶಿಯಕ್ಕೂ, ಚೀನಕ್ಕೂ ಮಧ್ಯ ಇರುವ ಭೂಮಿ, ಬೆಟ್ಟ, ಕಾಡು, ಶೀತವಲಯ, ಜವುಗು ನೆಲ ಇವುಗಳಿಂದ ಕೂಡಿ ಅಲ್ಲಿ ಪ್ರಯಾಣ, ಸರಬರಾಜು ಇವು ಅತ್ಯಂತ ಕಠಿಣ ಕಾರ್ಯಗಳು ರಶಿಯದವರು ಹೆಚ್ಚೆಂದರೆ ಚೀನದ ಕೆಂಪು ದಳದವರ ವಿಷಯ ತಮ್ಮ ಸಹಾನುಭೂತಿ ವ್ಯಕ್ತಪಡಿಸಿರಬೇಕು. ಚೀನಿ ಕಮ್ಯುನಿಸ್ಟರಿಗೆ ರಶಿಯದ ಸಹಾಯ ಬರುವದೆಂದು ಸಿದ್ಧಮಾಡಲು ಅಮೇರಿಕನ್ನರಿಗೆ ಕೂಡ ಸಾಧ್ಯವಾಗಲಿಲ್ಲ

ಕದನಕೌಶಲ

ಕೆಂಪುಪಡೆಯವರ ಕದನ ಕೌಶಲ್ಯ, ಕೂಟಯುದ್ಧ ಮತ್ತು ಜಾಗರೂಕತನ ಅದ್ವಿತೀಯವಾದುದು. ಯುದ್ಧಕೌಶಲ್ಯದಿಂದ ಕೆಂಪು ಸೈನ್ಯದವರು ರಾಷ್ಟ್ರೀಯ ಸೈನ್ಯದವರಿಂದಲೇ ಆಯುಧಗಳನ್ನು ಕಸಿದುಕೊಂಡರು ಕೂಟಯುದ್ಧಗಳಿಂದ, ಸರಕಾರದ ಸೈನ್ಯದ ಅಡಿಯ ನೆಲವೇ ಇಲ್ಲದಂತೆ ಮಾಡುತ್ತಿದ್ದರು! ರಾಷ್ಟ್ರೀಯ ಸೈನ್ಯದ ಎಣ್ಣೆಯ ಸಂಗ್ರಹಗಳಿಗೆ ಬೆಂಕಿ ಹಚ್ಚುವುದು, ಆಹಾರದ ಸರಬರಾಜಿನ ಮಾರ್ಗವನ್ನು ತುಂಡರಿಸುವುದು, ದುಡ್ಡಿಗಾಗಿ ದುಡಿಯುವ ಆ ಸೈನಿಕರಿಗೆ ಕೆಂಪು ತತ್ವಗಳ ಪ್ರಚಾರಮಾಡುವುದು ಹೀಗೆಲ್ಲ ಮಾಡಿ ಆ ಸೈನ್ಯಗಳನ್ನು ಸೋಲಿಸುತ್ತಿದ್ದರು ಎಷ್ಟೊಸಲ ಸರಕಾರದ ಸೈನ್ಯಗಳು, ಕೆಂಪು ಸೈನ್ಯದವರ ಪ್ರಚಾರದಿಂದಾಗಿ, ಯುದ್ಧ ಮಾಡದೆ ಶತ್ರುಗಳ ಸಂಗಡವನ್ನು ನೇರಾ ಸೇರುತ್ತಿದ್ದವು ಈ ಎಲ್ಲ ಸಂದರ್ಭಗಳಲ್ಲಿ ಎಷ್ಟೋ ಯುದ್ಧ ಸಾಮಗ್ರಿಗಳು ದೊರೆಯುತ್ತಿದ್ದುವು. ಹೆಚ್ಚು ಬಲಶಾಲಿಗಳಾದ ಮೇಲೆ ಕೆಂಪು ಸೈನ್ಯದವರು ಆಯುಧಗಳನ್ನು ತಯಾರಿಸಲು ಕಾರ್ಖಾನೆಗಳನ್ನು ಸ್ಥಾಪಿಸಿದರು ಅಲ್ಲಿ ಸಾಧಾರಣ ತರಗತಿಯ ಯುದ್ಧ ಸಾಮಗ್ರಿಗಳನ್ನು ತಯಾರಿಸುತ್ತಿದ್ದರು

ಸರಕಾರೀ ಸೈನ್ಯದವರು ಮುಂದೆ ಮುಂದೆ ಬಂದಂತೆ ಕೆಂಪು ಸೈನಿಕರು ಹಿಂದೆ ಹಿಂದೆ ಓಡುವುವು, ಸಮಭೂಮಿ ಕಳೆದು ಬೆಟ್ಟಗುಡ್ಡ, ಕಾಡು ಬಂದಾಗ ಆ ಸೈನ್ಯದವರು, "ನಮ್ಮ ಹಿಂದೆ ನಮ್ಮನ್ನು ನೋಡಿರಿ! ಕೆಂಪು ಸೈನಿಕರು ಕಂಗೆಟ್ಟರು, ಇನ್ನು ನಮ್ಮ ಕಾರ್ಯ ನೆರವೇರಿತು." ಎಂದು ಸಂತೋಷದಿಂದ ಬೆಟ್ಟ ಬೆಟ್ಟ ದೇಹದ ಮೇಲೆ ಪ್ರಶ್ನೆ ಇಲ್ಲದಂತೆ ಕಾದಿದ್ದ ಮತ್ತರಾಗಿ ತಿರುಗುವಾಗ ಹಿಂದಿನಿಂದ ಬಂದು ಅವರನ್ನು ಹಠಾತ್ತಾಗಿ ಮುತ್ತಿ ಸೋಲಿಸುವುದು ಅಥವಾ ಚದರಿಸುವುದು, ತಮ್ಮನ್ನು ಹಿಡಿಯಲು ಬಂದರೆ ನೀರಿನೊಳಗಿನ ಮೀನಿನಂತೆ ಜಾರುವುದು, ಹೀಗೆಲ್ಲ ಮಾಡಿ ರಾಷ್ಟ್ರೀಯ ಸೈನ್ಯವನ್ನು ಹಣ್ಣು ಹಣ್ಣು ಮಾಡಿದರು

ಆದ್ದರಿಂದ ಒಂದು ಸಂಗತಿ ನಿಜ [illegible] ಕೆಂಪು ದಳದವರ ವಿಜಯ [illegible] ಮಾರ್ಗದ ಮೇಲೆ ಕಮ್ಯುನಿಸ್ಟರ [illegible] ಎಷ್ಟೇ [illegible] ಪರಿಣಾಮವಾಗಿ [illegible] ವಿಜಯಶಾಲಿಗಳಾಗುತ್ತಾ [illegible] ಹೇಳಬಹುದಾದರೆ ಚಿಯಾಂಗರ ದುರ್ಬಲತೆಯೂ ಇದಕ್ಕೆ ಕಾರಣವೆಂದು ಹೇಳಬಹುದಾಗಿದೆ

ಭಾರತಕ್ಕೆ ರಶಿಯದ ಗೋಧಿ

ಭಾರತವು ೧೯೪೯ ರಲ್ಲಿ ೩೦ ಲಕ್ಷ ಟನ್ ಆಹಾರ ಧಾನ್ಯವನ್ನು ಹೊರದೇಶಗಳಿಂದ ತರಿಸಬೇಕೆಂದಿದೆ. ಇದರಲ್ಲಿ [illegible] ಗೋಧಿಯನ್ನು ಭಾರತಕ್ಕೆ [illegible] ರಶಿಯ ಒಪ್ಪಿಕೊಂಡಿದೆ. ಅದಕ್ಕೆ ಬದಲಾಗಿ ಭಾರತವು ರಶಿಯಕ್ಕೆ ೫೦೦೦ ಟನ್ ಸೆಣಬು, ೫೦೦೦ ಟನ್ ಚಹ, ೧೦೦೦ ಟನ್ [illegible] ಇವನ್ನು ಕೊಟ್ಟು [illegible] ಕಳಿಸಲಿದೆ.

ಇದು ಭಾರತಕ್ಕೂ ರಶಿಯಕ್ಕೂ ಆದ ಎರಡನೆಯ ಆಹಾರ ಧಾನ್ಯ ವಿಷಯದ ಒಪ್ಪಂದ. ಒಂದನೆಯದು ೧೯೪೮ ರಲ್ಲಾಯಿತು. ಅದರನ್ವಯ ಭಾರತಕ್ಕೆ ರಶಿಯ ೫೦,೦೦೦ ಟನ್ ಗೋಧಿ ಕೊಟ್ಟು ಇಲ್ಲಿಂದ ೫೦೦೦ ಟನ್ ಚಹ ಒಯ್ದಿತು. ಈ ವರ್ಷ ಭಾರತಕ್ಕೆ ೪೦೦೦೦ ಟನ್ ಅಮೋನಿಯ ಸಲ್ಫೇಟ್ (ಸರಕಾರೀ ಗೊಬ್ಬರ) ಕಳಿಸಲಿಕ್ಕಿದೆ. ಈ ಬಗ್ಗೆ ಬೇರೆಯದೇ ಆದ ಇನ್ನೊಂದು ಒಪ್ಪಂದ ಮಾಡಿಕೊಳ್ಳಲಾಗಿದೆ. ಇದರಲ್ಲಿ ೨೪ ಟನ್ನನ್ನು ರಿಜರ್ವ ಇಟ್ಟು ಮಿಕ್ಕದ್ದರಲ್ಲಿ ಮದ್ರಾಸಿಗೆ ೮೫೦೦ ಟನ್, ಸಂ. ಪ್ರಾಂತಕ್ಕೆ ೪೫೦೦ ೫೦೦೦ ದಿ [illegible] ೪೫೫೦ ಟನ್ ಮಧ್ಯಪ್ರಾಂತ ಮತ್ತು ವರ್‍ಹಾಡಗಳಿಗೆ ೪೦೦೦, ಪಶ್ಚಿಮ ಬಂಗಾಲಕ್ಕೆ ೩೪೦೦, ಹೈದರಾಬಾದಿಗೆ ೨೦೦೦, ಪೂರ್ವ ಪಂಜಾಬಿಗೆ ೧೫೦೦, ಕೊಡಗಿಗೆ ೫೦೦ ಮತ್ತು ಅಸ್ಸಾಮಿಗೆ ೩೫೦ ಟನ್ ಕೊಡಲಾಗುತ್ತದೆ.

ಡಚ್ಚರ ಮೇಲೆ ಆರ್ಥಿಕ ಬಹಿಷ್ಕಾರ

ಜಗತ್ತಿನ ಅಭಿಪ್ರಾಯವನ್ನು ತಿರಸ್ಕರಿಸಿ ನಡೆದರೆ ದಿಲ್ಲಿಯಲ್ಲಿ ನಡೆದ ಏಶಿಯ ಪರಿಷತ್ತಿನ ಸದಸ್ಯ ರಾಷ್ಟ್ರಗಳೆಲ್ಲ ಡಚ್ಚರ ವಿರುದ್ಧ ಆರ್ಥಿಕ ಬಹಿಷ್ಕಾರ ಹಾಕಲು ಕೇಳಿಕೊಳ್ಳಲಾದೀತು ಎಂದು ಸಂ. ರಾ. ಸಂಘಕ್ಕೆ ಇಂಡೊನೇಶಿಯದ ಪ್ರತಿನಿಧಿಯಾಗಿರುವ ಡಾ. ಸುಮಿತ್ರೋ ಅವರು ಹೇಳಿದರು.

ಅಧ್ಯಕ್ಷರಾದ ಡಾ. ಸೋಯ್ಕರ್ನೋರವರನ್ನು ಸೆರೆಯಿಂದ ಭದ್ರತಾ ಮಂಡಲದ ಆಜ್ಞೆಯ ಮೇರೆಗೆ ಬಿಡುಗಡೆ ಮಾಡದೆ ಮತ್ತೂ ರಿಪಬ್ಲಿಕನ್ನರೊಡನೆ ಯುದ್ಧ ಸಾಗಿಸಿರುವ ಡಚ್ಚರ ಕೃತ್ಯ ಖಂಡನೀಯವೇ ಸರಿ. ಅಲ್ಲದೆ ಭಾರತ, ಪಾಕಿಸ್ತಾನ, ಸಿಂಹಳಗಳಂತೆ ಮಿಕ್ಕ ಏಶಿಯದ ರಾಷ್ಟ್ರಗಳಾದರೂ ಡಚ್ಚರಿಗೆ ವಿಮಾನ, ನೌಕೆ ಮುಂತಾದ ವಾಹನಗಳನ್ನು ಇಂಡೊನೇಶಿಯಕ್ಕೆ ಒಯ್ಯಲು ಪ್ರತಿಬಂಧ ಹಾಕುವಂತೆ ಕೇಳಿಕೊಳ್ಳುವುದು ಡಚ್ಚರು ಹೀಗೇ ಮಾಡುತ್ತ ಹೋದರೆ ಅನಿವಾರ್ಯವಾಗುವುದೆಂದು ಡಾ. ಸುಮಿತ್ರೋ ಸಾರಿದರು.

ಬ್ರಹ್ಮದೇಶದ ಹಿಂದೀ ನಿರಾಶ್ರಿತರು

ಇನ್ಸೀನ್ ಮತ್ತು ಇತರ ಯುದ್ಧಗ್ರಸ್ತ ಪ್ರದೇಶಗಳಿಂದ ಹಿಂದೀ ನಿರಾಶ್ರಿತರು ಮತ್ತು ಇತರರು ರಂಗೂನಿನಲ್ಲಿ ಬಂದು ಸೇರುತ್ತಿದ್ದಾರೆಂದು ಸುದ್ದಿ. ಪಾಂಕಾಂಗ್ ಸೌಥಾಂಪ್ಟನ ಮಾರ್ಗದಲ್ಲಿ ಓಡಾಡುತ್ತಿದ್ದ ವಿಮಾನದಲ್ಲಿ ಪ್ರವಾಸಿಯೊಬ್ಬನು ಕಲಕತ್ತಕ್ಕೆ ಬಂದಿದ್ದು ಈ ಸಮಾಚಾರವನ್ನು ಹೊರಗೆಡಹಿದ. ರಂಗೂನ್ ನಗರದಲ್ಲಿ ಕ್ಷೋಭವಿದ್ದರೂ ಶಾಂತ ಜೀವನ ಸಾಗಿದೆ. ನಿರಾಶ್ರಿತರಿಗೆ ವಸತಿಗಳನ್ನು ಕಲ್ಪಿಸಲು ಬ್ರಹ್ಮೀ ಸರಕಾರದವರು ಸಾಧ್ಯವಿದ್ದುದೆಲ್ಲವನ್ನೂ ಮಾಡುತ್ತಿರುವರು ಎಂದು ಅವನ ಹೇಳಿಕೆ.

ಹಿರಿಯೋಲಗದಲ್ಲಿ ಒಂದು ವಾರ

ಕಳೆದ ಕೆಲ ದಿನಗಳಿಂದ ಹಿರಿಯೋಲಗದಲ್ಲಿ ಸುದೀರ್ಘ ಮತ್ತು ಅರ್ಥಪೂರ್ಣವಾದ ಚರ್ಚೆ ನಡೆಯುತ್ತಿದೆ. ಬ್ಯಾಂಕಿಂಗ್ ಮಸೂದೆ, ಪತ್ನೀಸ್ವಾತಂತ್ರ್ಯ ಮಸೂದೆ, ಮೊದಲಾದವುಗಳ ಮೇಲೆ ದೀರ್ಘ ಚರ್ಚೆ ನಡೆಯಿತು. ವ್ಯಭಿಚಾರಿಯಾದ ಗಂಡನನ್ನು ಬಿಟ್ಟು ಹೋಗುವ ಪತ್ನಿಗೆ ಜೀವನಾಂಶ ಹಕ್ಕನ್ನು ಕೊಡುವ ಮಸೂದೆ ವಿಶೇಷ ಚರ್ಚೆಯಿಲ್ಲದೆ ಪಾಸಾಯಿತು. ಹೈದರಾಬಾದಿನ ನಿಜಾಮರು ಪಾಕಿಸ್ತಾನಕ್ಕೆ ವರ್ಗಾಯಿಸಿದ್ದ ೨೦ ಕೋಟಿ ರೂಪಾಯಿಗಳ ಭಾರತ ಸರಕಾರಿ ಪತ್ರಗಳನ್ನು ತಡೆಹಿಡಿಯುವ ಮಸೂದೆಗೂ ಸಮ್ಮತಿ ದೊರೆಯಿತು.

ಹಿಂದೂ ಕಾಯದೆ ಮಸೂದೆ

ಕಳೆದ ವರ್ಷವೇ ಮಂಡಿಸಲ್ಪಟ್ಟಿದ್ದ ಹಿಂದೂ ಕಾಯದೆಯನ್ನು ಕ್ರೋಡೀಕರಿಸುವ ಮಸೂದೆ ಹಿರಿಯೋಲಗದ [illegible] ಜನ ಪರಿಶೀಲಕರ ಸಮಿತಿಗೊಪ್ಪಿಸಲ್ಪಟ್ಟಿತ್ತು. ಅದರ ವರದಿ ಇದೀಗ ಒಪ್ಪವಾಗಿ ಹಿರಿಯೋಲಗಕ್ಕೆ ಒಪ್ಪಿಸಲ್ಪಟ್ಟಿದ್ದು, ಮಸೂದೆಯು ಅಷ್ಟಿಷ್ಟು ಸ್ವಲ್ಪ ಹಂತ ಮಾರಿಪ್ಪದಿಂದ ಕೂಡಿದಂತೆಯೇ ಕಾಣುತ್ತದೆ. ಏಕೆಂದರೆ [illegible] ಜನರಲ್ಲಿ [illegible] ಜನರು ವರದಿಗೆ ತಮ್ಮ ಭಿನ್ನಾಭಿಪ್ರಾಯಗಳನ್ನು ಜೋಡಿಸಿದ್ದಾರೆ. ಹಿಂದೂ ಅವಿಭಕ್ತ ಕುಟುಂಬ ಪದ್ಧತಿಯನ್ನು ರದ್ದುಗೊಳಿಸಹೊರಟ ಅದರ ಅಂಶಗಳ ಮೇಲೆ ವಿಶೇಷ ಆಕ್ಷೇಪ ಬಂದಂತೆ ಕಾಣುತ್ತದೆ. ಹೊಸ ಹಿರಿಯೋಲಗ ಅರಿಸಿ ಬಂದು ಹೊಸ ಸಂವಿಧಾನ ಅಂಗೀಕರಿಸಿದ ಬಳಿಕವೇ ಈ ಮಸೂದೆ ತರುವುದು ಉಚಿತವೆಂದು ಹಲವರ ಅಭಿಪ್ರಾಯವಿದೆ. ಅಖಿಲ ಭಾರತಕ್ಕೆ ಸಂಬಂಧಿಸಿದ ಪ್ರಶ್ನೆಯಾದುದರಿಂದ ಪ್ರಾಂತಿಕ ಶಾಸನಸಭೆಗಳನ್ನು ವಿಚಾರಿಸಿಕೊಳ್ಳುವದವಶ್ಯವೆಂದೂ ವಾದಿಸಲ್ಪಟ್ಟಿದೆ. ಇದರ ಚರ್ಚೆ ಇನ್ನೂ ಪ್ರಾರಂಭವಾಗಿಲ್ಲ.

ಹೈದರಾಬಾದಿನ ಸೆಕ್ಯೂರಿಟಿಗಳು

ಲಾಯಕಅಲ್ಲಿ ಮಂತ್ರಿಮಂಡಲದ ಕಾಲದಲ್ಲಿ ಹೈದರಾಬಾದದ ಕೈವಶದಲ್ಲಿದ್ದ ೨೦ ಕೋಟಿ ರೂಪಾಯಿಗಳ ಭಾರತ ಸರಕಾರಿ ಪತ್ರಗಳನ್ನು ಪಾಕಿಸ್ತಾನಕ್ಕೆ ವರ್ಗಾಯಿಸಿ, ಅದನ್ನು ಮಾರಿಸಿ ಯುದ್ಧ ಸಾಮಗ್ರಿಗಳನ್ನು ಕೊಳ್ಳುವ ಪ್ರಯತ್ನ ಮಾಡುವದರಿಂದ ಆ ಸೆಕ್ಯೂರಿಟಿಗಳನ್ನು ಸ್ಥಗಿತಗೊಳಿಸುವ ಸುಗ್ರೀವಾಜ್ಞೆ ಹೊರಡಿಸಲ್ಪಟ್ಟಿತ್ತು. ಅದನ್ನೆ ಮಸೂದೆ ರೂಪದಲ್ಲಿ ಸರಕಾರ ಪಕ್ಷದವರು ತಾ. [illegible] ಕ್ಕೆ ಹಿರಿಯೋಲಗದಲ್ಲಿ ಮಂಡಿಸಿದ್ದಕ್ಕೆ ಸಾಮಾನ್ಯವಾಗಿ ಸ್ವಾಗತ ದೊರೆತರೂ ಎಂದಿನಂತೆ ಪ್ರೊ. ಶಹ ಮೊದಲಾದವರು 'ಸಂಸ್ಥಾನ ಖಾತೆಯ ಅಕ್ರಮ ಕೃತ್ಯ'ಗಳ ಬಗ್ಗೆ ತಮ್ಮ ಸಿಟ್ಟನ್ನು ತೋರಪಡಿಸದಿರಲಿಲ್ಲ. ಆದರೆ ಮಸೂದೆ ಅಂಗೀಕರಿಸಲ್ಪಟ್ಟಿತು.

ಬ್ಯಾಂಕಿಂಗ ಮಸೂದೆ

ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳ ಸಾಲ ತೆಗೆಯುವ ಧೋರಣ ಭಿನ್ನಭಿನ್ನವಾಗದು [illegible] ತಾಂತ್ರಿಕ ತೊಡಕುಗಳನ್ನು ನಿವಾರಿಸುವ ಸಲುವಾಗಿ ಅರ್ಥ [illegible] ಡಾ. ಮತ್ತಾಯಿಯವರು ಸರಕಾರಿ ಸಾಲ ತೆಗೆಯುವ ಪತ್ರಗಳ [illegible] ಬ್ಯಾಂಕಿಗೇ ಕೊಡುವ ಮಸೂದೆ (ತಾ. [illegible]) ಮಂಡಿಸಿದ್ದು ವಿಶೇಷ ಚರ್ಚೆಯಿಲ್ಲದೆ ಸ್ವೀಕೃತವಾಯಿತು.

ಬ್ಯಾಂಕಿಂಗ್ ಕಂಪನಿಗಳ ಮಸೂದೆಯ ಬಗ್ಗೆ ಮಾತ್ರ ದೀರ್ಘ ಚರ್ಚೆ ನಡೆದಿದೆ. ಪರಿಶೀಲಕ ಸಮಿತಿಯಿಂದ ಹೊರಬಂದಿರುವ ಈ ಮಸೂದೆಯಲ್ಲಿ ಬ್ಯಾಂಕಿಂಗ್ ಕಂಪನಿಗಳು ಇತರ [illegible] ಕಂಪನಿಗಳ ಶಾಲುಗಳನ್ನು ಕೊಳ್ಳಬಾರದು [illegible] ಪ್ರಮಾಣ, ಬ್ಯಾಂಕಿಂಗ್ ಕಂಪನಿಯ ಸ್ವರೂಪವಾಗಿದ್ದವರು ಇತರ ಕಂಪನಿಗಳ [illegible] ಇಲ್ಲವೇ ಮ್ಯಾನೇಜಿಂಗ್ ಏಜಂಟರಾಗಿದ್ದರೆ ಅಂಥ ಕಂಪನಿಗೆ ಬ್ಯಾಂಕಿಂಗ್ ಕಂಪನಿ ಸಾಲ ಕೊಡಬೇಕಾದರೆ ಪಾಲಿಸಬೇಕಾದ ನಿಯಮಗಳು, ರಿಸರ್ವ್ ಬ್ಯಾಂಕಿನ [illegible] ಮುಖ್ಯವಾಗಿ ಆಕ್ಷೇಪ ಕಲಮುಗಳು ಇವೆ. ಪ್ರೊ. ಶಹಾ, ಶ್ರೀ ಟಿ. ಟಿ. ಕೃಷ್ಣಮಾಚಾರಿ ಮೊದಲಾದ ಅರ್ಥಶಾಸ್ತ್ರಜ್ಞರು ಪರಿಶೀಲಕ ಸ್ವರೂಪದಲ್ಲಿ ಮಂಡಿಸಲ್ಪಟ್ಟಿರುವ ಈ ಮಸೂದೆಯನ್ನು [illegible] ಟೀಕಿಸಿ ತಮ್ಮ ತಮ್ಮ [illegible] ಮಂಡಿಸುತ್ತಿದ್ದಾರೆ. [illegible]

ಪ್ಯಾಕಿಂಗ ವ್ಯವಹಾರದ ಬಿಗಿತಪ್ಪಿ ಸರಕಾರದ ಅಧಿಕಾರವ್ಯಾಪ್ತಿಯಿಂದ ಹಲವು ಹಲವು ಕಾರಣಗಳು [illegible] ಆದ್ದರಿಂದ ತಕ್ಕಮಟ್ಟಿಗೆ ಬಿಗಿ ಮಾಡಲಾಗಬೇಕು. ಕರ್ಣನ ಮೇಲೆ ನಿರ್ಬಂಧ, ಬೆಲೆಗಳ ಏರಿಳಿತ ಇವುಗಳ ಮೇಲೆ ಮುಖ್ಯಮಂತ್ರಿಯವರು "ಪಾರಮಾರ್ಥಿಕ ಅರ್ಥಶಾಸ್ತ್ರದ ಪ್ರೊಫೆಸರರಾಗಿದ್ದಾಗ್ಗೆ ಪ್ರೊ. ಶಹಾರಂತೆಯೇ ಮಾತಾಡುತ್ತಿದ್ದ. ಆದರೆ ವಾಸ್ತವ ಆರ್ಥಿಕ ಪ್ರಪಂಚಕ್ಕೆ ಇಳಿದ ಮೇಲೆ ಈ ತಸ್ವಜ್ಞಾನ ನಿಷ್ಪ್ರಯೋಜಕವೆಂದು ಕಂಡುಕೊಂಡೆ" ಎಂದರು. ಮಸೂದೆಯ ಚರ್ಚೆ ನಡೆಯುತ್ತಲೆ ಇದೆ.

ಪತ್ನೀಸ್ವಾತಂತ್ರ್ಯ

ಹಿಂದೂ ಸಾಮಾಜಿಕ ಸುಧಾರಣೆಯ ಹಲವು ಮಸೂದೆಗಳಲ್ಲಿ ಪ್ರೊ. ಸಿಧ್ವಾ ಅವರ "ಪತ್ನೀಸ್ವಾತಂತ್ರ್ಯ" ಮಸೂದೆಯೊಂದು ವಿಶೇಷ ಚರ್ಚೆಯಿಲ್ಲದೆ ಅಂಗೀಕೃತವಾಯಿತು. ಗಂಡ ಬೇರೆ ಮದುವೆ ಮಾಡಿಕೊಂಡರೆ ಇಲ್ಲವೆ ವ್ಯಭಿಚಾರಿಯಾಗಿದ್ದರೆ ಅವನನ್ನು ಬಿಟ್ಟು ಹೋಗಲು ಹೆಂಡತಿ ಸ್ವತಂತ್ರಳೆಂದೂ ಹಾಗೆ ಹೋದರೂ ಅವಳು ಅಶನಾರ್ಥಕ್ಕೆ ಹಕ್ಕುದಾರಳೆಂದೂ ಮಸೂದೆಯಲ್ಲಿ ವಿಧಿಸಲ್ಪಟ್ಟಿದೆ. ಈವರೆಗೆ ಗಂಡನು ಕಾರಣ ತ್ಯಜಿಸಿದ ಹೆಂಡತಿಗೆ ಮಾತ್ರ ಅಶನಾರ್ಥದ ಹಕ್ಕು ಇತ್ತು.

ಇನ್ನೊಂದು ಸುಧಾರಕ ಮಸೂದೆಯೆಂದರೆ ಡಾ. ಠಾಕೂರದಾಸ ಭಾರ್ಗವರ ಅಂತರ್ಜಾತೀಯ ವಿವಾಹ ಮಸೂದೆ. ಹಿಂದೂ, ಸೀಖ, ಜೈನ ಮುಂತಾದವರೊಳಗೆ ಅಂತರ್ಜಾತೀಯ ವಿವಾಹವಾದರೆ ಅದನ್ನು ಮನ್ನಿಸಬೇಕೆಂಬುದು ಅದರ ಆಶಯ. ಇದು ಜಾತೀಯ ಮತ್ಸರಗಳನ್ನು ಕೊನೆಗೊಳಿಸುವದು ಎಂಬಿತ್ಯಾದಿಯಾಗಿ ಅದಕ್ಕೆ ಸಾಮಾನ್ಯವಾಗಿ ಸ್ವಾಗತ ಸಿಕ್ಕಿತು. ಮಸೂದೆ ಪರಿಶೀಲಕ ಸಮಿತಿಗೊಪ್ಪಿಸಲ್ಪಟ್ಟಿತು. ಹಾಗೆಯೇ ಬಾಲಿಕೆಯರ ಸಮ್ಮತಿ ವಯಸ್ಸನ್ನು ಏರಿಸುವ ಮಸೂದೆಯೇ ಮೊದಲಾದವುಗಳೂ ಪರಿಶೀಲಕರಿಗೊಪ್ಪಿಸಲ್ಪಟ್ಟವು.

ಪ್ರಶ್ನೋತ್ತರ ಕಾಲದಲ್ಲಿ

ಗೋವಾದ ಪ್ರಶ್ನೆ ಕಳೆದವಾರ ಹಿರಿಯೋಲಗದಲ್ಲಿ ತಲೆಯಿತ್ತಿತು. ಗೋವೆಯಲ್ಲಿ ಸೈನಿಕರು ನಿಶ್ಚಿರುವರೆಂದು ನಿಶ್ಚಿತವಾಗಿ ತಿಳಿದುಬರುವದಿಲ್ಲವೆಂದೂ ೧೫೦೦ ಸಶಸ್ತ್ರ ಸೈನಿಕರಿದ್ದು, ದೇಶೀಯರನ್ನು ತೆಗೆದೊಗೆದು ಆಫ್ರಿಕನ್ನರನ್ನು ತಂದು ಇಡಲಾಗುತಿದೆಯಲ್ಲದೆ ಸುಮಾರು ೬೫೦ರ ವರೆಗೆ ಪೋಲೀಸರು ಅಲ್ಲಿರುವರೆಂದು ವರದಿ ಬಂದಿದೆಯೆಂದೂ ಶ್ರೀ ಆರ್. ಕೆ. ಸಿಧ್ವಾ ಅವರಿಗೆ ವಿದೇಶ ಖಾತೆಯ ಉಪಮಂತ್ರಿ ಡಾ. ಕೇಸಕರರು ತಿಳಿಸಿದರು. ಗೋವೆಗೆ ಹಿಂದುಸ್ತಾನ ಸರಕಾರದಿಂದ ಯಾವ ಬೇಡಿಕೆಯೂ ಸಲ್ಲಿಸಿಲ್ಲವೆಂದೂ ಹೇಳಲಾಯಿತು. ಇನ್ನೊಂದು ದಿನದ ಪ್ರಶ್ನೋತ್ತರದಲ್ಲಿ ಭಾರತದ ಪೋರ್ತುಗೀಜ ವಸಾಹತುಗಳ ಭವಿತವ್ಯದ ವಿಷಯ ಮಾತುಕತೆಯಲ್ಲಿ ಪ್ರಗತಿಯಾಗಿಲ್ಲ. ಆದರೆ ಈಗ ಭಾರತ ಪೋರ್ತುಗಾಲಗಳನಡುವೆ ರಾಯಭಾರ ಸಂಬಂಧ ಪುಂಟಾಗಿರುವದರಿಂದ ಈ ಮಾತುಕತೆಗಳಲ್ಲಿ ಪ್ರಗತಿಯುಂಟಾಗಬಹುದೆಂದು ಆಶಿಸಲಾಯಿತು.

ನಿರಾಶ್ರಿತರ ಪರಿಹಾರ ಮತ್ತು ಪುನರ್ವಸತಿಗಾಗಿ ಈ ವರೆಗೆ ೨೧,೬೬,೦೦,೦೦೦ ರೂಪಾಯಿ ವೆಚ್ಚವಾಯಿತೆಂದು ಪುನರ್ವಸತಿ ಮಂತ್ರಿಗಳಿಂದ ತಿಳಿಯಿತು.

ಆರ್. ಎಸ್. ಎಸ್. ಮತ್ತು ಸರಕಾರಿ ನೌಕರರು

ಆರ್. ಎಸ್. ಎಸ್. ಚಳವಳಿಯಲ್ಲಿ ಭಾಗವಹಿಸಿದ ಬಗ್ಗೆ ಕೇಂದ್ರ ಸರಕಾರದ ನೌಕರರಲ್ಲಿ [illegible] ಜನರು ಬಂಧಿಸಲ್ಪಟ್ಟು [illegible] ಜನರಿಗೆ ಶಿಕ್ಷೆಯಾಗಿದೆ. ಅದರಲ್ಲಿ [illegible] ಜನರನ್ನು ನೌಕರಿಯಿಂದ ತೆಗೆದುಹಾಕಲಾಗಿದೆಯೆಂದು ಸರದಾರ ಪಟೇಲರು ತಿಳಿಸಿದರು. ಆರ್. ಎಸ್. ಎಸ್. ವಿದ್ಯಾರ್ಥಿಗಳನ್ನು ಹಾಗು ಅಲ್ಪವಯಸ್ಕರನ್ನು ಬಿಡುಗಡೆ ಮಾಡಲಾದರೂ ಉಳಿದವರನ್ನು ಒಮ್ಮೆಲೆ ಬಿಡುಗಡೆ ಮಾಡಲಾಗುವದಿಲ್ಲೆಂದು ಇನ್ನೊಂದು ದಿನ ತಿಳಿಸಲ್ಪಟ್ಟಿತು.

ಗವರ್ನರರ ಸಂಬಳ

೧೯೪೭ ಆಗಸ್ಟ ೧೫ ರಿಂದೀಚೆಗೆ ಪ್ರಾಂತಿಕ ಗವರ್ನರರು ವರ್ಷಕ್ಕೆ ೬೬ ಸಾವಿರ ರೂಪಾಯಿ ಸಂಬಳ ಮತ್ತು ಕೆಲವೊಂದು ಭತ್ಯೆಗಳನ್ನು ಪಡೆಯಲು ಅರ್ಹರಿರುವರು. ತತ್ಪೂರ್ವದಲ್ಲಿ ಮದ್ರಾಸ, ಮುಂಬಯಿ, ಸಂಯುಕ್ತಪ್ರಾಂತ, ಬಂಗಾಲ ಗವರ್ನರರು ರೂ. ೧,೨೦,೦೦೦; ಪಂಜಾಬ, ಬಿಹಾರಗಳವರು ರೂ. ೧,೦೦,೦೦೦ ಮಧ್ಯಪ್ರಾಂತದವರು ರೂ. ೭೨,೦೦೦ ಹಾಗು

ಆಹಾರ ಸೀದಾ

[illegible] ಬಗ್ಗೆ ಕೆಲ ವಿವರಗಳನ್ನು ಕೊಡುತ್ತ ಹೇಳಿದ್ದು: ೧೯೪೭-೪೮ ರಲ್ಲಿ ದೇಶದಲ್ಲಿನ ಮುಖ್ಯ ಧಾನ್ಯಗಳ ಉತ್ಪಾದನೆ ೪೨೬ ಲಕ್ಷ ಟನ್. ೩೮ ಲಕ್ಷ ಟನ್ ಧಾನ್ಯವನ್ನು ರೈತರಿಂದ ಎತ್ತಬೇಕೆಂದು ಪ್ರಯತ್ನಿಸಿ ೨೫ ಲಕ್ಷ ಟನ್ ಎತ್ತಲಾಯಿತು. ೧೯೪೮ ರಲ್ಲಿ ಪರದೇಶಗಳಿಂದ ೧೨೯ ಕೋಟಿ ೫೯ ಲಕ್ಷ ರೂಪಾಯಿ ವೆಚ್ಚದಿಂದ ೨೨,೪೪,೦೦೦ ಟನ್ ಧಾನ್ಯಗಳನ್ನು ತರಿಸಿ ಜನರಿಗೆ ಅಗ್ಗವಾಗಿ ಅದನ್ನು ಪೂರೈಸಲು ೧೭ ಕೋಟಿ ೧೨ ಲಕ್ಷ ರೂಪಾಯಿ ಸರಕಾರಕ್ಕೆ ಹಾನಿಯಾಯಿತು. ೧೯೪೭ ಅಕ್ಟೋಬರದೊಳಗೆ ದೇಶದ ಎಲ್ಲ ಭಾಗಗಳಲ್ಲಿಯೂ ಸೀದಾ ಪ್ರಾರಂಭಿಸಲಾಗುವದು. ಮಧ್ಯಪ್ರಾಂತ ಸರಕಾರ ಮಾತ್ರ ಸೀದಾ ಬೇಕಿಲ್ಲವೆಂದು ನಿರ್ಧರಿಸಿದ್ದು ಆ ಬಗ್ಗೆ ಅದನ್ನು ಒಪ್ಪಿಸಲಾಗುವದಿಲ್ಲ. ಕಸ್ತಲೆಯನ್ನು ಮೂಲ ಸೀದಾದಲ್ಲಿ ಸೇರಿಸುವ ವಿಚಾರವಿದೆ.

ಸಕ್ಕರೆಯ ಉತ್ಪಾದನೆಯನ್ನು ೧೦ ರಿಂದ ೧೬ ಲಕ್ಷ ಟನ್ನಿಗೇರಿಸುವ ಸಲುವಾಗಿ ೪೦೦-೧೦೦೦ ಟನ್ ಉತ್ಪಾದನ ಶಕ್ತಿಯುಳ್ಳ ಹೊಸ ೪೫ ಕಾರಖಾನೆಗಳನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ.

ಬೆಂಗಳೂರಿನ ಹಿಂದುಸ್ತಾನ ವಿಮಾನ ಕಾರಖಾನೆಯಲ್ಲಿ ೧೯೪೮ ಜುಲೈ ಕೊನೆಯ ವರೆಗೆ ೧೪೮ ವಿಮಾನಗಳನ್ನು ಜೋಡಿಸಿದ್ದು ಈಗ ೫೦ ಪ್ರೆಂಟೈಸ್ ಟ್ರೇನರ ವಿಮಾನಗಳನ್ನು ತಯಾರಿಸಲು ಪ್ರಾರಂಭವಾಗಿದೆ. ೧೯೪೯-೫೦ ರಲ್ಲಿ ಇಂಥ ೪೭ ವಿಮಾನಗಳು ಸಿದ್ಧವಾಗಬಹುದು.

ಅಮೇರಿಕೆಯೊಡನೆ ಮಿತ್ರತ್ವದ ಒಪ್ಪಂದ ಮಾಡಿಕೊಳ್ಳುವ ವಿಚಾರ ನಡೆದಿದೆಯೆಂದೂ ಆ ಬಗ್ಗೆ ಅಮೇರಿಕನ್ ವಿದೇಶ ಖಾತೆಯವರು ಸಿದ್ಧಪಡಿಸಿ ಕಳಿಸಿದ ಕರಡಿನಲ್ಲಿ ಕೆಲ ವಿಷಯ

—೧೪ ನೆಯ ಪುಟಕ್ಕೆ

೧೯೪೮—೪೯ ರಲ್ಲಿ

ರೇಲ್ವೆ ಖಾತೆಗೆ ೧೫.೮೩ ಕೋಟಿ ಉಳಿಕೆ

೧೯೪೯—೫೦ ರಲ್ಲಿ ೯.೪೪ ಕೋಟಿ ಉಳಿಕೆಯ ನಿರೀಕ್ಷೆ

ರೇಲ್ವೆ ಮಂತ್ರಿ ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರರು ಹಿರಿಯೋಲಗದಲ್ಲಿ ತಾ. ೧೫ ಕ್ಕೆ ಮಂಡಿಸಿದ ರೇಲ್ವೇ ಮುಂಗಡ ಪತ್ರಿಕೆಯನ್ವಯ ೧೯೪೯—೫೦ ನೇ ವರ್ಷದಲ್ಲಿ ರೇಲ್ವೆ ಖಾತೆಗೆ ೨೧೦ ಕೋಟಿ ರೂಪಾಯಿ ಉತ್ಪನ್ನ, ೧೭೬.೧೨ ಕೋಟಿ ಆಡಳಿತ ವೆಚ್ಚ ಬರಬಹುದು ಮತ್ತು ಉಳಿದ ವೆಚ್ಚ ಹೋಗಲಾಗಿ ೯.೪೪ ಕೋಟಿ ಉಳಿತಾಯವಾಗಬಹುದೆಂದು ಅಂದಾಜು ಮಾಡಲ್ಪಟ್ಟಿದೆ.

೧೯೪೮-೪೯ ರ, ಅಂದರೆ ನಡೆಯುತಿರುವ, ವರ್ಷದಲ್ಲಿ ನಿರೀಕ್ಷೆಗಿಂತ ೧೪.೫ ಕೋಟಿ ಹೆಚ್ಚು ಉತ್ಪನ್ನವಾಗಿ ಅದು ೨೦೪.೫ ಕೋಟಿಯಷ್ಟಾಗುವದು, ಆಡಳಿತ ವೆಚ್ಚ ೧೬೪.೭೧ ಕೋಟಿ ಆಗುವದು. ಮತ್ತು ೧೫.೮೩ ಕೋಟಿ ನಿಕ್ಕಿ ಉಳಿತಾಯವಾಗುವದೆಂದು ತಿಳಿಸಲಾಯಿತು.

ರೇಲ್ವೆ ದರಗಳಲ್ಲಿ ಏನೂ ಹೆಚ್ಚುಕಡಿಮೆ ಮಾಡಲಾಗುವದಿಲ್ಲ.

ಪ್ರವಾಸ ಮತ್ತು ಸರಕು ಸಾಗಾಟದ ದರಗಳನ್ನು ಏರಿಸಿದುದು ಉತ್ಪನ್ನ ಹೆಚ್ಚಲು ಮುಖ್ಯ ಕಾರಣ. ಆದರೆ ಆದಾಯದಂತೆ ವೆಚ್ಚವೂ ೮.೯೩ ಕೋಟಿ ಹೆಚ್ಚಾಗಿದೆ. ಮುರಸ್ತಿ, ಉರವಲು, ಧಾನ್ಯದಂಗಡಿ ಸೌಕರ್ಯವೇ ಮೊದಲಾದವುಗಳಿಂದ ಖರ್ಚು ಏರಿದೆ. ೧೯೪೯-೫೦ ರಲ್ಲಾದರೂ ಹೆಚ್ಚಬಹುದಾದ ಉತ್ಪನ್ನ ಹೆಚ್ಚಾದ ಖರ್ಚುಗಳಿಗೆ ಸರಿಹೋಗಬಹುದು.

೧೯೪೭-೪೮ ರ ಉಳಿಕೆಯಲ್ಲಿ ೭.೪೪ ಕೋಟಿ ಕೋಟಿ ಸರಕಾರದ ಬೊಕ್ಕಸಕ್ಕೆ ಸೇರುವದು. ೪೪ ಲಕ್ಷ ರೂ. ಸುಧಾರಣೆಯ ನಿಧಿಗೂ ೭.೬೫ ಕೋಟಿ ಸವಕಳಿ ನಿಧಿಗೂ ಜಮಾ ಮಾಡಲ್ಪಡುವದು. ಮುಂದಿನ ವರ್ಷದ ಆದಾಯದಲ್ಲಿ ೪.೭೨ ಕೋಟಿ ಸಾಮಾನ್ಯ ಆದಾಯಕ್ಕೂ ೪.೭೨ ಕೋಟಿ ರೇಲ್ವೆ ಆದಾಯಕ್ಕೂ ಸೇರುವದು.

ಸುಧಾರಣೆಗಳು

೧೯೪೮—೪೯ ರಲ್ಲಿ ಸವಕಳಿ ನಿಧಿಯಿಂದ ೨೭.೯ ಕೋಟಿ ತೆಗೆದು ಬಂಗಾಲ-ಅಸಾಮ ರೇಲ್ವೆ ಹಾಕಿಸುವದು, ರೇಲ್ವೆ ಎಂಜಿನ ಕಾರಖಾನೆ ಸ್ಥಾಪಿಸುವದು, ಅನಂದ—ಖಾರೆಜೂಡಿ, ಬಂಬಿ—ಖಾರಬೇಡಾ ರೇಲ್ವೆ ವಿಸ್ತರಿಸುವದು, ಮಾರ್ಗಗಳನ್ನು ಹಾಕಿಸುವದೇ ಮೊದಲಾದ ಯೋಜನೆಗಳಿಗಾಗಿ ವೆಚ್ಚ ಮಾಡಲಾಗುತ್ತಿದೆ. ಮುಂದಿನ ವರ್ಷ ೩೩.೮೭ ಕೋಟಿಯನ್ನು ರೇಲ್ವೆ ಎಂಜಿನ್ ತರಿಸುವದೇ ಮೊದಲಾದ ಸುಧಾರಣೆಗಳಿಗಾಗಿ ಸವಕಳಿ ನಿಧಿಯಿಂದ ತೆಗೆದುಕೊಳ್ಳಲಾಗುವದು. ಇದಲ್ಲದೆ ಬಂಡವಲ ಸ್ವರೂಪದ ವೆಚ್ಚಕ್ಕೆ ೨೮.೬೦ ಕೋಟಿ, ಪ್ರವಾಸಿಕರ ಸೌಕರ್ಯಗಳಿಗಾಗಿ ೧.೫ ಕೋಟಿ ಹಾಗು ಸವಕಳಿಗಾಗಿ ೩೩.೮೬ ಕೋಟಿಗಳನ್ನೂ ಸುಧಾರಣೆಗಳಿಗಾಗಿ ವೆಚ್ಚಮಾಡಲಾಗುವದು.

ಎಂಜಿನು, ಡಬ್ಬಿ ಮೊದಲಾದವುಗಳ ಬಗ್ಗೆ ವಿವರಗಳನ್ನು ಕೊಡುತ್ತ ರೇಲ್ವೆ ಮಂತ್ರಿಗಳು ಇದೆ ಮಾರ್ಚ ಕೊನೆಗೆ ೧೫೧೧ ರೇಲ್ವೆ ಎಂಜಿನುಗಳ ಆಯುಷ್ಯಾವಧಿ ಮುಗಿಯುವದರಿಂದ ಹೊಸ ಎಂಜಿನುಗಳನ್ನು ತರಿಸದೆ ವಿಧಿಯಿಲ್ಲ. ಅದರಿಂದ ೬೫೩ ಎಂಜಿನ್ನುಗಳನ್ನು ತರಿಸಲು ನಿರ್ಧಾರವಾಗಿದೆಯೆಂದರು ಈಗಾಗಲೆ ೧೯ ಬ್ರಾಡಗೇಜ, ೩೩ ಮೀಟರಗೇಜ ಎಂಜಿನುಗಳು ಬಂದಿದ್ದು ೧೨೦ ಬ್ರಾಡಗೇಜ ಎಂಜಿನುಗಳು ಮಾರ್ಚ ತಿಂಗಳಲ್ಲಿ ಬರುವವು. ಮುಂದಿನ ವರ್ಷಾವಧಿಯಲ್ಲಿ ೩೩೭ ಬ್ರಾಡಗೇಜ, ೧೭೦ ಮೀಟರಗೇಜ ಎಂಜಿನುಗಳು ಬರಬಹುದು. ಆದರೆ ಹೀಗೆ ಎಂಜಿನುಗಳಿಗೆ ಪರದೇಶಗಳ ಮೇಲೆ ಕೈಯೂರಿ ನಿಲ್ಲುವದು ಶ್ರೇಯಸ್ಕರವಲ್ಲವೆಂದು ಚಿತ್ತರಂಜನದಲ್ಲಿ ಲೋಕೋಮೋಟಿವ್ (ಎಂಜಿನ್) ಕಾರಖಾನೆಯನ್ನು ವಿದೇಶೀ ತಾಂತ್ರಿಕರ ಸಹಾಯದಿಂದ ಸ್ಥಾಪಿಸುವ ನಿರ್ಧಾರವಾಗಿದೆ. ಅಲ್ಲಿ ವರ್ಷಕ್ಕೆ ೧೨೦ ಎಂಜಿನ್ ಮತ್ತು ೫೦ ಬಾಯ್ಲರುಗಳು ಸಿದ್ಧವಾಗಬಹುದು. ಇದು ಸ್ಥಾಪಿತವಾದರೂ ४००-५०० ಎಂಜಿನ್ನುಗಳನ್ನು ವಿದೇಶಗಳಿಂದ ಆಯಾತ ಮಾಡಬೇಕಾಗುವದು.

೧೯೪೮ ರಲ್ಲಿ ರೇಲ್ವೆ ವರ್ಕಶಾಪುಗಳಲ್ಲಿ ೧೭೨ ಪ್ರವಾಸಿಕರ ಡಬ್ಬಿಗಳು ತಯಾರಾದವು. ೨೭೨ ಡಬ್ಬಿಗಳು ತಯಾರಾಗಲಿವೆ. ೨೫೧ ಡಬ್ಬಿಗಳು ಸೈನ್ಯಖಾತೆಯಿಂದ ತಿರುಗಿ ಬಂದಿವೆ. ೧೦೦ ಉಕ್ಕಿನ ಹಗುರಾದ ಡಬ್ಬಿಗಳು ಬೆಂಗಳೂರಿನ ವಿಮಾನ ಕಂಪನಿಯಲ್ಲಿ ತಯಾರಾಗಿವೆ. ರೇಲ್ವೆ ಡಬ್ಬಿ ತಯಾರಿಸಲು ದೊಡ್ಡ ಕಾರಖಾನೆ ತೆರೆಯುವ ವಿಚಾರವಿದೆ.

ಉಕ್ಕಿನ ಕೊರತೆಯ ಮೂಲಕ ವ್ಯಾಗೀನು ಕಟ್ಟುವ ಕೆಲಸದಲ್ಲಿ ಸಾಕಷ್ಟು ಪ್ರಗತಿಯಾಗಿಲ್ಲ. ೧೯೪೮ ರಲ್ಲಿ ೨೯೪೯ ಹೊಸ ವ್ಯಾಗೀನುಗಳನ್ನು ಬಳಕೆಯಲ್ಲಿ ತರಲಾಗಿದೆ. ೧೯೪೯ ಕೊನೆಯೊಳಗಾಗಿ ಮತ್ತೆ ೧೮೫೫೮ ಮತ್ತು ೧೯೪೯ ಕೊನೆಯೊಳಗಾಗಿ ೩೬೦೦ ವ್ಯಾಗೀನುಗಳು ಸಾರಿಗೆಗೆ ಸಿಗುವವು. ಆಹಾರ ಧಾನ್ಯ ಮೊದಲಾದವುಗಳ ಸಾಗಾಟಕ್ಕೆ ತಡೆಯಾಗದಂತೆ ಸಾಮಾನು ತರಿಸಿಕೊಂಡ ವ್ಯಾಪಾರಿಗಳು ಬೇಗನೆ ವ್ಯಾಗೀನುಗಳನ್ನು ಖಾಲಿ ಮಾಡಿಕೊಡಬೇಕೆಂದು ಕೋರಲಾಗಿದೆ.

೩೦೦ ಮೈಲಿಗಿಂತ ಹೆಚ್ಚಿನ ಪ್ರಯಾಣ ಮಾಡುವವರಿಗೆ ೩ ನೆ ವರ್ಗದಲ್ಲಿ ಸ್ಥಳ ಕಾದಿಡುವದು, ವೇಟಿಂಗ್ ರೂಮಿನಲ್ಲಿ ವಿದ್ಯುತ್ತಿನ ಪಂಖಾ ಹಾಕುವದೇ ಮೊದಲಾದ ಸುಧಾರಣೆಗಳನ್ನು ಕೈಕೊಳ್ಳಲಾಗುವದೆಂದು ರೇಲ್ವೆ ಮಂತ್ರಿಗಳು ತಿಳಿಯಪಡಿಸಿದರು.

ಕೂಲಿಕಾರರ ಬೇಡಿಕೆಗಳನ್ನು ಕುರಿತು ಮಾತಾಡುತ್ತ ಗೋಪಾಲಸ್ವಾಮಿ ಅಯ್ಯಂಗಾರರು ಕೇಂದ್ರ ಸಂಬಳ ಸಮಿತಿಯ ಶಿಫಾರಸುಗಳು, ರಾಜಾಧ್ಯಕ್ಷ ಅವಾರ್ಡ್, ಈಚೆಗೆ ಸಂಬಳ ಏರಿಸಿದ್ದು ಮೊದಲಾದ ಕಾರಣಗಳಿಂದ ರೇಲ್ವೆಗಳ ಮೇಲೆ ಅತಿಶಯ ಭಾರಬಿದ್ದಿದು ಇನ್ನೂ ಅದನ್ನು ಹೆಚ್ಚಿಸುವದೆಂದರೆ ಜನರ ಮೇಲೆ ಹೊಸ ಕರಭಾರ ಹಾಕಿದಂತೆಯೆ. ಮೇಲಾಗಿ ಉತ್ಪಾದನೆ ಹೆಚ್ಚದಲ್ಲದೆ ಬರಿ ಸಂಬಳ ಹೆಚ್ಚಿಸಿಕೊಂಡದ್ದರಿಂದ ಏನೂ ಫಲವಿಲ್ಲ. ಸಂಪು ಹೂಡುವದರಿಂದ ಇಡೀ ದೇಶದ ಆರ್ಥಿಕ ಪರಿಸ್ಥಿತಿ ಕೆಡುವ ಕಾರಣ, ಕೂಲಿಕಾರರಿಗೂ ಅದರಿಂದ ಧಕ್ಕೆಯಾಗದಿರದು. ಅದರಿಂದ ರಾಜಕೀಯ ಉದ್ದೇಶಗಳನ್ನಿಟ್ಟುಕೊಂಡು ಸಂಪಿಗೆ ಪ್ರೋತ್ಸಾಹ ಕೊಡುವವರ ಮಾತಿಗೆ ಮರುಳಾಗದೆ ಕೂಲಿಕಾರರು ದೇಶದ ಹಿತದಲ್ಲಿ ಭಾಗಿಗಳಾಗಬೇಕೆಂದು ರೇಲ್ವೆ ಮಂತ್ರಿಗಳು ಬಿನ್ನವಿಸಿದರು.

ಏಶಿಯದ ಆರ್ಥಿಕ ಸಹಕಾರದ ಯೋಜನೆ

ಉದ್ದಿಮೆಗಳ ಪರಸ್ಪರ ಪೂರಕತೆ ಮತ್ತು ಜನಸಂಖ್ಯೆಯ ವರ್ಗಾವರ್ಗಿಯ ಮೂಲಕ ಅನೇಕ ಸಮಸ್ಯೆಗಳನ್ನು ನೀಗಿಸಬಹುದು

ಜಗತ್ತಿನ ಜನಸಂಖ್ಯೆ ವಿಶ್ವಂಭರೆಯಾದ ಪೃಥ್ವಿಗೂ ದುರ್ಭರವಾಗಿದೆಯೆಂಬ ಕೂಗು ಎದ್ದಿದೆ. ಅದರಲ್ಲಿಯೂ ಪೂರ್ವದೇಶಗಳಲ್ಲಿ ಜನಸಂಖ್ಯೆಯ ಒತ್ತಡ ಅಸಹನೀಯವಾಗಿದೆ. ಭಾರತ ಮತ್ತು ಚೀನ ಇವೆರಡೇ ದೇಶಗಳಲ್ಲಿ ಜಗತ್ತಿನ ಜನಸಂಖ್ಯೆಯ ಮೂರರಲ್ಲೊಂದಂಶಕ್ಕಿಂತಲೂ ಹೆಚ್ಚು ಜನ ಕಿಕ್ಕಿರಿದಿದೆ. ಇದರಿಂದ ಈ ದೇಶಗಳಲ್ಲಿ ಬಡತನವೇ ಬೀಡುಬಿಟ್ಟಂತಾಗಿ ಬಿಟ್ಟಿದೆ.

ಪೂರ್ವದೇಶಗಳ ಪ್ರಜೋತ್ಪಾದನ ಪ್ರಮಾಣ ಹೆಚ್ಚಾಗಿ ಈ ಗತಿ ಬಂದಿದೆಯೆಂದು ಹೇಳುವವರ ಮಾತಿನಲ್ಲಿ ಅರ್ಧಕ್ಕಿಂತಲೂ ಕಡಿಮೆ ಸತ್ಯವಿದೆ. ಯುರೋಪಿಯನ್ ಜನಾಂಗಗಳು ೧೭೭೦ ರಲ್ಲಿ ೧೫ ಕೋಟಿಯಷ್ಟಿದ್ದವುಗಳು ಇಂದು ೭೩ ಕೋಟಿಯಾಗಿವೆ. ಈ ಲೆಕ್ಕದಿಂದ ಭಾರತದ ಜನಸಂಖ್ಯೆ ೧೫ ಕೋಟಿಯಿಂದ ೩೯ ಕೋಟಿಗೇರಿದುದು ಹೆಚ್ಚಲ್ಲ. ಆದರೆ ಪೂರ್ವದೇಶಗಳ ತಪ್ಪು ಬೇರೆಯೆ ಇದೆ. ಯಾಂತ್ರಿಕ ಕ್ರಾಂತಿಯಲ್ಲಿಯೂ ಆಕ್ರಮಣಶೀಲತೆಯಲ್ಲಿಯೂ ಹಿಂದೆ ಬಿದ್ದುದರಿಂದಲೇ ನಮಗೆ ಈ ಬವಣೆ ಬಂದಿದೆ. ನಾವು ಪರಿಸ್ಥಿತಿಯನ್ನು ಕಂಡುಕೊಂಡು ಎಚ್ಚರಾಗುವ ಮೊದಲೇ, ಅಂದರೆ ಈ ಶತಕದ ಆರಂಭದಷ್ಟು ಹೊತ್ತಿಗೆ ಜಗತ್ತಿನಲ್ಲಿ ನೂರಕ್ಕೆಪ್ಪತ್ತೆರಡರಷ್ಟಿದ್ದು, ಜಗತ್ತಿನ ವಿಸ್ತಾರದಲ್ಲಿ ಕೇವಲ ನೂರಕ್ಕೆ ೧೫ ರಷ್ಟೆ ಭೂಮಿಯಲ್ಲಿ ಮೂಲವಾಸ್ತವ್ಯವಿದ್ದ ಬಿಳಿಯರು ಜಗತ್ತಿನ ವಿಸ್ತಾರದ ನೂರಕ್ಕೆ ೬೬ ಅಂಶವನ್ನು ಹಸ್ತಗತ ಮಾಡಿಕೊಂಡು ಜಗತ್ತಿನ ಜನಸಂಖ್ಯೆಯಲ್ಲಿ ನೂರಕ್ಕೆ ೫೫ ರಷ್ಟು ಅಂಶದ ಹಣೆಬರಹವನ್ನು ತಿದ್ದಿ ಬರೆಯಬಲ್ಲವರಾದರು. ಈ ಪ್ರಕಾರ ಜಗತ್ತಿನ ಜನಸಂಖ್ಯೆಯಲ್ಲಿ ಅರ್ಧಕ್ಕಿಂತಲೂ ಹೆಚ್ಚಾದ(೧೧೦ ಕೋಟಿ) ಪೌರಸ್ತ್ಯ ಜನಾಂಗಗಳು ಕೇವಲ ನೂರಕ್ಕೆ ೧೫ ರಷ್ಟು ಪ್ರದೇಶದಲ್ಲಿ ಕಿಕ್ಕಿರಿಯಬೇಕಾಯಿತು.

ಬಿಳಿಯರ ಗುತ್ತಿಗೆ

ತಾವು ವಶಪಡಿಸಿಕೊಂಡ ಭೂಪ್ರದೇಶಗಳಲ್ಲಿ ತಮಗೆ ಎಲ್ಲೆಲ್ಲಿ ಹವೆ ಮಾನಿಸುತ್ತದೆಯೊ ಅಲ್ಲೆಲ್ಲ ಬಿಳಿಯರು ತಮ್ಮ ನೆಲೆವೀಡುಗಳನ್ನು ಕಲ್ಪಿಸಿಕೊಂಡಿದ್ದಾರೆ. ನಿಜವಾಗಿ ಈ ವಿಷಯದಲ್ಲಿ ಅವರು ತಮ್ಮ ಮಾರ್ಗವನ್ನು ಸರಳವಾಗಿ ಮಾಡಿಕೊಳ್ಳಲು ಆ ಪ್ರದೇಶಗಳಲ್ಲಿನ ಮೂಲನಿವಾಸಿಗಳನ್ನು ಅಕ್ಷರಶಃ ನಿರ್ನಾಮ ಮಾಡಲು ಕೂಡ ಹಿಂಜರಿದಿಲ್ಲ. ಹೀಗೆ ಅಮೇರಿಕೆಯ ಮಹಾ ಖಂಡಗಳೆರಡು, ಆಫ್ರಿಕೆಯ ದೊಡ್ಡ ತುಂಡು ಮತ್ತು ಆಸ್ಟ್ರೇಲಿಯದ ಇಡಿ ಖಂಡವನ್ನು ಅವರು ಬಿಳಿಯ ಪೀಳಿಗೆಗಳ ವಿಸ್ತರಣಕ್ಕಾಗಿಯೆ ಮೀಸಲಿಟ್ಟುಕೊಂಡಿದ್ದಾರೆ. ಆ ಪ್ರದೇಶಗಳಲ್ಲಿ ವಿಸ್ತಾರವಾದ ಭಾಗಗಳು ತೆರವಾಗಿದ್ದರೂ ಅವು ಬಿಳಿಯರನ್ನಲ್ಲದೆ "ಬಣ್ಣದ ಜನ"ರನ್ನು ಬರಮಾಡಿಕೊಳ್ಳುವದಿಲ್ಲ.

ಆದರೆ ಇಂದು ಬಿಳಿಯರು ಮೂಲನಿವಾಸಿಗಳನ್ನು ಪತ್ತಿಕ್ಕಿ ವಾಸ್ತವ್ಯಗಳನ್ನು ಕಟ್ಟಿಕೊಂಡಿರುವ ಪ್ರದೇಶಗಳನ್ನು ಕಪಿಮುಷ್ಟಿಯಿಂದ ಇನ್ನೂ ಹಿಡಿದುಕೊಂಡೇ ಇರಬಹುದಾದರೂ ಪೌರಸ್ತ್ಯ ಜನಾಂಗಗಳ ಮೇಲೆ ಅವರ ಅಧಿಕಾರ- ರಾಜಕೀಯ ಮತ್ತು ಆರ್ಥಿಕ ಇವೆರಡೂ-ಅಸ್ತಕಾಲವನ್ನು ಸಮೀಪಿಸಿದೆಯೆಂದು ಹೇಳಲು ಯಾವ ಅಭ್ಯಂತರವೂ ಇಲ್ಲ. ಏಶಿಯದ ಜನರು ಎಚ್ಚೆತ್ತು ಈಗ ಸಾಮ್ರಾಜ್ಯವಾದದ ನೊಗವನ್ನು ಕಿತ್ತೊಗೆಯುತ್ತಿದ್ದು ತಮ್ಮ ಅಸಹನೀಯ ದಾರಿದ್ರ್ಯದ ಸ್ಥಿತಿಯನ್ನು ಸುಧಾರಿಸಿಕೊಳ್ಳಲು ಪ್ರವೃತ್ತರಾಗಿದ್ದಾರೆ.

ಸಹಕಾರದಿಂದ ಆರ್ಥಿಕ ಪ್ರಗತಿ

ಆದರೆ ಔದ್ಯಮಿಕ ಕ್ರಾಂತಿಯಲ್ಲಿ ಹಿಂದುಳಿದು ಪರಕೀಯರ ಶೋಷಣೆಯಿಂದ ಅಸ್ಥಿಚರ್ಮ ಮಾತ್ರ ಉಳಿಯುವಷ್ಟು ಸೊರಗಿ ಹೋಗಿರುವದು, ಈಗ ಈ ದೇಶಗಳ ಆರ್ಥಿಕ ಉನ್ನತಿಗೆ ಅನನುಕೂಲವಾಗಿ ಕುಳಿತಿದೆ. ಈ ದೇಶಗಳಲ್ಲಿ ಕಚ್ಚಾ ಸಾಮುಗ್ರಿಗಳಿಗೆ ಯಾವ ಕೊರತೆಯೂ ಇಲ್ಲದಿದ್ದರೂ ಒಕ್ಕಲತನವೇ ನೂರಕ್ಕೆ ೬೦-೮೦ ಜನರ ಜೀವನವೃತ್ತಿಯಾಗಿದೆ. ಕೇವಲ ಕಚ್ಚಾ ಸಾಮುಗ್ರಿಗಳನ್ನು ಉತ್ಪಾದಿಸುವ ರಾಷ್ಟ್ರಗಳಿಗೆ ಆಗಾಗ್ಗೆ ಆರ್ಥಿಕ ಮುಗ್ಗಟ್ಟುಗಳನ್ನು ಎದುರಿಸುವ ಪ್ರಸಂಗವೂ ಬರುತ್ತದೆ. ಇಂಥ ಸ್ಥಿತಿಯಲ್ಲಿ ಏಶಿಯದ ಆರ್ಥಿಕ ಉದ್ಧಾರವಾಗಬೇಕಾದರೆ ಈ ರಾಷ್ಟ್ರಗಳೆಲ್ಲವೂ ಪರಸ್ಪರ ಸಹಕಾರದಿಂದ ಉದ್ಯಮಗಳನ್ನು ಕಟ್ಟಬೇಕಾಗುತ್ತದೆ.

ಈ ದೃಷ್ಟಿಯಿಂದ ಆಗ್ನೇಯ ಏಶಿಯದ ರಾಷ್ಟ್ರಗಳೆಲ್ಲವೂ ಒಂದು ಪ್ರದೇಶವೆಂದು ಔದ್ಯಮಿಕ ಸಹಕಾರದ ಯೋಜನೆಯನ್ನು ಮಾಡಿಕೊಳ್ಳುವದು ಶ್ರೇಯಸ್ಕರ. ಮೂಲಭೂತ ಯಾಂತ್ರಿಕ ಸಾಮುಗ್ರಿಗಳನ್ನು ಪಾಶ್ಚಾತ್ಯರಿಂದ ದೊರಕಿಸಿಕೊಂಡು ಪರಸ್ಪರ ಪೂರಕವಾಗಿ ಉದ್ದಿಮೆಗಳನ್ನು ಕಟ್ಟುವದರಿಂದ ಪೇಟೆಗಳಲ್ಲಿ ಸಲ್ಲದ ಮೇಲಾಟಗಳಿಗೆ ಎಡೆಯಿಲ್ಲದೆ ಆರ್ಥಿಕ ಬೆಳವಣಿಗೆ ಆರೋಗ್ಯಶಾಲಿಯಾಗುವದು. ಈ ಬಗ್ಗೆ ಏಶಿಯನ್ ರಾಷ್ಟ್ರಗಳು ಒಂದು ಸಂಯುಕ್ತ ಸಮಿತಿಯನ್ನು ಏರ್ಪಡಿಸಿಕೊಳ್ಳಬೇಕೆಂದು ಪ್ರೊ. ರಾಧಾಕಮಲ ಮುಕರ್ಜಿಯವರು ಸೂಚಿಸಿದ್ದಾರೆ. ಈ ಸಮಿತಿಯ ಮೂಲಕ ಪೌರಸ್ತ್ಯ ರಾಷ್ಟ್ರಗಳು ಪರಸ್ಪರ ವ್ಯಾಪಾರಿ ಒಪ್ಪಂದದಿಂದ ಸಿದ್ಧಸಾಮುಗ್ರಿಗಳ ಪೇಟೆಗಳನ್ನು ತಂತಮ್ಮೊಳಗೆ ಹಂಚಿಕೊಳ್ಳಬಹುದು. ಕಚ್ಚಾ ಸಾಮುಗ್ರಿಗಳ ಉತ್ಪಾದನೆಯನ್ನೂ ಕಚ್ಚಾ ಮತ್ತು ಪಕ್ಕಾ ಮಾಲುಗಳ ವಿನಿಮಯ ದರಗಳನ್ನೂ ಆ ಸಮಿತಿಯೆ ನಿಯಂತ್ರಿಸಬಹುದು.

ತ್ರಿಭುಜ ಆರ್ಥಿಕ ಸಂಬಂಧ

ಜಗತ್ತಿನೊಡನೆ ಈ ಎಲ್ಲ ರಾಷ್ಟ್ರಗಳು "ತ್ರಿಭುಜ" ಆರ್ಥಿಕ ಸಂಬಂಧವನ್ನಿಟ್ಟುಕೊಳ್ಳಬಹುದು. ಭಾರತ, ಚೀನ, ಬ್ರಹ್ಮದೇಶಗಳಂಥ ಮುಂದುವರಿದ ರಾಜ್ಯಗಳೊಂದು ಭುಜ, ಇಂಡೊನೇಶಿಯ, ಇಂಡೋಚೀನಗಳಂಥ ಹಿಂದುಳಿದ ಕಚ್ಚಾ ಸಾಮುಗ್ರಿಗಳ ಉತ್ಪಾದಕ ಪ್ರದೇಶಗಳೊಂದು ಭುಜ ಮತ್ತು ಪಾಶ್ಚಾತ್ಯ ರಾಷ್ಟ್ರಗಳು ಇನ್ನೊಂದು ಭುಜ. ಭಾರತವೇ ಈ ತ್ರಿಭುಜ ವ್ಯಾಪಾರಕ್ಕೆ ಕೇಂದ್ರ ಸ್ಥಾನವಾಗಬೇಕು. ಇಲ್ಲಿನ ಅಗ್ಗದರದ ಪಕ್ಕಾ ಮಾಲುಗಳೇ ಆಗ್ನೇಯ ಏಶಿಯದ ಬಡ ದೇಶಗಳಿಗೆ ಪಾಶ್ಚಾತ್ಯರ ಉತ್ತಮವರ್ಗದ ತುಟ್ಟಿಯಾದ ಮಾಲುಗಳಿಗಿಂತ ಹೆಚ್ಚು ಅಪೇಕ್ಷಣೀಯವಾದಾವು. ಅದಲ್ಲದೆ ಜನಸಂಖ್ಯೆಯಿಂದ ತುಂಬಿ ತುಳುಕುವ ಭಾರತದಲ್ಲಿ ಇತರರ ಕಚ್ಚಾ ಮತ್ತು ಪಕ್ಕಾ ಮಾಲುಗಳಿಗೆ ಚೆನ್ನಾಗಿ ಬೇಡಿಕೆಯಿರುವದರಿಂದ ಸಹಕಾರ ಬಲದಿಂದ ಈ ಪ್ರದೇಶದ ಉದ್ದಿಮೆಗಳು ಪುನಃ ಪುನಃ ಬರುವ ಆರ್ಥಿಕ ಮುಗ್ಗಟ್ಟುಗಳನ್ನು ಯಶಸ್ವಿಯಾಗಿ ತಡೆಯಬಲ್ಲವು.

ಜನಸಂಖ್ಯೆಯ ಹಂಚಿಕೆ

ಆಹಾರದ ಕೊರತೆಯ ಈ ಕಾಲದಲ್ಲಿ ಔದ್ಯಮಿಕ ಸಹಕಾರಕ್ಕಿಂತಲೂ ಹೆಚ್ಚು ಆವಶ್ಯಕವಾದುದೆಂದರೆ ಕೃಷಿ ಸಹಕಾರ. ಏಶಿಯವನ್ನು ನೋಡಿದರೆ ನಮಗೇನು ಕಾಣುತ್ತದೆ? ಭಾರತ, ಚೀನ ಮತ್ತು ಜಪಾನ ಇವು ಅತಿರೇಕ ಜನಸಂಖ್ಯೆಯ ಭಾರದಿಂದ ಮುಗ್ಗರಿಸುತ್ತಿದ್ದರೆ, ಆಗ್ನೇಯ ಏಶಿಯದ ಉಳಿದ ಭಾಗಗಳಲ್ಲಿ ವಿಸ್ತಾರವಾದ ಪ್ರದೇಶಗಳು ಬಯಲು ಬಿದ್ದಿವೆ. ಈ ಓಗ್ಗಾಲಿಯನ್ನು ಸಮತೋಲನಕ್ಕೆ ತರಲು ಜನಸಂಖ್ಯೆಯ ಹಬ್ಬುಗೆಯನ್ನು ಹೆಚ್ಚು ಸಮಂಜಸವಾಗಿ ಸಂಚಿದರೆ ಉಭಯ ಪಕ್ಷಗಳಿಗೂ ಹಿತವೇ ಹೊರತು ಅಹಿತವಿಲ್ಲ.

ಅನ್ಯದೇಶಗಳಲ್ಲಿ ವಾಸ್ತವ್ಯ ಮಾಡುವದು ಏಶಿಯದ ಜನರಿಗೆ ಹೊಸ ಅನುಭವವೇನೂ ಅಲ್ಲ. ಕ್ರಿಸ್ತಪೂರ್ವದಿಂದಲೂ ಭಾರತದ ಜನರು ಹಡಗು ಕಟ್ಟಿಕೊಂಡು ಆಗ್ನೇಯ ಏಶಿಯದ ದ್ವೀಪ ದ್ವೀಪಕಲ್ಪಗಳಲ್ಲಿ ನೆಲೆಯೂರಿದ್ದಕ್ಕೆ ಬೇಕಾದಷ್ಟು ಐತಿಹಾಸಿಕ ನಿದರ್ಶನಗಳಿವೆ. ಚೀನೀಯರೂ ಉತ್ತರ-ದಕ್ಷಿಣ ದಿಕ್ಕುಗಳಲ್ಲಿ ಹಬ್ಬಿಕೊಂಡರು. ಹೀಗೆ ದಕ್ಷಿಣದಲ್ಲಿ ೬೦ ಲಕ್ಷ ಭಾರತೀಯರೂ ೧೩೦ ಲಕ್ಷ ಚೀನೀಯರೂ ವಲಸೆ ಬಂದು ಬ್ರಹ್ಮ, ಇಂಡೋಚೀನ, ಇಂಡೊನೇಶಿಯಗಳಲ್ಲಿ ನೆಲಸಿದ್ದರೆ ಉತ್ತರದ ಮಂಚೂರಿಯದಲ್ಲಿ ೪೦೦ ಲಕ್ಷ ಚೀನೀಯರು ನೆಲಸಿದ್ದಾರೆ.

ಈ ಪ್ರಕಾರ, ದೊಡ್ಡ ದೊಡ್ಡ ಭೂಖಂಡಗಳನ್ನು ಯುರೋಪಿಯನ್ ವಲಸೆಗಾರರು ಗುತ್ತಿಗೆ ಹಿಡಿದುಬಿಟ್ಟಿದ್ದರೂ ಏಶಿಯದ ಜನಸಂಖ್ಯೆಯ ಒತ್ತಡವನ್ನು ನಿವಾರಿಸಲು ಇನ್ನೂ ಸಾಕಷ್ಟು ಪ್ರದೇಶ ಇದ್ದೇ ಇದೆ. ಪ್ರೊ. ಮುಕರ್ಜಿಯವರು ಕೊಟ್ಟ ಕೆಲ ಅಂಕೆಸಂಖ್ಯೆಗಳು ಈ ಮಾತನ್ನು ತಿಳಿದುಕೊಳ್ಳಲು ಸಹಾಯವಾಗಬಹುದು.

ಜನಸಂಖ್ಯೆಯ ನಿಬಿಡತೆ

ನಿಬಿಡ ರಾಜ್ಯಗಳು	ತಲಾ ಕೃಷಿಭೂಮಿ (ಎಕರೆ)	ಪ್ರ. ಚೌ. ಮೈಲಿಗೆ ಜನಸಂಖ್ಯೆ
ಭಾರತ	೦.೮	೨೦೬
ಚೀನ	೦.೪	೧೦೪
ಜಪಾನ	೧.೩೬	೪೫೩
ವಿರಲರಾಜ್ಯಗಳು		
ಬ್ರಹ್ಮ	೧.೩	೫೬
ಮಲಯ	೧.೦	೬೧
ಥಾಯಿಲಂಡ	–	೫೮
ಇಂಡೋಚೀನ	೨.೬	೬೧
ಫಿಲಿಪ್ಪೈನ್ಸ	೧.೮	೧೦೪
ಇಂಡೊನೇಶಿಯಾ (ಜಾವಾ ಸುಮಾತ್ರಾ ಬಿಟ್ಟು)	೭.೩	೨೮
ಸಿಂಹಳ	೦.೪	೨೦೪

ಮೇಲಿನ ಅಂಕೆ ಸಂಖ್ಯೆಗಳನ್ನು ನೋಡಿದರೆ ನಿಬಿಡ ಜನಸಂಖ್ಯೆಯುಳ್ಳ ಪ್ರದೇಶಗಳಿಂದ ವಿರಲ ಜನಸಂಖ್ಯೆಯ ಪ್ರದೇಶಗಳಿಗೆ ವಲಸೆ ಹೋಗಲು ಎಷ್ಟು ಅವಕಾಶವಿದೆಯೆಂದು ಹೊಳೆಯಬಹುದು. ಈ ಕೆಳಗಿನ ಅಂಕೆ ಸಂಖ್ಯೆಗಳಿಂದ ಯಾವ ಯಾವ ದೇಶಗಳಲ್ಲಿ ಎಷ್ಟೆಷ್ಟು ಜನರು ವಲಸೆ ಬಂದು ನೆಲೆಯೂರಬಹುದೆಂದು ಗೊತ್ತಾಗುವದು:

	ಇರುವ ಜನಸಂಖ್ಯೆ (ಲಕ್ಷ)	ಇರಬಹುದಾದ ಜನಸಂಖ್ಯೆ (ಲಕ್ಷ)	ವಲಸೆ ಬರಲು ಅವಕಾಶ (ಲಕ್ಷ)
ಬ್ರಹ್ಮ	೧೬೮	೧೦೦೦	೮೩೨
ಮಲಯ	೫೧	೫೦೦	೪೪೯
ಥಾಯಿಲಂಡ	೧೪೪	೧೦೦೦	೮೫೬
ಇಂಡೋಚೀನ	೨೩೦	೧೦೦೦	೭೭೦
ಫಿಲಿಪ್ಪೈನ್ಸ	೧೬೦	೧೦೦೦	೮೪೦
ಇಂಡೊನೇಶಿಯಾ	೧೯೦	೧೫೦೦	೧೩೧೦
ಸಿಂಹಳ	೬೬	೧೦೦	೩೪

ವಿರಲ ದೇಶಗಳಲ್ಲಿ ಕನಿಷ್ಠ ೫೦ ಕೋಟಿ ಜನರಿಗೆ ಬಂದು ನೆಲೆಯೂರಲು ಅವಕಾಶವಿದೆಯೆಂದು ಇದರಿಂದ ತಿಳಿಯುತ್ತದೆ. ಇದನ್ನು ಯೋಗ್ಯ ರೀತಿಯಿಂದ ಉಪಯೋಗಿಸಿಕೊಳ್ಳುವ ಔದಾರ್ಯವೂ ವಿಶಾಲ ಬುದ್ಧಿಯೂ ಆಗ್ನೇಯ ಏಶಿಯದ ರಾಜ್ಯಗಳಲ್ಲಿದ್ದರೆ ಈಗಿನ ಜನಸಂಖ್ಯೆಯ ಒತ್ತಡವನ್ನು ನಿವಾರಿಸಿಯೂ ಮತ್ತೆ ಹೆಚ್ಚಳಕ್ಕೆ ಅವಕಾಶವುಂಟೆಂದು ಅರ್ಥವಾಗುವದಿಲ್ಲವೆ? ಕೃಷಿಯೋಗ್ಯವಾದ ಭೂಮಿ ಈ ದೇಶಗಳಲ್ಲಿ ಕೋಟಿಗಟ್ಟಲೆ ಎಕರೆ ಪಡಬಿದ್ದಿದೆ. ಉದಾಹರಣೆಗಾಗಿ ಬ್ರಹ್ಮದೇಶದಲ್ಲಿ ೪ ಕೋಟಿ, ಫಿಲಿಪ್ಪೈನ್ಸ್‌ನಲ್ಲಿ ೨ ಕೋಟಿ ಇಂಡೋನೇಶಿಯದಲ್ಲಿ ೧೪ ಕೋಟಿ ಎಕರೆ ಇದೆ. ಇವುಗಳಲ್ಲದೆ ಶಾಂತ ಸಾಗರದ ನ್ಯೂಜಿನಿಯ, ನ್ಯೂ ಕೆಲಿಡೋನಿಯಾ ಮೊದಲಾದ ದ್ವೀಪಗಳಲ್ಲಿ ಲಕ್ಷಗಟ್ಟಲೆ ಜನರನ್ನು ನೆಲೆಗೊಳಿಸಬಹುದು. ನ್ಯೂಗಿನಿಯಂಥ ಒಂದು ಮಹಾದ್ವೀಪವೇ ಹೆಚ್ಚು ಕಡಿಮೆ ನಿರ್ಜನವಾಗಿ ಬಿದ್ದಿದೆ. ಯೋಗ್ಯ ಮಲೇರಿಯಾ ನಿಯಂತ್ರಣ ಯೋಜನೆಗಳೂ ಹೊಸ ಮಾದರಿಯ ಕೃಷಿ ಉಪಕರಣಗಳೂ ಉಪಯೋಗಿಸಲ್ಪಟ್ಟರೆ ಈ ಬಂಜರು ಭೂಮಿಯಲ್ಲಿ ಬಹುಭಾಗವನ್ನು ಹಸನುಮಾಡಿ ಅದನ್ನು ಸಂಪನ್ನ ರೈತರ ನೆಲೆವೀಡುಗಳನ್ನಾಗಿ ಮಾಡಲು ಅವಕಾಶವುಂಟು.

ಕೆಲ ಆತಂಕಗಳು

ಹಿಂದಿನ ಅನುಭವದಿಂದ ಈ ಭಾಗದಲ್ಲಿ ಅನುಕೂಲವಾಗಿಯೆ ಇದೆ. ಭಾರತ ಮತ್ತು ಮಧ್ಯ ಆಫ್ರಿಕೆಯಲ್ಲಿ ಆಗಲಿ ಬ್ರಹ್ಮ, [illegible] ಆರ್ಥಿಕ ಮುಗ್ಗಟ್ಟಿನಿಂದಾಗಿ ಕೆಲ ಭಾರತೀಯರು ಮತ್ತು ಚೀನೀಯರು [illegible] ಬ್ರಹ್ಮ, ಸಿಂಹಳ, ಇಂಡೋಚೀನ, ಥಾಯ್‌ಲಂಡ್ ಮೊದಲಾದ ದೇಶಗಳಲ್ಲಿ ವಿದೇಶೀ ವಲಸೆಗಾರರ ಮೇಲೆ ಮೂಲ ನಿವಾಸಿಗಳು ಸಂಶಕ್ತರಾಗಿದ್ದಾರೆ. ಮುಖ್ಯವಾಗಿ ಆಸ್ತಿಯ ರಾಷ್ಟ್ರೀಯತೆಯ ಏರಾಟಕ್ಕೆ ಬಂದು ವಿದೇಶೀಯರನ್ನು ಸಂಶಯದೃಷ್ಟಿಯಿಂದ ನೋಡುವದೂ ಅವರ ವಲಸೆಯನ್ನು ತಡೆಯುವ ಕಾಯದೆಗಳನ್ನು ಮಾಡುವದೂ ಪ್ರಾರಂಭವಾಗಿದೆ. ಬ್ರಹ್ಮದೇಶದಲ್ಲಿ ಹೊಸ ಭೂಧಾರಣೆಯ ಕಾಯದೆಗಳು ಭಾರತೀಯರ ಮತ್ತು ಚೀನೀಯರ ಬಂಡವಲವನ್ನು ಮುಳುಗಿಸಿಬಿಟ್ಟಿವೆ. ಈಗ ಪ್ರಾರಂಭಿಸಲ್ಪಟ್ಟ ವಲಸೆಯ ನಿಯಂತ್ರಣವೂ ಅನ್ಯಾಯದ್ದಾಗಿದೆ.

ರಾಜಕೀಯ ಅಧಿಕಾರದ ಪ್ರಶ್ನೆಯು ಇಂಥ ಪಕ್ಷಪಾತದ ತಳದಲ್ಲಿರುತ್ತದೆಯೆಂದು ಬೇರೆ ಹೇಳಬೇಕಾಗಿಲ್ಲ. ಇದಕ್ಕೆ ಒಂದು ಉಪಾಯವನ್ನು ಸೂಚಿಸಬಹುದು. ವಲಸೆ ಹೋಗಿ ನೆಲಸಿದವರು ಮಾತೃಭೂಮಿಯ ಕಡೆ ರಾಜಕೀಯ ಆಧಾರಕ್ಕೆ ಕೈನೀಡುವದು ಕಡಿಮೆಯಾಗಬೇಕು. ವಲಸೆಗಾರರು ನಿಜವಾಗಿ ಉಭಯಹಿತಕ್ಕೆ ಸಾಧಕರಾಗಿದ್ದರೆ ಮೂಲ ನಿವಾಸಿಗಳು ಅವರಲ್ಲಿ ವಿಶ್ವಾಸವಿಡಲು ಬೇಗನೆ ಕಲಿಯುವರು. ಆಗ ಪರಸ್ಪರರೊಳಗೆ ಹೊಕ್ಕು ಬಳಕೆಯಾಗತೊಡಗುವದು. ಇದನ್ನು ವಿವಾಹ ಬಂಧನಗಳಿಂದಲೂ ಬಿಗಿಯಾಗಿ ಮಾಡಲು ಪ್ರೋತ್ಸಾಹ ದೊರೆತರೆ ಮೂಲ ನಿವಾಸಿಗಳಿಗೂ ಇತರರಿಗೂ ವೈಮನಸ್ಯಕ್ಕೆ ಅವಕಾಶವೇ ಉಳಿಯದು. ಇಂಥ ಪುನರ್ವಸನದ ಯೋಜನೆಯನ್ನು ಆಗ್ನೇಯ ಏಶಿಯದ ರಾಜ್ಯಗಳೆಲ್ಲವೂ ಒಟ್ಟುಗೂಡಿ ಮಾಡಿದರೆ ಏಶಿಯದ ಆಹಾರ ಸಮಸ್ಯೆ ಮಾತ್ರವಲ್ಲ, ಆರ್ಥಿಕ ಸಮಸ್ಯೆಯೂ ಬೇಗನೆ ಬಿಡುವದರಲ್ಲಿ ಸಂದೇಹವಿಲ್ಲ.

ಗೃಹೋದ್ಯಮ

ಗೆರಟೆ (ಪರಟೆ)ಯ ಗುಂಡಿಗಳು

(ಶ್ರೀ ಸಂಜೀವ ದೇವರಾವ್ ಕೇಳಕರ ಗೋಕರ್ಣ)

ನಿಮ್ಮಲ್ಲಿ ಒಳ್ಳೇ ಚೂರಿ, ಸುತ್ತಿಗೆ, ಅರ್ಗ (ಅರ) (File) ಕೆಲವು ಉಪ್ಪಿನ ಕಾಗದ (Sand paper-Fine & Rough) ದ ತುಣುಕುಗಳು, ತಾಮ್ರದ ತಂತಿಯ ತುಂಡು (ಸಾಧಾರಣ ½ ಇಂಚು ದಪ್ಪ) ಹಾಗೂ ಬೆಂಗಿನ ಗೆರಟೆಯ ತುಣುಕುಗಳು ಇಷ್ಟು ಇದ್ದರೆ ಅವುಗಳಿಂದ ನೀವು ಏನೂ ಅನುಭವವಿಲ್ಲದೇ ಚಮತ್ಕಾರವಾದ ಕೆಲವು ಕೆಲಸಗಳನ್ನು ಮಾಡಬಲ್ಲಿರಿ.

ಪ್ರಥಮದಲ್ಲಿ ಅರ್ಗದಿಂದ (ಗರಗಸವಿದ್ದಲ್ಲಿ ಅತಿ ಸುಲಭದಿಂದ) ಗೆರಟೆಯ (ಪರಟೆ) ನಾಲ್ಕು ತುಂಡುಗಳನ್ನು (ಅಥವಾ ನಿಮಗೆ ಬೇಕಾದಷ್ಟು) ಬೇಕಾದ ಆಳತೆಯಲ್ಲಿ ಹಾಗೂ ಆಕಾರದಲ್ಲಿ ಕತ್ತರಿಸಿರಿ. (ಕೆಲವು ಆಕಾರಗಳನ್ನು ಚಿತ್ರದಲ್ಲಿ ತೋರಿಸಿದೆ). ನಿಮಗೆ ಕೈಗುಂಡಿ (ಅಕ್ಕಿ ೬) (A Pair of cuff links) ಗಳ ಜೋಡಿಗಳು ಬೇಕಾದರೆ, ನಿಮಗೆ ಸೇರಿದಂಥ ಆಕಾರದಲ್ಲಿ ಸ್ವಲ್ಪ ದೊಡ್ಡ ಪ್ರಮಾಣವಾಗಿ ಗೆರಟೆಯ ತುಂಡುಗಳನ್ನು ಕತ್ತರಿಸತಕ್ಕದ್ದು.

ಕತ್ತರಿಸಿದ ನಂತರ ಒಂದು ಎರಡು ಅಥವಾ ನಿಮಗೆ ತೂತಿಯುಲು ಬೇಕಾಗುವಷ್ಟು) ತೂತನ್ನು ಮಧ್ಯದಲ್ಲಿ ಒಳ್ಳೇ ಚೂಪಾದ ಚೂರಿಯಿಂದ (ಅ. ೧) (ಅಥವಾ ಡ್ರಿಲ್ Drill ಇದ್ದಪಕ್ಷಕ್ಕೆ ಅದರಿಂದ) ತೆಗೆಯತಕ್ಕದ್ದು. ಆದರೆ ಆ ತೂತು ತಾರಿನ (ತಂತಿಯ) ವ್ಯಾಸಕ್ಕಿಂತ ಕಡಿಮೆ ಇರತಕ್ಕದ್ದು. ಇದೆಲ್ಲ ಆದ ಮೇಲೆ ಪಾಲಿಶ್ ಮಾಡಲು ಅನುಕೂಲವಾಗುವಂತೆ ಅವುಗಳನ್ನು ಉಪ್ಪಿನ ಕಾಗದದಿಂದ (Rough Sand Paper) ತಿಕ್ಕತಕ್ಕದ್ದು.

ಅವುಗಳನ್ನು ಹೊಲಿಗೆಗೆ ಉಪಯೋಗಿಸುವದಿದ್ದರೆ ನೊದಲು ಉಪ್ಪಿನ ಕಾಗದದಿಂದ (Fine Sand paper) ತಿಕ್ಕಿ ಆ ಮೇಲೆ ಪಾಲಿಶ್ ಮಾಡಿ ಉಪಯೋಗಿಸತಕ್ಕದ್ದು. ನಿಮಗೆ ಬೇಕಾದಾಗ ಅವುಗಳನ್ನು ಅನಾಯಾಸವಾಗಿ ತೆಗೆದು ಬೇರೆ ಕೋಟಿಗೆ ಹಾಕಲು ಬರುವಂತೆ ಗುಂಡಿಯ ಜೋಡಿಗಳನ್ನು (A Set of Ring Buttons) ಮಾಡುವ ಮನಸ್ಸಿದ್ದರೆ ಅದರ ಸಲುವಾಗಿ ⅛ ಅಥವಾ ¼ ಇಂಚು ಉದ್ದವಾದ ತಾಮ್ರದ ತಂತಿಯ ತುಂಡನ್ನು ತೆಗೆದುಕೊಂಡು, ಸುತ್ತಿಗೆಯ ಸಹಾಯದಿಂದ ಅದರ ಒಂದು ತುದಿಯನ್ನು, ಸೂಳಿಯ ಮೇಲೆ ಸುತ್ತಿ ಒಂದು ಕೊಂಡಿ (loop) ಮಾಡಿರಿ. (ಅ. ೨) ಅದರ ಇನ್ನೊಂದು ತುದಿಯನ್ನು ಅರ್ಗದಿಂದ ತಿಕ್ಕಿ ತುದಿಯ ವ್ಯಾಸವನ್ನು ಸ್ವಲ್ಪ ಕಡಿಮೆ (ನೀವು ಮಾಡಿದ ಗುಂಡಿಯ ತೂತಿನಲ್ಲಿ ಹೋಗಿ ಸ್ವಲ್ಪ ಮೇಲೆ ಬರುವಷ್ಟು) ಮಾಡಿರಿ (ಅ. ೩). ಹೀಗೆ ಮಾಡಿದ ನಂತರ ಗುಂಡಿಯ ಮೇಲೆ ಬಂದಿರುವ ತಂತಿಯ ತುದಿಯನ್ನು ಸುತ್ತಿಗೆಯಿಂದ ಮೆಲ್ಲನೆ ಬಡಿದ ಮೇಲೆ ತಂತಿಯು ಗುಂಡಿಯ ಸಂಗಡ ರಿವೆಟ್ಟು (Rivettu) ಆಗುವದು (ಅ. ೪). ಇದೋ! ಜೋಡಿಯ ಒಂದು ಗುಂಡಿಯು ತಯಾರಾಯಿತು.


ನೀವು ಅಂಗಿ ಗುಂಡಿಗಳನ್ನು (Studs) ಮಾಡಲು ಅಪೇಕ್ಷಿಸಿದರೆ, ನೊದಲು ಮಾಡಿದಂತೆ (ಕೊಂಡಿ) ಮಾಡದೇ ತಂತಿಯ ಎರಡೂ ತುದಿಗಳ ವ್ಯಾಸವನ್ನು ಕಡಿಮೆ ಮಾಡಿ ಒಂದು ತುದಿಗೆ ಮುಂಭಾಗಕ್ಕೆ ಬರುವಂಥ ಗೆರಟೆಯ ತುಂಡನ್ನು, ಮತ್ತೊಂದು ತುದಿಯಲ್ಲಿ ಇದಕ್ಕಿಂತಲೂ ಸ್ವಲ್ಪ ದೊಡ್ಡ ತುಂಡನ್ನು ರಿವೆಟು (Rivet) ಮಾಡತಕ್ಕದ್ದು.

ನೀವು ಅದನ್ನು ಕೊನೆಗಾಣಿಸಲಿಕ್ಕೆ ಹಾಗೂ ಪಾಲಿಶ್ ಮಾಡಲು ಉಪ್ಪಿನ ಕಾಗದದಿಂದ (Fine Sand paper) ಚೆನ್ನಾಗಿ ತಿಕ್ಕಿ ಜೇನು ಮೇಣದಿಂದ ಪಾಲಿಶ್ ಮಾಡತಕ್ಕದ್ದು. ಜೇನು ಮೇಣದ ಬದಲಾಗಿ ಅವುಗಳಿಗೆ ಬೂಟು ಪಾಲಿಶಿನಿಂದ ತಿಕ್ಕಿದರೆಂತಲೂ ಒಳ್ಳೇ ಹೊಳಪು ಬರುವದು.

ನಿಮ್ಮ ಪ್ರಥಮ ಪ್ರಯತ್ನವು ನಿಮ್ಮ ಮನಸ್ಸಿನಂತೆ ಆಗದೇ ಇರಬಹುದು. ಮತ್ತು ಕೆಲವು ಗೆರಟೆಯ ತುಂಡುಗಳನ್ನು ತಯಾರಿಸುವಾಗ ಒಡೆಯಲೂಬಹುದು. ಆದರೂ ನೀವು ನಿರಾಶರಾಗಬೇಡಿರಿ. ಪ್ರತಿಯೊಬ್ಬರಿಗೂ ತಮ್ಮ ಮೊದಲನೇ ಪ್ರಯತ್ನದಿಂದ ಪೂರ್ಣ ಮೆಚ್ಚಿಗೆಯು ಆಗುವದಂತಿಲ್ಲ. ಆದರೆ ನಿಮ್ಮ ಅನುಭವವು ಹೆಚ್ಚಾದಂತೆ ನೀವು ನಿಪುಣರಾಗುವಿರಲ್ಲದೆ ಈ ಕೈಗಾರಿಕೆಯಲ್ಲಿ ನಿಮ್ಮದೇ ಒಂದು ವಿಶಿಷ್ಟ ತಂತ್ರವನ್ನು ರೂಪಿಸುವಿರಿ. ಇನ್ನು ಮುಂದಿನ ಪ್ರಯತ್ನಗಳಲ್ಲಿ ನೀವು ತಾಮ್ರದ ತಂತಿಯ ಬದಲು ಬೆಳ್ಳಿ ಬಂಗಾರದ ತಂತಿಯನ್ನು ಉಪಯೋಗಿಸಲು ಆತುರರಾಗಬಹುದು.

ಮೇಲೆ ಹೇಳಿದ್ದಕ್ಕೆ ಸಂಬಂಧವಿಲ್ಲದಿದ್ದರೂ ಸ್ವಕೃತ ವಸ್ತುಗಳ ಉಡುಗರೆಗಳಿಗೆ ಸಿಕ್ಕುವಷ್ಟು ಮಹತ್ವವು ಹೆಚ್ಚಿನ ಬೆಲೆಯಿಂದ ಕೊಂಡುಕೊಂಡ ವಸ್ತುಗಳಿಗೆ ಇಲ್ಲವೆಂಬದು ಬೇರೆ ಹೇಳಬೇಕಾಗಿಲ್ಲ.

ಮೇಲಿನ ಕೆಲಸಕ್ಕೆ ಗೆರಟೆಯ ಹೊರತು ಬೇರೆ ವಸ್ತುಗಳನ್ನು ಉಪಯೋಗಿಸುವದಿದ್ದಲ್ಲಿ ಸಿಪಿಪ (ಶೀಟು), ಗಂಧದ ಕಟ್ಟಿಗೆ, ಶೀಸಿವ್ (Rosewood) ಹಲ್ಲು ತಿಕ್ಕಲಿಕ್ಕೆ ಬೇಕಾಗುವ ಬ್ರಶ್ಶಿನ ಹಿಡಿಕೆ, ಹಳೇ ಹಣಿಗೆಯ ತುಂಡು ಅಥವಾ ಕೋಡು ಇವುಗಳನ್ನೂ ಉಪಯೋಗಿಸಬಹುದು.



ಹಿಂದುಸ್ತಾನದಲ್ಲಿ ೩೪೫೦೦ ರಾಷ್ಟ್ರೀಯ ಯೋಧರು

ರಾಷ್ಟ್ರೀಯ ಯೋಧರ ದಲದ ಬಲವು ಈಗ ೧೦೦೦ ಅಧಿಕಾರಿಗಳನ್ನೊಳಗೊಂಡು ಸುಮಾರು ೩೪೫೦೦ ಸಿಪ್ಪಿರುವದೆಂದು ಸಂರಕ್ಷಣ ಖಾತೆಯ ಪ್ರಕಟನೆಯಿಂದ ಗೊತ್ತಾಗುತ್ತದೆ. ಮೇಲಿನ ಸಂಖ್ಯೆಯಲ್ಲಿ ಮುಂಬಯಿ ಪ್ರಾಂತದವರ ಸಂಖ್ಯೆಯು ಎಲ್ಲ ಪ್ರಾಂತಗಳಿಗಿಂತ ಹೆಚ್ಚು ಎಂದರೆ ೬೮೪೯ ಇದ್ದು ಆ ನಂತರ ಪಶ್ಚಿಮ ಬಂಗಾಲ, ಬಿಹಾರ ಹಾಗು ಸಂಯುಕ್ತಪ್ರಾಂತಗಳ ನಂಬರುಗಳು ಬರುವವು. ಇವುಗಳ ಸಂಖ್ಯೆ ಅನುಕ್ರಮವಾಗಿ ೫೩೨೦, ೫೧೬೭.೪೯೪೫ ಇರುವದು.

ದಲದಲ್ಲಿ ಸೀನಿಯರ ಹಾಗು ಜೂನಿಯರ ಎಂಬ ಎರಡು ವಿಭಾಗಗಳಿದ್ದು ಸೀನಿಯರ ವಿಭಾಗವು ಕಾಲೇಜ ಹಾಗು ವಿಶ್ವವಿದ್ಯಾಲಯ ವಿದ್ಯಾರ್ಥಿಗಳಿಗಾಗಿಯೂ ಜೂನಿಯರ ವಿಭಾಗವು ಶಾಲೆಗಳ ವಿದ್ಯಾರ್ಥಿಗಳಿಗಾಗಿಯೂ ಇರುವದು. ಸದ್ಯಕ್ಕೆ ಸೀನಿಯರ ವಿಭಾಗದಲ್ಲಿ ೧೫೦೦೦ ಯೋಧರು ಜೂನಿಯರ ವಿಭಾಗದಲ್ಲಿ ೨೦೩೨೦ ಯೋಧರು ಇರುವರು. ಸೀನಿಯರ ವಿಭಾಗದಲ್ಲಿ ಸಂಯುಕ್ತ ಪ್ರಾಂತವು ೨೭೧೩ ಯೋಧರಿಂದ ಮೊದಲನೆ ಸ್ಥಾನ ಪಡೆದಿದ್ದು ಮುಂಬಯಿಯು ೨೭೧೫ ಯೋಧರಿಂದ ಎರಡನೆ ಸ್ಥಾನದಲ್ಲಿರುವರು.

ಮಾನ್ಯ ಮುರಾರಜಿಯವರಿಗೆ ಪಾರ್ಸಲಿನಲ್ಲಿ ಕಾಡತೂಸುಗಳು

ಮುಂಬಯಿ ಸರಕಾರದ ಗೃಹಮಂತ್ರಿಗಳಾದ ಮಾನ್ಯ ಮುರಾರಜಿ ದೇಸಾಯಿ ಅವರ ವಿಳಾಸಕ್ಕೆ ಅಂಚೆ ಮುಖಾಂತರ ೧೨ ಕ್ಕೆ ಗೂಢವಾದ ಒಂದು ಪಾರ್ಸಲ ಬಂದಿತ್ತು. ಅಂಚೆ ಅಧಿಕಾರಿಗಳು ಸಂಶಯದಿಂದ ಅದನ್ನು ತೆಗೆದು ನೋಡಲಾಗಿ ಅದರಲ್ಲಿ ಸಜೀವ ಕಾಡತೂಸುಗಳು ಹಾಗು ಸ್ಫೋಟಕ ವಸ್ತುಗಳು ಕಂಡುಬಂದವು.

ಭಾರತದಲ್ಲಿಯ ಸಕ್ಕರೆಯ ಉತ್ಪಾದನೆ

೧೬ ವರ್ಷಗಳ ಪ್ರಗತಿ ಮತ್ತು ಸಮಸ್ಯೆಗಳು

ಕಬ್ಬಿನ ತೌರುಮನೆ ಭಾರತವೇ. ಆದರೂ ಸಕ್ಕರೆಯನ್ನು ಪರದೇಶಗಳಿಂದ ತರಿಸುವದು ನಮಗೆ ರೂಢಿಯಾಗಿ ಬಿಟ್ಟಿತ್ತು. ೧೯೩೧ ರ ವರೆಗೂ ಜಾವಾ ಮೊದಲಾದೆಡೆಗಳಿಂದ ನಮಗೆ ಬರುತ್ತಿದ್ದ ಸಕ್ಕರೆಯೇ ಹೆಚ್ಚು. ೧೯೩೧-೩೨ ರಲ್ಲಿ ಭಾರತದ ಸಕ್ಕರೆಯ ಉದ್ಯಮಕ್ಕೆ ಸುಂಕದ ಮೂಲಕ ಸಂರಕ್ಷಣೆ ಕೊಡುವ ವರೆಗೂ ಇದೇ ಹಾಡಾಗಿತ್ತು. ಪರದೇಶಗಳಿಂದ ಬರುವ ಸಕ್ಕರೆಗೆ ಸುಂಕ ಹಾಕುವ ಮೂಲಕ, ಅದರ ಮೇಲಾಟದಿಂದ ಎಳೆಯ ಈ ಉದ್ಯೋಗಕ್ಕೆ ಧಕ್ಕೆ ತಟ್ಟದಂತೆ ರಕ್ಷಣೆ ಕೊಟ್ಟು ಇಂದಿಗೆ ೧೬ ವರ್ಷಗಳಾದವು. ಈ ಅವಧಿಯಲ್ಲಿ ಉದ್ಯಮದಲ್ಲಾದ ಪ್ರಗತಿಯ ವಿವರಗಳನ್ನು ಭಾರತದ ಕೃಷಿ ಸಂಶೋಧನ ಸಮಿತಿಯ ಅಧ್ಯಕ್ಷರಾದ ಸರದಾರ ದಾತಾರ ಸಿಂಗರು ಕಳೆದ ವಾರ ಭಾರತದ ಕಬ್ಬಿನ ಸಮಿತಿಯ ಮುಂದಿರಿಸಿದುದು ಇಂತಿದೆ:

	೧೯೩೧-೩೨	೧೯೪೬-೪೭
ಕಬ್ಬಿನ ಬೆಳೆಯ ಕ್ಷೇತ್ರ (ಸಾವಿರ ಎಕರೆ)	೨೯೭೨	೩೬೪೭
ಸುಧಾರಿತ ಕಬ್ಬುನಟ್ಟ ಕ್ಷೇತ್ರ (ಸಾವಿರ ಎಕರೆ)	೧೧೬೮	೩೫೪೬
ಸಕ್ಕರೆಗೆ ಉಪಯೋಗಿಸಿದ ಕಬ್ಬು	೬.೫%	೨೫%
ಬೆಲ್ಲಕ್ಕೆ ,,	೬೪.೭%	೫೨%
ಕಚ್ಚಾ ಸಕ್ಕರೆಯ ಉತ್ಪಾದನೆ (ಸಾವಿರ ಟನ್)	೧೫೮	೯೪೪
ಬಿಳಿ ಸಕ್ಕರೆ ಉತ್ಪಾದನೆ (ಸಾವಿರ ಟನ್)	೯೭೨	೧೦೪೫
ಆಯಾತ ಮಾಡಿದ ಸಕ್ಕರೆ (ಸಾವಿರ ಟನ್)	೫೩೬	--
ಸಕ್ಕರೆ ಕಾರಖಾನೆಗಳು	೩೧	೧೪೫

ಈ ಪ್ರಕಾರ ಸಕ್ಕರೆಯ ಉದ್ದಿಮೆ ಪ್ರಗತಿ ಹೊಂದಿ ಹೊರಗಿಂದ ಇಂದು ಸಕ್ಕರೆ ತರಿಸುವದೇ ನಿಂತುಹೋಗಿದೆ. ಭಾರತದ ಕೃಷಿ ಸಂಶೋಧಕರು ಕಬ್ಬಿನ ಜಾತಿಯನ್ನು ಸುಧಾರಿಸಲು ಮಾಡಿದ ಪ್ರಯತ್ನಗಳ ಫಲವಾಗಿ ರೂಪಿಸಲ್ಪಟ್ಟ "ಕೊಯಮತ್ತೂರು" ಕಬ್ಬು ಈಗ ದೇಶದ ಕಬ್ಬಿನ ಬೆಳೆಯ ಕ್ಷೇತ್ರದಲ್ಲಿ ನೂರಕ್ಕೆ ೮೫ ಭಾಗದಲ್ಲಿ ಪ್ರಸಾರಕ್ಕೆ ಬಂದಿದೆ ಮಾತ್ರವಲ್ಲ, ಆಸ್ಟ್ರೇಲಿಯ, ದಕ್ಷಿಣ ಆಫ್ರಿಕೆ ಮತ್ತು ಇತರ ದೇಶಗಳು ಕೂಡ ಈ ಜಾತಿಯನ್ನು ಎರವು ಒಯ್ದು ಬೆಳೆಸುತಿವೆ.

ಇದು ಪ್ರಶಂಸನೀಯ ಕಾರ್ಯವಾಗಿದ್ದರೂ ೧೬ ವರ್ಷದ ರಕ್ಷಣೆ ಪೋಷಣೆಗೊಳಗಾದ ಈ ಉದ್ದಿಮೆಗೆ ಇನ್ನೂ ತನ್ನ ಕಾಲಮೇಲೆ ತಾನು ನಿಲ್ಲುವ ಬಲ ಬಂದಿಲ್ಲ. ಈಗ ಪುನಃ ಅದು ಸಂರಕ್ಷಣೆಯನ್ನು ಕೋರಿ ಟ್ಯಾರಿಫ್ ಬೋರ್ಡಿಗೆ ಅರ್ಜಿ ಹಾಕಿದೆ. ಸುಂಕವಿಲ್ಲದಂತಾದರೆ ವಿದೇಶೀ ಸಕ್ಕರೆ ಇಲ್ಲಿ ನುಗ್ಗಿ ಮೇಲಾಟಮಾಡಿ ನಮ್ಮೀ ಉದ್ದಿಮೆಯನ್ನು ಕೊಲ್ಲಬಲ್ಲದು. ಏಕೆಂದರೆ ಸಕ್ಕರೆ ಉತ್ಪಾದನೆ ಹೆಚ್ಚಿಸಿಕೊಂಡಿರುವೆವಾದರೂ ನಮ್ಮದು ಅಗ್ಗದರದ ಸಕ್ಕರೆಯಲ್ಲ. ನಿಜವಾಗಿ ವಿದೇಶಿ ಸಕ್ಕರೆಗಿಂತ ದೇಶಿ ಸಕ್ಕರೆ ಇಮ್ಮಡಿ ತುಟ್ಟಿಯಾಗಿವೆಯೆಂದು ದಾತಾರಸಿಂಗರು ತೋರಿಸಿಕೊಟ್ಟಿದ್ದಾರೆ.

ಇದನ್ನು ಸುಧಾರಿಸಲು ಎರಡು ಹಾದಿಗಳಿವೆ. ಒಂದು, ಕಾರಖಾನೆಗಳು ಉತ್ಪಾದನ ಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕು; ಎರಡು, ಕಬ್ಬಿನ ಬೆಳೆಯನ್ನು ಉತ್ತಮಗೊಳಿಸಬೇಕು. ಉಳಿದೆಲ್ಲ ಸಂಗತಿಗಳು ಸುಧಾರಿಸಿದ್ದರೂ ಕಳೆದ ೧೬ ವರ್ಷದಿಂದ ಕಬ್ಬಿನ ಎಕರೆಯೊಂದರ ಬೆಳೆಯ ಪ್ರಮಾಣ ಹೆಚ್ಚಿಲ್ಲ. ಆಗಲೂ ಎಕರೆಗೆ ೧೪ ಟನ್ ಕಬ್ಬು, ಈಗಲೂ ಅಷ್ಟೆ. ಈ ಕಾರಣದಿಂದ ಕಬ್ಬೇ ತುಟ್ಟಿಯಾಗಿಬಿಟ್ಟಿದೆ. ಸಂಶೋಧಕರು ಕಬ್ಬಿನ ಜಾತಿಯನ್ನು ಇನ್ನಷ್ಟು ಸುಧಾರಿಸುವದು ಅವಶ್ಯವಾಗಿದೆಯಲ್ಲದೆ ಸುಧಾರಿಸಿದ ಬೀಜಗಳು ರೈತರಿಗೆ ದೊರೆತು, ಉತ್ತಮ ಗೊಬ್ಬರ, ನೀರಾವರಿ ಸೌಕರ್ಯ ಒದಗಿಸಲ್ಪಡಬೇಕು. ಈಗ ವಿವಿಧ ಪ್ರಾಂತಿಕ ಸರಕಾರಗಳು ಕೈಕೊಂಡಿರುವ ಯೋಜನೆಗಳಿಗೆ ಫಲ ದೊರೆತರೆ ಇನ್ನೈದು ವರ್ಷಗಳಲ್ಲಿ ಸಕ್ಕರೆಯ ಉತ್ಪಾದನೆ ೧೬,೦೦,೦೦೦ ಟನ್ನಿಗೇರಬೇಕು. ಆಗ ನಮಗೆ ಧಾರಾಳ ಸಕ್ಕರೆ ದೊರೆತೀತು. ಅಲ್ಲದೆ ಜಾತಿಯೂ ಸುಧಾರಿಸುವಂತಿದ್ದು ಈಗಿರುವದರ ಅರ್ಧದಷ್ಟೇ ಕ್ಷೇತ್ರದಲ್ಲಿ ಈಗ ಬೆಳೆಯುತ್ತಿರುವ ಒಟ್ಟು ಕಬ್ಬಿಗಿಂತಲೂ ಹೆಚ್ಚು ಬೆಳೆಯುವ ಹಂಬಲ ಹತ್ತೇ ವರ್ಷಗಳಲ್ಲಿ ಕೈಗೂಡಬಹುದು. ಹೀಗೆ ಕಬ್ಬಿನ ಪೈರಿನಿಂದ ಮುಕ್ತವಾದ ಪ್ರದೇಶದಲ್ಲಿ ಧಾನ್ಯದ ಬೆಳೆಯನ್ನು ತೆಗೆಯಬಹುದು.

ಇದಕ್ಕೆ ರೈತರ, ಕಾರಖಾನೆದಾರರ ಹಾಗು ಕೃಷಿ ಸಂಶೋಧಕರ ನೆರವು ಅತ್ಯವಶ್ಯವೆಂದು ದಾತಾರಸಿಂಗರು ಹೇಳಿದರು.

ಜನಮತ

ಬೃಹತ್ಕಥೆ

ಪ್ರತಿಷ್ಠಾನಪುರದಲ್ಲಿದ್ದ ಗುಣಾಢ್ಯನೆಂಬ ಮಂತ್ರಿಯು ಪೈಶಾಚ ಭಾಷೆಯಲ್ಲಿ ಇದನ್ನು ರಚಿಸಿದನೆಂದು ಪ್ರತೀತಿ. ಈಗ ಅದು ದೊರೆತಿಲ್ಲ. ಪೈಶಾಚಿಭಾಷೆ ಯಾವದು ಎಂಬುದೂ ನಿರ್ಧರಿಸಲ್ಪಟ್ಟಿಲ್ಲ. ಕನ್ನಡ ಭಾಷೆಗೆ ಸಮೀಪವಾದ ಒಂದು ಭಾಷೆ ಎಂದು ಒಂದು ಅಭಿಪ್ರಾಯವಿದೆ. ವಿಂಧ್ಯಾರಣ್ಯದ ಕಾಡು ಜನರ ಭಾಷೆ ಎಂದು ಮತ್ತೊಂದು ಅಭಿಪ್ರಾಯ. ಬಹುಶಃ ಅನೇಕ ಪ್ರಾಚೀನ ಗ್ರಂಥಗಳಂತೆ ಅದು ನಷ್ಟವಾಗಿರುತ್ತದೆ. ಆದರೆ ಇದರ ಸಾರಾಂಶವು ಕ್ಷೇಮೇಂದ್ರನ ಸಂಸ್ಕೃತ ಬೃಹತ್ಕಥಾಮಂಜರಿಯಲ್ಲಿ ಹೇಳಿದೆ. ಕಾಶ್ಮೀರದ ಸೋಮದೇವ ಭಟ್ಟನೆಂಬ ಕವಿಯು ಸರಳವಾದ ಶೈಲಿಯ ಅನತಿಸಂಕೋಚವಿಸ್ತಾರವಾದ ಕಥಾಸರಿತ್ಸಾಗರವೆಂಬ ಸಂಸ್ಕೃತ ಗ್ರಂಥವನ್ನು ರಚಿಸಿದನು. ಇದೇ ವಿಷಯಗಳನ್ನೊಳಗೊಂಡ ಬೃಹತ್ಕಥಾ ಶ್ಲೋಕಸಂಗ್ರಹ ಎಂಬ ಮತ್ತೊಂದು ಸಂಸ್ಕೃತ ಗ್ರಂಥವು ನೇಪಾಳ ದೇಶದಲ್ಲಿ ದೊರೆತಿದೆ. ತಮಿಳು ಭಾಷೆಯಲ್ಲಿಯೂ ತೆರಾಂಗತ್ತೈ ಎಂಬ ಹೆಸರಿನಲ್ಲಿ ಈ ಗ್ರಂಥವಿದೆ.

ಗುಣಾಢ್ಯನ ಬೃಹತ್ಕಥೆಯು ರಾಮಾಯಣ ಮತ್ತು ಮಹಾಭಾರತಗಳ ಪಂಕ್ತಿಯಲ್ಲಿ ಸೇರಿರುವ ಉದ್ಗ್ರಂಥ. ಇದರಲ್ಲಿ ದ್ವಾಪರಯುಗಾಂತದಿಂದ ಶಾಲಿವಾಹನ ಶಕಾರಂಭದವರೆಗಿನ ಕಥೆಯಿದೆ. ಇದು ಕಥೆಗಳ ಒಂದು ಕಣಜ. ಭಾಸ, ವಿಷ್ಣುಶರ್ಮ, ಶ್ರೀಹರ್ಷ, ಬಾಣ ಮತ್ತು ಅವನ ಮಗ ಭೂಷಣಭಟ್ಟ, ವಿಶಾಖದತ್ತ, ಭವಭೂತಿ ಮೊದಲಾದವರು ಈ ಕಥೆಯ ಕಣಜದಿಂದ ತಮ್ಮ ಕಥಾವಸ್ತುಗಳನ್ನು ಆರಿಸಿಕೊಂಡಿರುವರು. ಈ ಬೃಹತ್ಕಥೆಯಲ್ಲಿ ಕನ್ನಡದೇಶದ ಚರಿತ್ರೆಯೂ ಪ್ರಾಸಂಗಿಕವಾಗಿ ಹೇಳಲ್ಪಟ್ಟಿದೆ. ನಾಗಾನಂದದ ಜೀಮೂತವಾಹನನ ಕಾರ್ಯರಂಗವು ಕನ್ನಡನಾಡಿನ ಗೋಕರ್ಣದಲ್ಲಿ ...... ಹೀಗಿರಲು ಬೃಹತ್ಕಥೆಯಲ್ಲಿ ಕನ್ನಡನಾಡಿನ ಇತಿಹಾಸವು ಅಡಗಿರುವುದೆಂಬುದರಲ್ಲಿ ಆಶ್ಚರ್ಯವಿಲ್ಲ. ಚಾರಿತ್ರಿಕ ಸಂಶೋಧಕರು ತಮ್ಮ ಮನಸ್ಸನ್ನು ಈ ಗ್ರಂಥದ ಕಡೆಗೆ ಬೀರಿದರೆ ಕಲಿಯುಗದಾದಿಯಿಂದ ಶಕಕಾಲವಾರಂಭದ ವರೆಗಿನ ಅಂಧಕಾರದಲ್ಲಿ ಅಡಗಿರುವ ಕನ್ನಡನಾಡಿನ ಚರಿತ್ರೆಯನ್ನು ಬೆಳಕಿಗೆ ತರಲು ಸಾಧ್ಯವಿದೆ.

ಇಂತಹ ಮಹಾಗ್ರಂಥವು ಕನ್ನಡದಲ್ಲಿ ಅಮೂಲಾಗ್ರವಾಗಿ ಪ್ರಕಟಿಸಲಾಗಿರುವುದು ತಿಳಿಯದು. ಕಥಾಸರಿತ್ಸಾಗರದ ಕೆಲವು ಭಾಗಗಳು ಕನ್ನಡದಲ್ಲಿ ಪ್ರಕಟವಾಗಿವೆ. ಸಂಸ್ಕೃತ ಕಥಾಸರಿತ್ಸಾಗರವು ೧೮ ಲಂಬಕಗಳಲ್ಲಿ ೨೨೦೦೦ ಶ್ಲೋಕಗಳನ್ನುಳ್ಳ ಮಹಾಗ್ರಂಥ. ಇದನ್ನು ಶ್ರೀ ತರೀಕೆರೆ ಚಿದಂಬರ ಪಂಡಿತರು ಅಮೂಲಾಗ್ರವಾಗಿ ಕನ್ನಡಿಸಿರುವ ಸುಮಾರು ೮ ಲಂಬಕಗಳು ಮಾತ್ರ ವಿಚಾರತರಂಗಿಣಿ ಎಂಬ ಮಾಸಪತ್ರಿಕೆಯಲ್ಲಿ ಪ್ರಕಟವಾಗಿದೆ. ಉಳಿದ ಭಾಗವು ಪ್ರಕಟವಾಗಿಲ್ಲ. ಈಗ ಆ ಪ್ರತಿಗಳೂ ಒಟ್ಟಿಗೆ ದೊರುಕುವುದು ಅಸಾಧ್ಯವಾಗಿದೆ. ಶ್ರೀಯುತ ಪಂಡಿತರು ವೃದ್ಧಾಪ್ಯದಿಂದ ಮಾಸಪತ್ರಿಕೆಯನ್ನು ನಿಲ್ಲಿಸಿ ಬಹಳ ಕಾಲವಾಯಿತು. ಈ ಮಹಾಗ್ರಂಥವು ಕನ್ನಡಿಗರ ಆಸ್ತಿ. ಕನ್ನಡ ಪರಿಷತ್ತಿನವರಾಗಲೀ ಧಾರವಾಡದ ವಿದ್ಯಾವರ್ಧಕ ಸಂಘದವರಾಗಲೀ ಈ ಕನ್ನಡ ಗ್ರಂಥವನ್ನು ಪ್ರಕಟಿಸುವುದು ಸೂಕ್ತವೆಂದು ಸೂಚಿಸುತ್ತೇನೆ.

ಹುಲ್ಲೂರು ಶ್ರೀನಿವಾಸ ಜೋಯಿಸ
ವಕೀಲ ಚಿತ್ರದುರ್ಗ

ಭಾರತಕ್ಕೆ ಪೂರ್ವ ಆಫ್ರಿಕಾ ಹತ್ತಿಯ ಆಯಾತ

ಹಿಂದುಸ್ತಾನ ಸರಕಾರದವರು ಕೊಂಡುಕೊಂಡ ಪೂರ್ವ ಆಫ್ರಿಕಾ ಹತ್ತಿಯನ್ನು ಹೇರಿಕೊಂಡು ಹಡಗಗಳು ಭಾರತಕ್ಕೆ ಬಂದು ತಲುಪತೊಡಗಿವೆ. ಒಟ್ಟು ಬಂದ ೩ ಲಕ್ಷ ಗಂಟುಗಳಲ್ಲಿ ಕಳೆದ ವಾರ ೧೬೫೦ ಗಂಟುಗಳನ್ನು ಹಡಗದಿಂದ ಇಳಿಸಲಾಗಿದೆ. ಇನ್ನುಳಿದ ಹಡಗಗಳು ಸಹ ಈ ವರುಷದ ಜುಲೈಯೊಳಗಾಗಿ ಬಂದು ತಲಪಬಹುದೆಂದು ನಿರೀಕ್ಷಿಸಲಾಗಿದೆ.

ಶಾಕಾಹಾರವ್ರತದ ನೈತಿಕ ನೆಲೆಗಟ್ಟು

(ಗಾಂಧೀಜಿಯವರು ೨೦ ನವೆಂಬರ ೧೯೩೧ ರಂದು ಲಂಡನ್ನಿನ ಶಾಕಾಹಾರಿ ಸಮಾಜದಲ್ಲಿ ಕೊಟ್ಟ ಭಾಷಣ)

ಈ ಸಭೆಗೆ ನಾನು ಆಮಂತ್ರಣ ಪಡೆದಾಗ ನನಗೆಷ್ಟು ಸಂತೋಷವಾಯಿತೆಂದು ವಿಸ್ತರಿಸುವದು ಅವಶ್ಯವಿಲ್ಲ. ಅದು ಹಳೆಯ ನೆನಪುಗಳನ್ನೂ ಶಾಕಾಹಾರವ್ರತಿಗಳೊಡನೆ ದೊರೆತ ಗೆಳೆತನದ ಸ್ಮೃತಿಗಳನ್ನೂ ಜಾಗರಿಸಿತು. ಮಿ. ಹೆನ್ರಿ ಸಾಲ್ಟರು ನನ್ನ ಬಲ ಪಾರ್ಶ್ವದಲ್ಲಿರುವದನ್ನು ನೋಡಿಯಂತೂ ನನಗೆ ತುಂಬ ಅಭಿಮಾನವೆನಿಸುತ್ತದೆ. ಮಿ. ಸಾಲ್ಟರ "A Plea for Vegetarianism" (ಶಾಕಾಹಾರವ್ರತದ ಅವಶ್ಯಕತೆ) ಎಂಬ ಪುಸ್ತಕವನ್ನು ಓದಿದ ನಂತರವೇ ನನಗೆ, ನನ್ನ ಪರಂಪರಾಗತ ಅಭ್ಯಾಸವೂ ತಾಯಿ ನನ್ನಿಂದ ಮಾಡಿಸಿದ ಪ್ರತಿಜ್ಞೆಯೂ ಇಲ್ಲವಿದ್ದಿದ್ದರೆ ಕೂಡ, ಶಾಕಾಹಾರ ವ್ರತವನ್ನು ಇಟ್ಟುಕೊಳ್ಳುವದು ನ್ಯಾಯ್ಯವೆಂದು ಮನವರಿಕೆಯಾಯಿತು. ಶಾಕಾಹಾರಿಗಳಾದ ನಾವು ನಮ್ಮ ಪ್ರಾಣಿಲೋಕದ ಬಂಧುಗಳನ್ನು ಕೊಂದು ತಿನ್ನದಿರುವದೇ ಧರ್ಮವೆಂದು ಅವರು ನನಗೆ ತೋರಿಸಿ ಕೊಟ್ಟರು. ಆದುದರಿಂದ ಶ್ರೀ ಸಾಲ್ಟರು ಇಂದು ನಮ್ಮ ನಡುವೆ ಇರುವದು ನನಗೆ ಇನ್ನಷ್ಟು ಆನಂದವುಂಟು ಮಾಡಿದೆ.

ಶಾಕಾಹಾರವ್ರತದ ವಿಷಯದಲ್ಲಿ ನನ್ನ ಬಗೆ ಬಗೆಯ ಅನುಭವಗಳನ್ನಾಗಲಿ, ಲಂಡನ್ನಿನಲ್ಲಿಯೆ ಶುದ್ಧ ಶಾಕಾಹಾರವ್ರತಿಯಾಗಿ ಉಳಿಯಬೇಕಾದರೆ ನನಗೆ ಎದುರುಬೀಳುತಿದ್ದ ಅನೇಕಾನೇಕ ತೊಡಕುಗಳನ್ನಾಗಲಿ ವಿವರಿಸುತ್ತ ನಿಮ್ಮ ಕಾಲವನ್ನು ನಷ್ಟಗೊಳಿಸಲು ನಾನು ಬಯಸುವದಿಲ್ಲ. ಆದರೆ ಶಾಕಾಹಾರವ್ರತವನ್ನು ಕುರಿತು ನನ್ನ ಮನಸಿನಲ್ಲಿ ರೂಪುಗೊಂಡಿರುವ ಕೆಲ ವಿಚಾರಗಳನ್ನು ನಿಮ್ಮ ಮುಂದಿಡಬೇಕೆಂದಿದ್ದೇನೆ. ನಲುವತ್ತು ವರುಷಗಳ ಹಿಂದೆ ನಾನು ಶಾಕಾಹಾರವ್ರತಿಗಳ ಸಂಗಡ ಬಹಳ ಹೊಕ್ಕುಬಳಕೆಯನಿಟ್ಟುಕೊಂಡಿದ್ದೆ. ಆ ಕಾಲದಲ್ಲಿ ಲಂಡನ್ನಿನಲ್ಲಿದ್ದ ಶಾಕಾಹಾರಿ ಉಪಾಹಾರಗೃಹಗಳಲ್ಲಿ ನಾನು ಹೊಕ್ಕಿರದುದು ಒಂದೂ ಇದ್ದಿರಲಾರದು. ಕೇವಲ ಕುತೂಹಲದಿಂದ ಪ್ರೇರಿತನಾಗಿ ನಾನು ಲಂಡನ್ನಿನಲ್ಲಿ ಶಾಕಾಹಾರದ ಉಪಾಹಾರಗೃಹಗಳಿಗಿರುವ ಅವಕಾಶವನ್ನು ಅರಿತುಕೊಳ್ಳಲು, ಅವುಗಳಲ್ಲಿ ಪ್ರತಿಯೊಂದನ್ನೂ ಕಾಣಲು ಮನಸು ಮಾಡಿದ್ದೆ. ಆದುದರಿಂದ ಸಹಜವಾಗಿಯೆ ನನಗೆ ಅನೇಕ ಜನ ಶಾಕಾಹಾರವ್ರತಿಗಳೊಡನೆ ಸಂಪರ್ಕವುಂಟಾಯಿತು. ಅಲ್ಲಿನ ಉಪಾಹಾರದ ಮೇಜುಗಳ ಮುಂದೆ ನಡೆಯುತಿದ್ದ ಚರ್ಚೆಗಳು ಹೆಚ್ಚಾಗಿ ಆಹಾರ ಮತ್ತು ರೋಗಗಳ ಕತೆ ಹೊರಳುತಿದ್ದವು. ಶಾಕಾಹಾರ ವ್ರತವನ್ನು ಕೈಕೊಂಡು ಆ ವ್ರತವನ್ನು ಸಾಂಗವಾಗಿ ಆಚರಿಸುತ್ತ ಹೋಗಲು ಹೆಣಗುತಿದ್ದವರಿಗೆ ಆರೋಗ್ಯ ವಿಚಾರದಲ್ಲಿ ಹಲಬಗೆಯ ಉಪದ್ರವಗಳು ಬರುತಿದ್ದುವೆಂದು ಕಂಡುಬಂತು. ಈಗಿನ ದಿನಗಳಲ್ಲಿ ನೀವು ಚರ್ಚಾಕೂಟಗಳನ್ನು ಏರ್ಪಡಿಸುತಿರುವಿರೋ ಇಲ್ಲವೋ ನಾನರಿಯೆ, ಆದರೆ ಆ ಕಾಲದಲ್ಲಿ ಶಾಕಾಹಾರಿ ಶಾಕಾಹಾರಿಗಳ ನಡುವೆ ಮತ್ತು ಶಾಕಾಹಾರಿ ಮಾಂಸಾಹಾರಿಗಳ ನಡುವೆ ನಡೆಯುತಿದ್ದ ವಾಗ್ವಾದಗಳಿಗೆ ನಾನು ಹೋಗುತಿದ್ದೆ. ಡಾ। ಡೆನ್ಸಮೋರ ಮತ್ತು ದಿವಂಗತ ಡಾ. ಟಿ. ಆರ್. ಆಲಿಸನ್ನರ ನಡುವೆ ನಡೆದ ಅಂಥದೊಂದು ವಾದಕೂಟ ನನಗೀಗ ನೆನಪಿಗೆ ಬರುತ್ತದೆ. ಆ ಕಾಲದಲ್ಲಿ ಶಾಕಾಹಾರವಾದಿಗಳು ಆಹಾರವನ್ನೂ ರೋಗಗಳನ್ನೂ ಕುರಿತಲ್ಲದೆ ಬೇರೆ ಮಾತೇ ಆಡುತಿದ್ದಿಲ್ಲವೆನ್ನಬಹುದು. ಈ ಉಪಕ್ರಮವನ್ನು ನಡೆಸುವ ಪದ್ಧತಿ ಇದಲ್ಲವೆಂದು ನನ್ನೆಣಿಕೆ. ಯಾವುದಾದರೊಂದು ಬೇನೆಯಿಂದ ಬಳಲುತಿರುವ ಮೂಲಕ ಶಾಕಾಹಾರವ್ರತಿಗಳಾದವರೇ- ಅಂದರೆ ಆರೋಗ್ಯ ದೃಷ್ಟಿಯಿಂದ ಶಾಕಾಹಾರವನ್ನು ಕೈಕೊಂಡವರೇ ಹೆಚ್ಚಾಗಿ ಕಡೆಗೆ ವ್ರತತ್ಯಾಗ ಮಾಡುತ್ತಾರೆಂದು ನಾನು ಕಂಡುಹಿಡಿದಿರುವೆ. ಶುದ್ಧ ಶಾಕಾಹಾರ ವ್ರತವನ್ನು ಪರಿಪಾಲಿಸಬೇಕಾದರೆ ಅದಕ್ಕೊಂದು ನೈತಿಕ ನೆಲೆಗಟ್ಟು ಬೇಕೆಂದು ನನಗೆ ಆಗ ಮನವರಿಕೆಯಾಯಿತು.

ನನ್ನ ಸತ್ಯಶೋಧನ ಪ್ರಯತ್ನಗಳಲ್ಲಿ ಈ ಅರಿವು ನನ್ನ ಪಾಲಿಗೊಂದು ದೊಡ್ಡ ಸಂಶೋಧನವೇ ಆಯಿತೆನ್ನಬೇಕು. ಚಿಕ್ಕವನಿದ್ದಾಗಲೆ ನನ್ನ ಪ್ರಯೋಗಗಳಿಂದ ವಿಕಾಸ ಪಥದಲ್ಲಿ ಮನುಷ್ಯನ ಉತ್ತರೋತ್ತರವಾಗಬೇಕಾದರೆ ಸ್ವಾರ್ಥಮೂಲ ಹೇತುಗಳು ಯಾವ ಪ್ರಯೋಜನಕ್ಕೂ ಬಾರವೆಂದು ಕಂಡುಹಿಡಿದಿದ್ದೆ. ಅದಕ್ಕೆ ಬೇಕಾಗಿದ್ದುದು ಉದಾತ್ತ ಉದ್ದೇಶ. ಆರೋಗ್ಯವೆಂಬುದು ಶಾಕಾಹಾರಿಗಳಿಗೇ ಮೀಸಲಿಟ್ಟ ಸೊತ್ತಲ್ಲವೆಂದೂ ನಾನು ಕಂಡುಕೊಂಡಿದ್ದೆ. ಈ ಪಕ್ಷಕ್ಕಾಗಲಿ ಆ ಪಕ್ಷಕ್ಕಾಗಲಿ ಒಲಿಯದಿದ್ದವರೂ ಶಾಕಾಹಾರಿಗಳಲ್ಲದವರೂ ಸಾಮಾನ್ಯವಾಗಿ ಆರೋಗ್ಯವಂತರಾಗಿಯೇ ಇದ್ದುದುಂಟು. ಅನೇಕ ಶಾಕಾಹಾರವ್ರತಿಗಳಿಗೆ ಆ ವ್ರತವನ್ನು ಕಾಯ್ದುಕೊಂಡು ಹೋಗುವದೇ ಅಸಾಧ್ಯವಾಗುತಿತ್ತೆಂದೂ ನನಗೆ ಗೊತ್ತಾಯಿತು. ಏಕೆಂದರೆ ಅವರು ಆಹಾರವನ್ನೆ ಪೂಜಿಸುವ ಪ್ರವೃತ್ತಿಯವರಾಗಿದ್ದರು. ಶಾಕಾಹಾರ ವ್ರತವನ್ನು ಕೈಕೊಂಡಾಕ್ಷಣ ತಮಗೆ ಮನಬಂದಷ್ಟು ಮಸೂರ ಬೀಜಗಳನ್ನೂ ಅವರೆ ಕಾಯಿಗಳನ್ನೂ ಗಿಣ್ಣವನ್ನೂ ಹೊಡೆಯುವ ಸ್ವಾತಂತ್ರ್ಯ ಬರುವದೆಂದು ಅವರ ಭ್ರಮೆ. ಸಹಜವಾಗಿಯೆ ಅವರು ಆರೋಗ್ಯವಂತರಾಗಿ ಉಳಿಯಲು ಅಸಮರ್ಥರೆ ಆಗುತಿದ್ದರು. ಇದೇ ಬಗೆಯಾಗಿ ವಿಚಾರಿಸುತ್ತ ವಿಚಾರಿಸುತ್ತ, ಮನುಷ್ಯ ಮಿತವಾಗಿ ಉಂಡು ಆಗಾಗ್ಗೆ ಉಪವಾಸವನ್ನೂ ಮಾಡಬೇಕಾಗುತ್ತದೆಂದು ನಾನು ಅರಿತುಕೊಂಡೆ. ಮಿತಭೋಜನ ಮಾಡುವ ಅಥವಾ ದೇಹಕ್ಕೆ ಎಷ್ಟು ಅವಶ್ಯವೊ ಅಷ್ಟು ಮಾತ್ರ ಉಣ್ಣುವ ಸ್ತ್ರೀಪುರುಷರು ಇಲ್ಲವೇ ಇಲ್ಲವೆಂಬಷ್ಟು ವಿರಲ. ನಾವು ಜಿಹ್ವಾಚಾಪಲ್ಯಕ್ಕೆ ಸುಲಭವಾಗಿ ದಾಸರಾಗುತ್ತೇವೆ. ಆದುದರಿಂದ ಒಂದು ಪದಾರ್ಥ ಸವಿಯೆನಿಸಿದೊಡನೆ ಒಂದೆರಡು ತುತ್ತು ಹೆಚ್ಚು ತಿನ್ನಲು ನಾವು ಹಿಂಜರಿಯುವದಿಲ್ಲ. ಆದರೆ ಈ ರೀತಿಯಲ್ಲಿ ಆರೋಗ್ಯವನ್ನು ಉಳಿಸಿಕೊಳ್ಳುವದು ಅಸಾಧ್ಯಪ್ರಾಯವಾದ ಮಾತು. ಆದುದರಿಂದ ಆರೋಗ್ಯವಂತರಾಗಿರಬೇಕಾದರೆ, ನಾವು ಏನನ್ನೆ ತಿನ್ನುತಿರಲಿ, ಕಡಿಮೆ ತಿನ್ನಬೇಕು, ಭೋಜನಗಳ ಸಂಖ್ಯೆಯನ್ನೂ ಕಡಿಮೆ ಮಾಡಬೇಕೆಂದು ನಾನು ಕಂಡುಹಿಡಿದೆ. ಮಿತವಾಗಿ ಉಣ್ಣು; ಸ್ವಲ್ಪ ಬೇಕೆಂಬಾಗಲೆ ಎದ್ದರೂ ಚಿಂತೆಯಿಲ್ಲ, ಸಾಕೆಂದ ಮೇಲೆ ತಿನ್ನಹೋಗಬೇಡ. ನಾನು ಗೆಳೆಯರನ್ನು ಭೋಜನಕ್ಕೆ ಕರೆದರೆ, ಬೇಕಾದುದಕ್ಕಿಂತ ಹೆಚ್ಚು ತೆಗೆದುಕೊಳ್ಳಲು ನಾನೆಂದೂ ಅವರಿಗೆ ಒತ್ತಾಯ ಮಾಡುವದಿಲ್ಲ. ಬದಲಾಗಿ, ಬೇಡದಿದ್ದರೆ ತೆಗೆದುಕೊಳ್ಳಲೇಬೇಡಿರೆಂದು ನಾನು ಸೂಚಿಸುತಿರುತ್ತೇನೆ.

ಒಂದು ಮಾತನ್ನು ನಿಮ್ಮ ಗಮನಕ್ಕೆ ತರಬಯಸುತ್ತೇನೆ. ಶಾಕಾಹಾರವ್ರತಿಗಳು ಇತರರನ್ನು ಶಾಕಾಹಾರದ ಕಡೆ ಒಲಿಸಬೇಕಾದರೆ, ತುಸು ಸಹಿಷ್ಣುತೆ ಬೇಕು. ಸ್ವಲ್ಪ ನಯವಿನಯದ ನೀತಿಯನ್ನು ಉಪಯೋಗಿಸುವದು ಅವಶ್ಯ. ನಮ್ಮೊಡನೆ ಸಹಮತರಾಗದವರ ನೈತಿಕ ಭಾವನೆಗಳನ್ನು ಉತ್ತೇಜಿಸಲು ನಾವು ಪ್ರಯತ್ನಿಸಬೇಕು. ಒಬ್ಬ ಶಾಕಾಹಾರಿಗೆ ಜಡ್ಡಾದಾಗ ಅವನಿಗೆ ಡಾಕ್ಟರರು ಗೋಮಾಂಸದ ಸಾರಿನ ಪಥ್ಯ ಹೇಳಿದರೆಂದು ಅವನು ಅದನ್ನು ಸ್ವೀಕರಿಸಿದರೆ ನಾನು ಅವನನ್ನು ಶಾಕಾಹಾರಿಯೆಂದು ಕರೆಯಲೊಲ್ಲೆನು. ಶಾಕಾಹಾರವ್ರತಧಾರಿ ಧೀರನಾಗಿರಬೇಕು. ಏಕೆ? ಏಕೆಂದರೆ, ಶರೀರಪೋಷಣೆಗಿಂತ ಆತ್ಮಪೋಷಣೆ ಮಿಗಿಲು. ಮನುಷ್ಯನು ಮಾಂಸಮಾತ್ರನಲ್ಲ. ಮನುಷ್ಯನ ಚೇತನದ ಮೇಲೆಯೆ ನಮ್ಮ ಗಮನ ಹೆಚ್ಚಾಗಿರತಕ್ಕದ್ದು. ಆದುದರಿಂದ ಶಾಕಾಹಾರಿಗಳು ಆ ನೈತಿಕ ನೆಲೆಗಟ್ಟನ್ನು ಇಟ್ಟುಕೊಳ್ಳಬೇಕು- ಮನುಷ್ಯ ಮಾಂಸಾಹಾರಿಯಾಗಿ ಹುಟ್ಟಿಲ್ಲ, ಭೂಮಿಯಲ್ಲಿ ಬೆಳೆಯುವ ಫಲ ಸಸ್ಯಾದಿಗಳನ್ನು ತಿಂದು ಬದುಕಲು ಹುಟ್ಟಿದ್ದಾನೆಂದು ನಾವು ಮನಗಾಣಬೇಕು. ತಪ್ಪು ಮಾಡದ ಮನುಷ್ಯರೇ ಇಲ್ಲವೆಂದು ನನಗೆ ಗೊತ್ತು. ಹಾಲನ್ನು ಬಿಟ್ಟು ಉಳಿಯುವದು ಸಾಧ್ಯವಿದ್ದರೆ ಅದನ್ನೂ ಬಿಡಬೇಕೆಂದಿದ್ದೆ. ಆದರೆ ಅದು ಸಾಧ್ಯವಾಗಲಿಲ್ಲ. ನಾನು ಈ ಬಗ್ಗೆ ಲೆಕ್ಕವಿಲ್ಲದಷ್ಟು ಪ್ರಯೋಗಗಳನ್ನು ಮಾಡಿ ನೋಡಿದ್ದೇನೆ. ತೀವ್ರವಾದ ಅಸ್ವಸ್ಥತೆಯ ನಂತರ ಪುನಃ ಬಲಗೂಡಬೇಕಾದರೆ ಹಾಲಿಲ್ಲದೆ ನಡೆಯದಾಯಿತು. ಇದೀಗ ನನ್ನ ಜೀವನದ ದೌರ್ಭಾಗ್ಯ. ಆದರೆ ನನ್ನ ಶಾಕಾಹಾರವ್ರತದ ಮೂಲ ಶಾರೀರಿಕವಲ್ಲ, ಆಧ್ಯಾತ್ಮಿಕ. ಗೋಮಾಂಸದ ಸಾರನ್ನಾಗಲಿ ಕುರಿಯ ಮಾಂಸವನ್ನಾಗಲಿ ತೆಗೆದುಕೊಳ್ಳದೆ ಹೋದರೆ ಸಾಯುವದೇ ಖಂಡಿತವೆಂದು ನನಗೆ ಯಾರಾದರೂ ಹೇಳಿದರೆ ಕೂಡ, ಅಂಥ ವೈದ್ಯಕೀಯ ಸೂಚನೆ ಬಂದರೆ ಸಹ, ನಾನು ಸಾವೇ ಲೇಸೆಂದೇನು. ಇದೇ ನನ್ನ ಶಾಕಾಹಾರವಾದದ ನೆಲೆಗಟ್ಟು. ಶಾಕಾಹಾರಿಗಳೆನಿಸಿಕೊಳ್ಳುವ ನಾವೆಲ್ಲರೂ ಈ ನೆಲೆಗಟ್ಟನ್ನು ಇಟ್ಟುಕೊಂಡರೆ ನನಗೆ ಅಪಾರ ಆನಂದವಾದೀತು. ಸಹಸ್ರಾರು ಮಾಂಸಾಹಾರಿಗಳು ಕಡೆತನಕ ಮಾಂಸಾಹಾರಿಗಳಾಗಿ ಉಳಿಯದಿರುವದುಂಟು. ಈ ಬದಲಾವಣೆಯನ್ನು ನಮ್ಮ ಜೀವನದಲ್ಲಿ ಇಳಿಸಬೇಕಾದರೆ, ನಮ್ಮ ಸುತ್ತಲಿನ ಸಮಾಜದಲ್ಲಿರುವದಕ್ಕಿಂತ ಭಿನ್ನವಾದ, ಕೆಲವೊಮ್ಮೆ ನಮ್ಮ ಬಂಧುಮಿತ್ರರ ಮನನೋಯಿಸಬಹುದಾದ, ರೀತಿನೀತಿಗಳನ್ನು ನಾವು ಅನುಸರಿಸಬೇಕಾದರೆ, ಅದಕ್ಕೊಂದು ನಿರ್ದಿಷ್ಟ ಹೇತು ಇರಬೇಕು. ಆದುದರಿಂದ ಶಾಕಾಹಾರಿ ಸಮಾಜವನ್ನು ನಡೆಸುವದಾದರೆ, ಶಾಕಾಹಾರಿ ತತ್ತ್ವವನ್ನು ಉದ್ಘೋಷಿಸುವದಾದರೆ, ಅದಕ್ಕೆ ಒಂದೇ ಮೂಲವಿರಬಲ್ಲದು- ಆ ಮೂಲವೇ ನೀತಿ, ಧರ್ಮ. ಜಗತ್ತನ್ನು ಕಾಣುತ್ತ ಜಗತ್ತಿನಲ್ಲೆಲ್ಲ ಸಂಚರಿಸುತ್ತ ಇರುವ ನಾನು, ಶಾಕಾಹಾರಿಗಳು ಒಟ್ಟಿನ ಮೇಲೆ ಮಾಂಸಾಹಾರಿಗಳಿಗಿಂತ ಬಹಳ ಆರೋಗ್ಯಶಾಲಿಗಳಾಗಿದ್ದಾರೆಂದು ನಿಮಗೆ ಹೇಳಲಾರೆ. ನಾನು ಹುಟ್ಟಿದ ದೇಶ, ಅಭ್ಯಾಸದಿಂದಲೋ ಅವಶ್ಯಕತೆಯಿಂದಲೋ ಬಹುತರ ಶಾಕಾಹಾರಿಯಾಗಿದೆ. ಆದುದರಿಂದ ಆ ಮೂಲಕ ಹೆಚ್ಚು ಸಹನಶಕ್ತಿ, ಧೈರ್ಯ, ಅಥವಾ ನಿರೋಗತೆಯುಂಟಾದೀತೆಂದು ಹೇಳಲಾರೆ. ಅದು ಒಂದು ವಿಶಿಷ್ಟ, ಆತ್ಮೀಯ ವಿಚಾರ. ಅದರಲ್ಲಿ ಆರೋಗ್ಯ ಶಾಸ್ತ್ರದ ಎಲ್ಲ ನಿಯಮಗಳಿಗೂ ವಿಧೇಯತೆ, ಅವಿಚಲ ವಿಧೇಯತೆ, ಆವಶ್ಯಕವಾಗಿದೆ." ಆದುದರಿಂದ, ನನ್ನನ್ನು ಕೇಳಿದರೆ, ಶಾಕಾಹಾರವಾದಿಗಳು ಶಾಕಾಹಾರವ್ರತದ ಭೌತಿಕ ಪೂರ್ವಾಪರಗಳನ್ನು ಒತ್ತಿಹೇಳದೆ ನೈತಿಕ ಪೂರ್ವಾಪರಗಳನ್ನು ವಿನಿಯೋಗಿಸಿಕೊಂಡರೆ ಒಳಿತು. ನಾವು ಇನ್ನೂ ಎಷ್ಟೋ ಅಂಶಗಳಲ್ಲಿ ಪಶುಗಳೊಡನೆ ಸಮಾನಧರ್ಮರಾಗಿಯೆ ಇದ್ದೇವೆ, ನಿಜ. ಆದರೂ ಪಶುವಿಗೂ ನಮಗೂ ಭೇದವನ್ನುಂಟುಮಾಡಿದ ಕೆಲ ವಿಷಯಗಳಿವೆಯೆಂಬುದನ್ನು ನಾವು ಸಾಕಷ್ಟು ಮನಗಂಡಿಲ್ಲ. ಪಶುಲೋಕದಲ್ಲಿ ದನಕರುಗಳು ಶಾಕಾಹಾರಿಗಳಾಗಿವೆ- ನಮಗಿಂತಲೂ ಶ್ರೇಷ್ಠ ಶಾಕಾಹಾರಿಗಳಾಗಿವೆ- ಎಂಬ ಮಾತು ಸುಳ್ಳಲ್ಲ. ಆದರೆ ನಮ್ಮನ್ನು ಶಾಕಾಹಾರವ್ರತಕ್ಕೆ ಪ್ರೇರಿಸುವದು ಅದಕ್ಕೂ ಮಿಗಿಲಾದ ಸಂಗತಿ. ಆದುದರಿಂದಲೆ, ಇಲ್ಲಿ ನಾನು ಸಂಪಾದಿಸಿಕೊಂಡ ಕೆಲ ನಿಮಿಷಗಳ ಭಾಷಣವೇಳೆಯಲ್ಲಿ ಶಾಕಾಹಾರದ ನೈತಿಕ ನೆಲೆಯನ್ನು ಹೇಳುವೆನೆಂದು ಬಗೆದೆ. ನನ್ನ ಸ್ವಂತ ಅನುಭವದಿಂದಲೂ ನನ್ನ ಸಾವಿರಾರು ಗೆಳೆಯರ, ಜೊತೆಗಾರರ ಅನುಭವದಿಂದಲೂ ಈ ಶಾಕಾಹಾರವ್ರತದ ಸಂಬಂಧದಲ್ಲಿ ಅದರ ನೈತಿಕ ತತ್ತ್ವಗಳ ಕಾರಣದಿಂದಲೇ ನಮಗೆ ಮನಸ್ಸಮಾಧಾನ ದೊರಕುವದೆಂದು ಹೇಳಬಲ್ಲೆ.

ಕೊನೆಯದಾಗಿ, ನೀವೆಲ್ಲರೂ ಇಲ್ಲಿ ನೆರೆದು ಶಾಕಾಹಾರವ್ರತಿಗಳನ್ನು ಕಣ್ಣಾರೆ ಕಾಣುವ ಅವಕಾಶವನ್ನೊದಗಿಸಿದುದಕ್ಕಾಗಿ ಧನ್ಯವಾದಗಳನ್ನರ್ಪಿಸುವೆ. ನಿಮ್ಮನ್ನೆಲ್ಲ ನಲುವತ್ತು ವರ್ಷಗಳ ಹಿಂದೆ ನಾನು ಕಂಡಿರುವೆನೆನ್ನಲಾರೆ. ಲಂಡನ್ನಿನ ಶಾಕಾಹಾರಿ ಸಮಾಜದಲ್ಲಿ ಅಂದಿನವರೆ ಬೇರೆ ಇಂದಿನವರೆ ಬೇರೆಯೆಂದು ತೋರುತ್ತದೆ. ಮಿ. ಸಾಲ್ಟರಂತೆ ಸಮಾಜದೊಡನೆ ನಲುವತ್ತು ವರ್ಷಕಾಲ ಸಂಪರ್ಕವುಳ್ಳ ಸದಸ್ಯರು ಬಹಳ ಇರಲಾರರು. ಈಗ ನನಗೆ ಕೆಲ ನಿಮಿಷಗಳ ವೇಳೆಯಿರುವದರಿಂದ ನಿಮಗೆ ಇಷ್ಟವಿದ್ದರೆ ಕೆಲ ಪ್ರಶ್ನೆಗಳನ್ನು ಕೇಳಬಹುದು.

ಆಗ ನಿಮ್ಮ ದೈನಂದಿನ ಭೋಜನದಲ್ಲಿ ಐದೇ ಪದಾರ್ಥಗಳ ಮಿತಿಯನ್ನು ನೀವೇಕೆ ಹಾಕಿಕೊಂಡಿದ್ದೀರೆಂದು ಗಾಂಧಿಯವರನ್ನು ಪ್ರಶ್ನಿಸಲಾಯಿತು. ಅವರು ಹೀಗೆ ಉತ್ತರ ಕೊಟ್ಟರು: ಅದಕ್ಕೂ ಶಾಕಾಹಾರವ್ರತಕ್ಕೂ ಸಂಬಂಧವಿಲ್ಲ .....ಬೇರೊಂದು ಕಾರಣವಿತ್ತು. ನಾನು ಹುಟ್ಟಾ ಕೊಂಡಾಟದ ಕೂಸಾಗಿದ್ದೆ. ಆ ನನ್ನ ಕೀರ್ತಿಯನ್ನು ಕೇಳಿ ನನ್ನನ್ನು ಬರಮಾಡಿಕೊಂಡು ಗೆಳೆಯರು ನಾನಾವಿಧ ಭಕ್ಷಭೋಜ್ಯಗಳನ್ನು ನನ್ನ ಮುಂದೆ ಇರಿಸುತಿದ್ದರು. ಆಗ ನಾನವರಿಗೆ ಹೇಳುತಿದ್ದೆ "ನಾನಿಲ್ಲಿ ಬಂದಿರುವದು ನೆರವಾಗಲೆಂದು. ಹೀಗೆ ನನ್ನನ್ನು ನೀವು ಲಾಲಿಸಿದರೆ ನಾನು ಹಾಳಾಗಿ ಹೋದೇನು." ಆದ್ದರಿಂದ ಐದೇ ಪದಾರ್ಥಗಳಿಗೆ ಭೋಜನವನ್ನು ಮಿತಗೊಳಿಸಿದೆ. ಅದರಿಂದ ನನಗೆ ಇಬ್ಬಗೆಯ ಅನುಕೂಲವಾಯಿತು. ಅಲ್ಲದೆ ನನ್ನ ಊಟ ತಿಂಡಿ ಸೂರ್ಯಾಸ್ತಮಯದೊಳಗೆ ಮುಗಿಯಬೇಕೆಂದು ನಿಯಮ ಹಾಕಿಕೊಂಡೆ. ಅದರಿಂದ ನಾನೆಷ್ಟೋ ದುರ್ಘಟ ಪ್ರಸಂಗಗಳಿಂದ ಪಾರಾದೆ. ಆ ವಿಷಯದಲ್ಲಿ ಆರೋಗ್ಯ ದೃಷ್ಟಿಯಿಂದ ಹಲವು ಸಂಶೋಧನೆಗಳಾಗಿವೆ. ನಾವು ಆಹಾರವನ್ನು ಸರಳವಾಗಿ ಮಾಡುತ್ತ ಹೋಗಬೇಕೆಂದು ಆಹಾರ ತಜ್ಞರು ಹೇಳುತ್ತಾರೆ. ನಮಗೆ ಆರೋಗ್ಯದಿಂದ ಬಾಳಬೇಕೆಂಬ ಸ್ವಾರ್ಥ ಒಂದು ಕಾಲಕ್ಕೆ ಒಂದೇ ವಸ್ತುವನ್ನು ತಿನ್ನುವದು ಒಳಿತು. ಅಪಾಯಕರ ಮಿಶ್ರಣಗಳನ್ನು ಅದನ್ನು ವರ್ಜಿಸಬೇಕು. ಒಟ್ಟಿನಲ್ಲಿ ಹಾಲ್ಕೆ ದರು ಒಂದೊಂದು ಅಭಿಪ್ರಾಯಪಡುವದರಿಂದ ನಾನು ವಸ್ತುಗಳ ಸಂಖ್ಯೆಯನ್ನು ಹೆಚ್ಚಿಸುವದಲ್ಲದೆ ಭೋಜ್ಯಗಳನ್ನಲ್ಲ.

ಅಲ್ಲದೆ, ಪಂಚಪಕ್ವಾನ್ನಗಳ ವ್ರತದಿಂದ ನನಗೆ ನೈತಿಕ ಹಾಗು ಭೌತಿಕ ಪ್ರಯೋಜನವಾಗಿದೆಯೆಂದು ನನ್ನ ನಂಬಿಕೆ. ಭೌತಿಕ ಪ್ರಯೋಜನವೆಂದರೆ, ನನ್ನ ದೇಶ ಬಡದೇಶ, ಅಲ್ಲಿ ಹವಾಕಾಲಗಳು ಅದಿನ ಹಾಲು ದೊರಕುವದು ದುಸ್ಸಾಧ್ಯ ಹಣ್ಣು ಹಂಪಲು ದ್ರಾಕ್ಷಿಗಳು ಸಿಗುವದಂತೂ ಬಹಳ ಕಠಿಣ. ನಾನು ಬಡವರ ಮನೆಗಳಿಗೆ ಭೆಟ್ಟಿ ಕೊಡಬೇಕಾಗುತ್ತದೆ. ಅವರಿಂದ ದ್ರಾಕ್ಷಿ ಹಣ್ಣುಗಳನ್ನು ನಾನು ಅಪೇಕ್ಷಿಸತೊಡಗಿದರೆ ಅವರು ನನ್ನನ್ನು ದೂರದಿಂದಲೆ ಕೈಮುಗಿದು ಬಿಡಬಹುದು. ಆದ್ದರಿಂದ ಪಂಚಪಕ್ವಾನ್ನಗಳ ನಿಯಮ ಹಾಕಿಕೊಂಡದ್ದು ಸಾಂಪತ್ತಿಕ ದೃಷ್ಟಿಯಿಂದ ಅವರಿಗೂ ಅನುಕೂಲವಿದೆ.

ಆಗ---ಈಗ

ಹದಿನೆಂಟು ವರ್ಷದ ತರುಣರಾಗಿ ಗಾಂಧೀಜಿ ಇಂಗ್ಲಂಡಿಗೆ ಕಾಯಿದೆ ಕಲಿಯಲು ಹೊರಟಾಗ ತಾಯಿಯ ಮುಂದೆ ಮಾಂಸಾಹಾರವನ್ನು ಮುಟ್ಟುವದಿಲ್ಲೆಂದು ಪ್ರತಿಜ್ಞೆ ಮಾಡಿದ್ದರು. ಹಡಗಿನಲ್ಲಿ ಒಬ್ಬ ಸ್ನೇಹಶೀಲ ಯುರೋಪಿಯನ್ನನು ಇಂಗ್ಲಂಡಿನಲ್ಲಿ ಅತಿಶಯ ಚಳಿ ಇದ್ದುದರಿಂದ ಅಲ್ಲಿ ಮಾಂಸ ತಿನ್ನದೆ ಬಾಳಲು ಸಾಧ್ಯವಿಲ್ಲೆಂದು ಹೇಳಿದನು. ಹಾಗಿರುವದು ನಿಜವೆಂದು ಅರಿತಾದರೆ ನಾವು ಸ್ವದೇಶಕ್ಕೆ ಮರಳಬಹುದೇ ಹೊರತು ತಾಯಿಗೆ ಕೊಟ್ಟ ವಚನವನ್ನು ಮುರಿಯುವಂತಿಲ್ಲೆಂದು ಆಗ ಗಾಂಧೀಜಿ ಉತ್ತರ ಕೊಟ್ಟಿದ್ದರು. ಆ ವಚನವನ್ನು ಕಾಪಾಡಿಕೊಳ್ಳಲು ಅವರು ಪಟ್ಟ ಶ್ರಮವೂ ಅದರಲ್ಲಿ ಕೊನೆಗೆ ಅವರಿಗೆ ದೊರೆತ ಯಶಸ್ಸೂ ಅವರ ಜೀವನದ ಅತ್ಯಂತ ಮನೋಜ್ಞ ವೃತ್ತಾಂತಗಳಲ್ಲೊಂದಾಗಿದೆ. ಅದು ಅವರ ಭಾವೀ ಮಹತಿಯ ಅಡಿಗಲ್ಲಾಯಿತು.

ಅಂದಿನಿಂದ ಅರ್ಧ ಶತಮಾನ ಕಳೆದು ಹೋಗಿದೆ. ಭಾರತದಿಂದ ಇಂಗ್ಲಂಡಿಗೆ ಹೋಗುವವರಿಗೆ, ಅಲ್ಲಿ ಶಾಕಾಹಾರಿಗಳಾಗಿ ಬಾಳುವದೇ ಅಸಾಧ್ಯವೆಂದು ಈಗಲೂ ಹೇಳುವವರಿದ್ದಾರೆ. ಆದರೆ ಲಂಡನ್ ಶಾಕಾಹಾರಿ ಸಮಾಜದವರು ಹೊರಡಿಸಿದ ಒಂದು ಹಸ್ತಪತ್ರಿಕೆಯಲ್ಲಿ ಹಾಗೆ ಬಾಳುವ ೧ ಲಕ್ಷ ಇಂಗ್ಲೀಷು ಜನರು ಇಂಗ್ಲಂಡಿನಲ್ಲಿದ್ದಾರೆಂದು ತೋರಿಸಿಕೊಡಲಾಗಿದೆ. "ಆದರೆ ಯುದ್ಧ ಕಾಲದಲ್ಲಿ ಪ್ರಾರಂಭಿಸಲ್ಪಟ್ಟು ಈಗಲೂ ಆಚರಣೆಯಲ್ಲಿರುವ ಸೀದಾ ನಿಯಮಗಳಿಗನುಸಾರವಾಗಿ ಶಾಕಾಹಾರಿ ಸೀದಾ ಪುಸ್ತಕವನ್ನು ದೊರಕಿಸುವ ರೀತಿ ಗೊತ್ತಿಲ್ಲದವರಿಗೆ ಶಾಕಾಹಾರಿಗಳಾಗಿ ದಿನ ಕಳೆಯುವದು ದುಷ್ಕರವಾಗಿದೆ. ಅಂಥ ಸೀದಾ ಪುಸ್ತಕಗಳಲ್ಲಿ ಲಂಡನ್ ಶಾಕಾಹಾರಿ ಸಮಾಜದ ಕಾರ್ಯದರ್ಶಿಯ ಪ್ರತಿ ಸಹಿಯಿರಬೇಕೆಂದು ವಿಧಿಸಲ್ಪಟ್ಟಿದೆ. ವಸತಿಗಳ ಕೊರತೆಯ ಮೂಲಕ ಶಾಕಾಹಾರಿ ಕುಟುಂಬಗಳ ಸಂಗಡ ವಸತಿ ಸೌಕರ್ಯ ದೊರಕಿಸುವದೂ ಕಠಿನವಾಗಿದ್ದು ಆ ಬಗ್ಗೆ ಭಾರತೀಯ ವಿದ್ಯಾರ್ಥಿಗಳು ಶಾಕಾಹಾರಿಗಳ ಮೂರು ಪತ್ರಿಕೆಗಳಲ್ಲೊಂದರಲ್ಲಿ ಮುಂದಾಗಿ ಜಾಹಿರಾತು ಕೊಟ್ಟರೆ ಅನುಕೂಲ" ಎಂದು ಆ ಹಸ್ತಪತ್ರಿಕೆಯಲ್ಲಿ ಸೂಚನೆ ಕೊಡಲಾಗಿದೆ. ಲಂಡನ್ ಶಾಕಾಹಾರಿ ಸಮಾಜದ ನೆರವನ್ನು ಬಯಸುವವರು ಅದರ ಕಾರ್ಯದರ್ಶಿಗಳೂ "Vegetarian News" ತ್ರೈಮಾಸಿಕದ ಸಂಪಾದಕರೂ ಆದ ಮಿ. ರಾಯ ವಾಕರರಿಗೆ ಬರೆಯಬೇಕು. "ಶಾಕಾಹಾರ ವ್ರತದ ನೈತಿಕ ನೆಲೆಗಟ್ಟು" ಎಂಬ ವಿಷಯದ ಮೇಲೆ ಗಾಂಧೀಜಿಯವರು ೧೯೩೧ರಲ್ಲಿ ಇಂಗ್ಲಂಡಿಗೆ ಹೋದಾಗ ಆ ಸಮಾಜದಲ್ಲಿ ಕೊಟ್ಟ ಮೇಲಿನ ಭಾಷಣದ ಪಾಠವನ್ನು "Vegetarian News" ನ ೧೯೪೮ ಕ್ರಿಸ್ಮಸ್ ಸಂಚಿಕೆಯಿಂದ ಎತ್ತಿಕೊಳ್ಳಲಾಗಿದೆ.

ದಿಲ್ಲಿ.

೧೯-೧-೪೯ —ಪ್ಯಾರೇಲಾಲ

ರಾಜಕೀಯವೆಂದರೆ ಇನ್ನೊಬ್ಬರಿಂದ ಏನನ್ನಾದರೂ ಪಡೆದು ನಾವೇ ಕೊಟ್ಟಂತೆ ತೋರಿಸಿಕೊಳ್ಳುವ ಬಗ್ಗೆ ರಂತಿಕೆ.

—ಒಂದು ಅಮೇರಿಕನ್ ಪತ್ರಿಕೆ

ಕರ್ಮವೀರ

[illegible] ವರ್ಷ [illegible] ಮಾಘ ಬ ೩ ಸೋಮವಾರ

ಸಮಯೋಚಿತ ನಿರ್ಣಯ

ತುಟ್ಟಿಭತ್ತೆ, ಸಂಬಳದ ಹೆಚ್ಚಳ ಮೊದಲಾದ ತಮ್ಮ ಬೇಡಿಕೆಗಳನ್ನು ಪೂರಯಿಸಿಕೊಳ್ಳುವುದಕ್ಕಾಗಿ ಸಂಪು ಹೂಡಬೇಕೋ ಬೇಡವೋ ಎಂಬ ಬಗ್ಗೆ ರೇಲ್ವೆ ಮಹಾಮಂಡಳದ ಸಭೆ ಮುಗಲಿನಲ್ಲಿ ಕೂಡಿ ಸಂಪು ಹೂಡಬಾರದೆಂಬ ಮಹತ್ವದ ನಿರ್ಣಯವನ್ನು ತೆಗೆದುಕೊಂಡದ್ದು ಅಭಿನಂದನೀಯವಾಗಿದೆ. ರಾಜಕೀಯ ಉದ್ದೇಶಸಾಧನೆಗಾಗಿ ಹೊರಟ ಕಮ್ಯುನಿಸ್ಟ ಪಕ್ಷದ ಬಲೆಯಲ್ಲಿ ಬೀಳದಂತೆ ರೇಲ್ವೆ ಕೆಲಸಗಾರರು ಈ ಸಮಯದಲ್ಲಿ ದಕ್ಷತೆ ವಹಿಸಿದ್ದು ಅವರ ಕರ್ತವ್ಯ ತತ್ಪರತೆಯ ನಿದರ್ಶನವಾಗಿದೆ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಜಯಪ್ರಕಾಶರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಸರಕಾರದ ಕೂಡ ನಡೆದ ವಿಚಾರ ವಿನಿಮಯದ ಪರಿಣಾಮವಾಗಿ ತಮಗೆ ದೊರೆತ ಸೌಲಭ್ಯವನ್ನು ತಿಳಿಸಿದರು. ವಿಚಾರ ವಿನಿಮಯದ ಪರಿಣಾಮವಾಗಿ ಕೆಲಸಗಾರರ ತುಟ್ಟಿಭತ್ತೆ ಹೆಚ್ಚಿದೆ. ಅದು ತೃಪ್ತಿಕರವಾಗಿರದಿದ್ದರೂ ಸರಕಾರದವರು ಬೇಡಿಕೆಯ ಮುಖ್ಯಾಂಶವನ್ನು ಒಪ್ಪಿರುವರು. ಈ ತುಟ್ಟಿಭತ್ತೆ ಕೇಂದ್ರ ಸಂಬಳ ಸಮಿತಿಯವರು ಸೂಚಿಸಿದ್ದಕ್ಕಿಂತ ಕಡಿಮೆಯಾಗಿದೆಯೆಂಬುದನ್ನೂ ಸರಕಾರವು ಒಪ್ಪಿದೆ. ಆರ್ಥಿಕ ಅನಾನುಕೂಲತೆಯ ಮೂಲಕವೇ ಸಂಬಳ ಸಮಿತಿಯ ಪುರಸ್ಕಾರಗಳನ್ನು ಕಾರ್ಯರೂಪದಲ್ಲಿ ತರುವದಾಗಿಲ್ಲ ಎಂದೂ ಸರಕಾರದವರು ಒಪ್ಪಿಕೊಂಡಿದ್ದಾರೆ. ತುಟ್ಟಿಭತ್ತೆ ಹೆಚ್ಚಿಸುತ್ತ ಹೋದಂತೆ ಅತ್ಯವಶ್ಯಕ ವಸ್ತುಗಳ ಬೆಲೆಗಳು ಹೆಚ್ಚುತ್ತ ಹೋಗುವವು. ಆದರಿಂದ ಮತ್ತೆ ತುಟ್ಟಿಭತ್ತೆ ಹೆಚ್ಚಿಸಬೇಕೆಂಬ ಕೂಗು ಏಳುವದು. ಆದುದರಿಂದ ಬೆಲೆಗಳನ್ನು ಕಡಮೆ ಮಾಡುವವರ ಬಗ್ಗೆಯೇ ಉಪಾಯಗಳನ್ನು ಕೈಕೊಳ್ಳಬೇಕೆಂದು ಸರಕಾರದವರು ಯೋಚಿಸುತ್ತಿರುವದು ಸಮಂಜಸವಾಗಿದ್ದು ಅದಕ್ಕಾಗಿ ಅವರಿಗೆ ಅವಧಿಯನ್ನು ಕೊಡತಕ್ಕದ್ದು ನ್ಯಾಯ್ಯವಾಗಿದೆಂದು ಜಯಪ್ರಕಾಶರು ಅಭಿಪ್ರಾಯಪಟ್ಟರು.

ಇಂದು ನಮ್ಮ ಸರಕಾರವು ಎದುರಿಸುತಿರುವ ಸಮಸ್ಯೆಗಳನ್ನು ನೆನೆದರೆ ಅವನ್ನು ಬಿಡಿಸುವದರಲ್ಲಿ ಎಲ್ಲರೂ ಸಹಾಯ ಮಾಡಬೇಕಲ್ಲದೆ ಸಮಸ್ಯೆಗಳನ್ನು ಮತ್ತಷ್ಟು ಹೆಚ್ಚಿಸುವ ಧೋರಣ ಸ್ವೀಕರಿಸುವದು ರಾಷ್ಟ್ರದ್ರೋಹವಾಗುವದು. ವಸ್ತುಸ್ಥಿತಿ ಹೀಗಿರುವಾಗ ಕಮ್ಯುನಿಸ್ಟರು ಜಯಪ್ರಕಾಶರ ಮೇಲೆ ಮಾಡಿದ ಹೀನ ಆರೋಪಗಳು ಖಂಡನೀಯವಾಗಿವೆ. ನಾಗಪುರದಲ್ಲಿ ಅವಸಿನ್ನಯದ ಪ್ರಕಾರವೆ ಜಯಪ್ರಕಾಶರು ಸರಕಾರದ ಕೂಡ ಮಾತುಕತೆ ನಡೆಸಿರುವಾಗ ಅದೆಲ್ಲ ಅನಧಿಕೃತವೆಂದು ಹೇಳುವುದು ನ್ಯಾಯ್ಯವಾಗಲಾರದು. ಇನ್ನು ಮೇಲಾದರೂ ಕಮ್ಯುನಿಸ್ಟರು ತಮ್ಮ ಧೋರಣವನ್ನು ತಿದ್ದಿಕೊಳ್ಳುವದು ಕರ್ತವ್ಯವಾಗಿದೆ. ಮಹಾಮಂಡಳದ ಅಧ್ಯಕ್ಷರಾದ ಶ್ರೀ ಜಯಪ್ರಕಾಶರು ರೇಲ್ವೆ ಕೆಲಸಗಾರರಿಗೆ ಸಮಯೋಚಿತವಾದ ಸಲಹೆಯನ್ನು ಕೊಟ್ಟು ರಾಷ್ಟ್ರಘಾತಕವಾದ ಸಂಪಿನಿಂದ ಅವರನ್ನು ಪರಾವೃತ್ತ ಮಾಡಲು ಮುಂಬಂದುದಕ್ಕಾಗಿ ಅವರನ್ನು ಹಾರ್ದಿಕವಾಗಿ ಅಭಿನಂದಿಸುತ್ತೇವೆ. ತಮ್ಮ ಅಧ್ಯಕ್ಷರ ಅಭಿಪ್ರಾಯವನ್ನು ಮನ್ನಿಸಿ, ಪರಿಸ್ಥಿತಿಯನ್ನು ಸರಿಯಾಗಿ ತಿಳಿದುಕೊಂಡು ರೇಲ್ವೆ ಮಹಾಮಂಡಳದವರು ಸದ್ಯದಲ್ಲಿ ಸಂಪು ಹೂಡಕೂಡದು ಎಂದು ನಿರ್ಣಯಿಸಿದ್ದು ಸಮಯೋಚಿತ ಮತ್ತು ಸ್ವಾಗತಾರ್ಹವಾಗಿದೆ. ಮಹಾಮಂಡಳದವರು ಇಂತು ನಿರ್ಣಯಿಸಿದರೂ ಪಡೆಸಿರುವಾಗ ಕಮ್ಯುನಿಸ್ಟ ಪಕ್ಷದ ಬೆಂಬಲವಿರುವ ಎ. ಐ. ಆರ್. ಪಿ. ಎಂಬ ಶಿವಸೇನಾ ಎ. ಐ. ರೇಲ್ವೆ ಯೂನಿಯನ್‌ಗಳು ಸಂಪು ಹೂಡುವ ನೋಟೀಸು ಕೊಡಬೇಕೆಂದು ನಿರ್ಧರಿಸಿ ಶಿಸ್ತು ಭಂಗಮಾಡಿದ್ದರಿಂದ ಅವನ್ನು ಮಹಾಮಂಡಳದಿಂದ ಹೊರಗೆ ಹಾಕಿದ್ದು ಉಚಿತವಾಗಿದೆ ಯಾವುದೊಂದು ಸಂಸ್ಥೆಯು ಯಶಸ್ವಿಯಾಗಿ ಕಾರ್ಯ ಸಾಗಿಸಬೇಕಾದರೆ ಅದರ ಅಂಗೋಪಾಂಗಗಳಲ್ಲಿ ಶಿಸ್ತು ಆಜ್ಞಾ ಪರಿಪಾಲನೆ ಮೊದಲಾದವು ಅವಶ್ಯವೆಂದು ಪ್ರತ್ಯೇಕ ಹೇಳಬೇಕಿಲ್ಲ ಕಮ್ಯುನಿಸ್ಟ ಕಾರ್ಯಕರ್ತರು ಇನ್ನು ಮೇಲಾದರೂ ತಮ್ಮ ಕರ್ತವ್ಯವನ್ನು ತಿಳಿದುಕೊಂಡು ಮಹಾಮಂಡಳದ ನಿರ್ಣಯದಂತೆ ವರ್ತಿಸಬೇಕಲ್ಲದೆ ಸಂಪು ಮೊದಲಾದ ನಿರರ್ಥಕ ನಿರ್ಣಯ ಕೈಕೊಂಡು ತಮ್ಮ ಮತ್ತು ದೇಶದ ಹಾನಿಗೆ ಕಾರಣರಾಗಬಾರದೆಂದು ನಾವು ಬಲವಾಗಿ ಸೂಚಿಸಬಯಸುತ್ತೇವೆ. ರಾಜಕೀಯ ಉದ್ದೇಶ ಸಾಧನೆಯ ಮಾರ್ಗವೂ ಇದಲ್ಲ ಎಂಬದನ್ನು ಕಮ್ಯುನಿಸ್ಟರು ಬೇಗ ತಿಳಿದುಕೊಂಡಷ್ಟು ಒಳ್ಳೆತು.



ಸುದ್ದಿಮಂತ್ರಿ ಮಾನ್ಯ ರಂ. ರಾ. ದಿವಾಕರರು, ಈಚೆಗೆ ದಿಲ್ಲಿಯಲ್ಲಿ ಕೂಡಿದ ಸುದ್ದಿ ಮಂತ್ರಿಗಳ ಪರಿಷತ್ತಿನ ಕಾಲಕ್ಕೆ ಕರ್ನಾಟಕದ ಪ್ರತಿನಿಧಿಗಳೊಡನೆ:

ಮೈಸೂರು ಮುಖ್ಯಮಂತ್ರಿ ಶ್ರೀ ಚೆಂಗಲರಾಯರೆಡ್ಡಿ. ಭಾರತದ ಪ್ರೆಸ್ ಟ್ರಸ್ಟಿನ ನಿರ್ದೇಶಕರಲ್ಲೊಬ್ಬರಾದ ಶ್ರೀ ಹ. ರಾ. ಮೊಹರೆ, ಶ್ರೀ ರಂ. ರಾ. ದಿವಾಕರ, ಘಟನಾ ಸಮಿತಿ ಸದಸ್ಯ ಶ್ರೀ ಎಸ್. ವಿ. ಕೃಷ್ಣಮೂರ್ತಿರಾವ ಹಾಗು ಶ್ರೀ ಚಂದ್ರಶೇಖರಯ್ಯನವರನ್ನು ಚಿತ್ರದಲ್ಲಿ ಕಾಣಬಹುದು.

ವಾರದ ಸಿಂಹಾವಲೋಕನ

ರೇಲ್ವೆ ಮುಂಗಡ ಪತ್ರಿಕೆ

ಹಿಂದುಸ್ತಾನದ ರೇಲ್ವೆ ಮಂತ್ರಿಗಳಾದ ಮಾನ್ಯ ಗೋಪಾಲಸ್ವಾಮಿ ಅಯ್ಯಂಗಾರರು ೧೫ ನೆಯ ತಾರೀಖಿನ ದಿನ ರೇಲ್ವೆ ಮುಂಗಡ ಪತ್ರಿಕೆಯನ್ನು ಹಿರಿಯೋಲಗದಲ್ಲಿ ಮಂಡಿಸಿರುವರು. ಅದರ ಅಂಕಗಳನ್ನು ಇದೇ ಸಂಚಿಕೆಯಲ್ಲಿ ಬೇರೆ ಕಡೆ ಕೊಟ್ಟಿವೆ. ಅವನ್ನು ಅವಲೋಕಿಸಿದ್ದಾದರೆ ಕಳೆದ ವರುಷ ರೇಲ್ವೆಗಳಿಂದ ೧೫ ಕೋಟಿ ರೂಪಾಯಿಗಳ ಆದಾಯ ಹೆಚ್ಚಾಗಿದೆಂಬುದು ಕಂಡುಬರುವದು. ಮುಂದಿನ ವರ್ಷ ೯ ಕೋಟಿ ರೂಪಾಯಿಗಳಷ್ಟು ಉಳಿತಾಯವಾಗುವದೆಂದು ಮಂತ್ರಿಗಳು ಅಡಸಟ್ಟೆ ಮಾಡಿದ್ದಾರೆ. ಇವೆರಡೂ ಅಂಕಗಳನ್ನು ನೋಡಿದರೆ ರೇಲ್ವೆಗಳ ಭವಿತವ್ಯವು ಆಶಾಜನಕವಾಗಿದೆಂದು ಕಂಡುಬರದಿರಲಾರದು. ರೇಲ್ವೆ ಕೆಲಸಗಾರರಿಗೆ ಕೊಟ್ಟ ಹೆಚ್ಚಿನ ತುಟ್ಟಿಭತ್ತೆಗಾಗಿ ೯ ಕೋಟಿ ರೂಪಾಯಿ ಹೆಚ್ಚಿಗೆ ವೆಚ್ಚ ಬಂದಿದ್ದರೂ ೧೫ ಕೋಟಿಯಷ್ಟು ಉಳಿತಾಯವಾದುದು ನಿಜವಾಗಿ ಅಭಿನಂದನೀಯವಾಗಿದೆ. ಪರಕೀಯ ಸರಕಾರವು ಈ ರೇಲ್ವೆ ಮಾರ್ಗಗಳಿಂದ ತಮ್ಮ ಲಾಭವನ್ನು ಹೇಗೆ ಮಾಡಿಕೊಳ್ಳುತ್ತಿದ್ದರೆಂಬುದು ಇದೀಗ ಬೇರೆ ಹೇಳಬೇಕಿಲ್ಲ. ಆದರೆ ಇಂದು ನಮ್ಮ ಸರಕಾರದ ಈ ಲಾಭವೆಲ್ಲ ಜನತೆಗೆ ಸೌಕರ್ಯಗಳನ್ನೊದವಿಸಿ ಕೊಡುವದರಲ್ಲಿಯೆ ವ್ಯಯವಾಗುವದೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ. ರೇಲ್ವೆಗಳಲ್ಲಿ ಇಷ್ಟೊಂದು ಉಳಿತಾಯವಾಗುತ್ತಿದ್ದರೂ ಪ್ರವಾಸಿಕರ ಅನುಕೂಲತೆ ಮತ್ತು ಸರಕುಗಳ ಸಾಗಾಟದತ್ತ ರೇಲ್ವೆ ಖಾತೆಯವರು ಕೊಡಬೇಕಾದಷ್ಟು ಲಕ್ಷ್ಯವನ್ನು ಕೊಟ್ಟಿಲ್ಲೆಂದು ವಿಷಾದಿಸಬೇಕಾಗಿದೆ. ೩ ನೇ ವರ್ಗದ ಪ್ರಯಾಣಿಕರ ಗೋಳನ್ನಂತೂ ಕೇಳುವವರೇ ಇಲ್ಲ. ಇತ್ತೀಚೆ ಇಂಟರ ವರ್ಗವನ್ನು ತೆಗೆದು ಹಾಕಿದ್ದರಿಂದ ಎರಡನೇ ವರ್ಗದಲ್ಲಿಯೆ ಅವರು ಪ್ರವಾಸ ಮಾಡಬೇಕಾಗಿ ಬಂದದ್ದರಿಂದ ಅಲ್ಲಿ ಜನಸಮ್ಮರ್ದ ವಿಪರೀತವಾಗಹತ್ತಿದೆ. ಇದನ್ನು ಹೋಗಲಾಡಿಸುವದು ಅವಶ್ಯವಾಗಿದೆ. ಅದೇ ರೀತಿಯಾಗಿ ರೇಲ್ವೆಗವಲ್ಲಿ ನೀರು, ಸ್ವಚ್ಛತೆ ಮತ್ತು ಇತರ ಅನುಕೂಲತೆಗಳ ಬಗ್ಗೆಯೂ ಸರಕಾರದವರು ಪಕ್ಷತೆ ವಹಿಸಬೇಕು. ಉಳಿತಾಯದ ಮುಂಗಡ ಪತ್ರಿಕೆಯಿಂದಲೆ ರೇಲ್ವೆ ಮಂತ್ರಿಗಳು ಸಮಾಧಾನ ಹೊಂದದೆ ಮೇಲೆ ಹೇಳಿದ ಅನುಕೂಲತೆಗಳನ್ನೂ ಕಲ್ಪಿಸಿಕೊಡುವರೆಂದು ಆಶಿಸುತ್ತೇವೆ.

ಅಸಮಂಜಸ ಧೋರಣೆ

ಮೈಸೂರು ಮತ್ತು ಒಕ್ಕೂಟ ಕರ್ನಾಟಕ ಒಟ್ಟುಗೂಡಿ ಅಖಂಡ ಕರ್ನಾಟಕ ಪ್ರಾಂತವಾಗಬೇಕೆಂಬ ಪ್ರಯತ್ನಗಳು ಭರದಿಂದ ಸಾಗಿರುವಾಗ ಮೈಸೂರು ಕಾಂಗ್ರೆಸ್ಸು ಪ್ರತ್ಯೇಕವಾಗಿ ಉಳಿಯಬೇಕೆಂದು ಸಂಸ್ಥಾನ ಕಾಂಗ್ರೆಸ ಕಾರ್ಯಕಾರಿ ಸಮಿತಿಯು ಹಂಬಲಿಸುವದು ತುಂಬ ಅಶ್ಚರ್ಯದ ಮತ್ತು ವಿಷಾದದ ಸಂಗತಿಯಾಗಿದೆ. ಈ ಮೊದಲು ಸಂಸ್ಥಾನ ಕಾಂಗ್ರೆಸ್ಸು ಶಿಮೂರಿನ ಅಧಿವೇಶನದಲ್ಲಿ ಇಂಥದೊಂದು ಗೊತ್ತುವಳಿ ಮಾಡಿದ್ದಿತು. ಆದರೆ ಅಖಿಲ ಭಾರತ ಕಾಂಗ್ರೆಸ್ಸು ಅದಕ್ಕೆ ಒಪ್ಪಿಗೆ ಕೊಡಲಿಲ್ಲ. ಅನಂತರ ಜಯಪುರ ಕಾಂಗ್ರೆಸ ಅಧಿವೇಶನದಲ್ಲಿ ಹೊಸದಾಗಿ ರಚಿಸಬೇಕಾದ ಕಾಂಗ್ರೆಸ ಸಮಿತಿಗಳು ರಚಿಸಲ್ಪಟ್ಟಿವೆ. ಇಷ್ಟೆಲ್ಲ ಆಗಿದ್ದರೂ ಮೊನ್ನೆ ಬೆಂಗಳೂರಿನಲ್ಲಿ ಕೂಡಿದ ಮೈಸೂರು ಕಾಂಗ್ರೆಸ ಕಾರ್ಯ ಸಮಿತಿಯು ಮತ್ತೆ ಹಿಂದಿನ ಪ್ರಶ್ನೆಯನ್ನೇ ಎತ್ತಿ ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಸಮಿತಿಯಿಂದ ಪ್ರತ್ಯೇಕವಾಗಿ ಉಳಿಯಬೇಕೆಂದು ನಿರ್ಣಯಿಸಿತು. ಮೈಸೂರು ಕಾಂಗ್ರೆಸ್ಸಿನ ಈ ಬೇಡಿಕೆಯನ್ನು ಅಖಿಲ ಭಾರತ ಕಾಂಗ್ರೆಸ್ಸು ಮನ್ನಿಸುವಂತೆ ಪ್ರಯತ್ನ ಮಾಡಲು ಮೈಸೂರು ಸಂಸ್ಥಾನ ಕಾಂಗ್ರೆಸ ಅಧ್ಯಕ್ಷರಾದ ಶ್ರೀ ಸಿದ್ದಲಿಂಗಯ್ಯನವರ ನೇತೃತ್ವದಲ್ಲಿ ನಿಯೋಗ ಮಂಡಳವನ್ನು ಕಳಿಸಬೇಕೆಂದೂ ನಿರ್ಧರಿಸಲಾಗಿದೆ. ಮೈಸೂರು ಮತ್ತು ಒಕ್ಕೂಟ ಕರ್ನಾಟಕದ ಭಾಗ ಈ ವರೆಗೆ ಆಡಳಿತೆಯ ದೃಷ್ಟಿಯಿಂದ ಭಿನ್ನವಾಗಿದ್ದರೂ ಉಳಿದೆಲ್ಲ ಚಟುವಟಿಕೆಗಳು ಎರಡೂ ಭಾಗಗಳಲ್ಲಿ ಕೂಡಿಯೇ ಸಾಗಿವೆ. ಕನ್ನಡ ಸಾಹಿತ್ಯ ಪರಿಷತ್ತು, ಪ್ರಾಂತೀಯ ಕಾಂಗ್ರೆಸ್ಸು, ಚರಖಾ ಸಂಘ ಮೊದಲಾದ ಸಂಸ್ಥೆಗಳು ಎರಡೂ ಭಾಗಗಳಲ್ಲಿ ಸಾಂಸ್ಕೃತಿಕ ಶೈಕ್ಷಣಿಕ ರಾಜಕೀಯ ಮೊದಲಾದ ಚಟುವಟಿಕೆಗಳನ್ನು ಸಾಗಿಸುತ್ತ ಬಂದಿವೆ. ಹಿಂದೆ ಸಂಸ್ಥಾನಗಳಲ್ಲಿಯ ಸಮಸ್ಯೆಗಳು ಭಿನ್ನವಾಗಿದ್ದರಿಂದ ಅವುಗಳ ಪರಿಹಾರಕ್ಕಾಗಿ ಪ್ರತ್ಯೇಕ ಕಾಂಗ್ರೆಸ ಸಮಿತಿಗಳು ಸಂಸ್ಥಾನಗಳಲ್ಲಿ ಇರಲಿ ಎಂದು ಕಾಂಗ್ರೆಸ್ಸು ನಿರ್ಧರಿಸಿತ್ತಲ್ಲದೆ, ಒಂದೇ ಭಾಷೆಯನ್ನಾಡುವ ಭಾಗಗಳಲ್ಲಿ ಎರಡು ಕಾಂಗ್ರೆಸ ಸಮಿತಿಗಳಿರಬೇಕೆಂಬ ವಿಚಾರದಿಂದಲ್ಲ ಎಂಬುದು ಸ್ಪಷ್ಟವಿದೆ. ಸದ್ಯದಲ್ಲಿ ಸಂಸ್ಥಾನ ಸಮಸ್ಯೆಯೂ ಬಗೆಹರಿದದ್ದರಿಂದ ಅಲ್ಲಿ ಪ್ರತ್ಯೇಕ ಕಾಂಗ್ರೆಸ ಸಮಿತಿಗಳಿರುವ ಕಾರಣವೇ ಉಳಿದಿಲ್ಲ. ಈ ಪರಿಸ್ಥಿತಿಯಲ್ಲಿ ನಮ್ಮ ಮೈಸೂರು ಕಾಂಗ್ರೆಸ್ಸ ಕಾರ್ಯಕರ್ತರು ಹಿಡಿದು ಹೋಗುವ ನಿರ್ಧಾರ ಮಾಡುವದು ಯಾವ ರೀತಿಯಿಂದಲೂ ಸಮಂಜಸವಾಗದು. ಮೈಸೂರು ಕಾಂಗ್ರೆಸ್ಸು ತನ್ನೀ ಧೋರಣವನ್ನು ತಿದ್ದಿಕೊಳ್ಳಬೇಕೆಂದೂ ಅಖಿಲ ಭಾರತ ಕಾಂಗ್ರೆಸ ಸಮಿತಿಯು ಈ ಸಮಯದಲ್ಲಿ ಅವರಿಗೆ ಸೂಕ್ತ ಸಲಹೆ ಕೊಟ್ಟು ಅಖಂಡ ಕರ್ನಾಟಕ ಪ್ರಾಂತರಚನೆಗೆ ಸಹಾಯ ಮಾಡಬೇಕೆಂದೂ ಬಿನ್ನವಿಸಿಕೊಳ್ಳುತ್ತೇವೆ.

ಧಾರ್ಮಿಕ ಉಂಬಳಿ ಮಸೂದೆ

ಹಿಂದೂ ಗುಡಿ ಮತ್ತು ಮಠಗಳನ್ನು ಸರಕಾರದ ನಿಯಂತ್ರಣ ಮತ್ತು ಆಡಳಿತದಲ್ಲಿ ತರುವುದರ ಸಂಬಂಧದ ಧಾರ್ಮಿಕ ಉಂಬಳಿ ಮಸೂದೆಯು ಮದ್ರಾಸ ಶಾಸನ ಸಭೆಯಲ್ಲಿ ಮಂಡಿಸಲ್ಪಟ್ಟು ಪರಿಶೀಲಕ ಸಮಿತಿಗೆ ಒಪ್ಪಿಸಲ್ಪಟ್ಟಿದ್ದು ತಿಳಿದ ಸಂಗತಿಯಾಗಿದೆ. ಮಠಗಳನ್ನು ಈ ಮಸೂದೆಯ ಕಕ್ಷೆಯಲ್ಲಿ ತರಬಾರದು ಎಂಬ ಬಗ್ಗೆ ಮದ್ರಾಸಿನ ಹಲಪ್ರಸಿದ್ಧ ಕಾಯದೆ ಪಂಡಿತರು ಮದ್ರಾಸ ಮುಖ್ಯಮಂತ್ರಿಗಳಿಗೆ ಕಾರಣಸಹಿತ ಮನವಿ ಮಾಡಿಕೊಂಡಿದ್ದರೂ ಆ ಸರಕಾರದವರು ಅದನ್ನು ಮನ್ನಿಸದೆ ಮಸೂದೆಯನ್ನು ಮಂಡಿಸಿಬಿಟ್ಟರು. ಇದನ್ನು ನೋಡಿದರೆ ಮದ್ರಾಸ ಸರಕಾರದವರು ಈ ವಿಷಯದಲ್ಲಿ ಎಷ್ಟೊಂದು ದುಡುಕುತ್ತಿರುವರೆಂಬುದು ಗೊತ್ತಾಗದಿರದು. ಈ ಗುಡಿ-ಮಠಗಳ ಆಡಳಿತೆ ಸರಿಯಿರುವದಿಲ್ಲ ಲಂಚಗುಳಿತನ ಅಪವ್ಯಯ ಮೊದಲಾದವುಗಳು ಅನಿರ್ಬಂಧ ಸಾಗುತಿವೆ; ಇದರಲ್ಲಿ ಸುಧಾರಣೆಯಾಗದಿದ್ದರೆ ಹಿಂದೂ ಧರ್ಮಕ್ಕೇ ಗಂಡಾಂತರ ಬರುವದು ಎಂದು ಮುಂತಾಗಿ ಸರಕಾರದವರು ಈ ಮಸೂದೆ ಅವಶ್ಯಕವಾಗಿದೆ ಎಂಬುದಕ್ಕೆ ಕಾರಣಗಳನ್ನು ಕೊಡುವದುಂಟು. ಆದರೆ ದುರಾಡಳಿತವನ್ನು ಇಲ್ಲವೆ ಲಂಚಗುಳಿತನವನ್ನು ಹೋಗಲಾಡಿಸಲು ಆಯಾ ಮಠಗಳ ಶಿಷ್ಯರಿರುವರಲ್ಲದೆ ನ್ಯಾಯಾಲಯಗಳೂ ಇವೆ. ಸರಕಾರದವರು ಅವುಗಳಲ್ಲಿ ಕೈಹಾಕಿ ಮಠಗಳ ಪಾವಿತ್ರ್ಯವನ್ನು ಹರಣ ಮಾಡುವದರಲ್ಲಿ ಯಾವ ನ್ಯಾಯವಿದೆ? ಸರಕಾರದ ಆಡಳಿತವಿಲ್ಲದೆ ನಿಯಂತ್ರಣಕ್ಕೆ ಬಂದ ಕೂಡಲೆ ಎಲ್ಲವೂ ಸರಿಹೋಗುವದೆಂದು ಅದಾವ ಧೈರ್ಯದಿಂದ ಹೇಳಬೇಕು? ಸರಕಾರದ ನೌಕರ ವರ್ಗವೇನು ಇಂಥ ಈ ಆರೋಪಗಳಿಂದ ಅಲಿಪ್ತವಾಗಿಲ್ಲ! ಸರಕಾರದವರು ಧಾರ್ಮಿಕ ಸಂಸ್ಥೆಗಳಲ್ಲಿ ಇಂತು ಕೈಹಾಕುವದೆಂದರೆ ಘಟನಾ ಸಮಿತಿಯು ಕೊಟ್ಟ ಧಾರ್ಮಿಕ ಸ್ವಾತಂತ್ರ್ಯವನ್ನು ಅಲ್ಲಗಳೆದಂತೆ ಆಗುವದೆಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಈ ರೀತಿ ಮೂಲಭೂತ ಹಕ್ಕನ್ನೇ ಸರಕಾರದವರು ಕಸಿದುಕೊಳ್ಳಹತ್ತಿದರೆ ಉಳಿದ ಗೌಣ ಹಕ್ಕುಗಳನ್ನು ಸರಕಾರವು ಮನ್ನಿಸಬಹುದೆಂದು ಪ್ರಜೆಗಳು ಅದೆಂತು ನಂಬಬೇಕು? ಮದ್ರಾಸ ಸರಕಾರವು ಮಂಡಿಸಿದ ಈ ಮಸೂದೆಯು ಸ್ವೀಕೃತವಾದರೆ ಘಟನಾ ಸಮಿತಿಯು ದಯಪಾಲಿಸಿದ ಧಾರ್ಮಿಕ ಸ್ವಾತಂತ್ರ್ಯದ ಕಲಮನ್ನೇ ಕಿತ್ತಿಹಾಕಬೇಕಾಗುವದು. ಪರಿಶೀಲಕ ಸಮಿತಿಯವರು ಇವನ್ನೆಲ್ಲ ಪೂರ್ಣವಾಗಿ ವಿಚಾರಿಸುವದು ಅವಶ್ಯವಾಗಿದೆ. ಉಳಿದ ಎಲ್ಲ ಧಾರ್ಮಿಕ ಉಂಬಳಿಗಳನ್ನು ಬಿಟ್ಟು ಕೇವಲ ಹಿಂದೂ ಧಾರ್ಮಿಕ ಉಂಬಳಿಗಳ ಮೇಲೆಯೇ ಮದ್ರಾಸ ಸರಕಾರವು ಗದಾಪ್ರಹಾರವನ್ನೇಕೆ ಮಾಡಿರುವರೋ ತಿಳಿಯದು! ಧಾರ್ಮಿಕ ವಿಷಯದ ಇಂಥ ಮಸೂದೆಗಳನ್ನು ತರುವ ಮೊದಲು ಸರಕಾರದವರು ಸಾರ್ವಜನಿಕರ ಅಭಿಪ್ರಾಯವನ್ನು ತೆಗೆದುಕೊಳ್ಳದಿರುವದು ದೊಡ್ಡ ದೋಷವು. ಈ ಮಸೂದೆಯನ್ನು ಈಗಾಗಲೆ ಶ್ರೀ ರಾಘವೇಂದ್ರ ಸ್ವಾಮಿಗಳ ಮಠಾಧಿಪತಿಗಳು ಮತ್ತು ಇನ್ನಿತರ ಮಾನನೀಯರು, ಧಾರ್ಮಿಕ ಸಂಸ್ಥೆಗಳು ಖಂಡಿಸಿದ್ದುಂಟು. ಪರಿಶೀಲಕ ಸಮಿತಿಯವರು ಇದನ್ನೆಲ್ಲ ವಿಚಾರಿಸಿ ಸಮಂಜಸವಾದ ತಿದ್ದುಪಡಿಗಳನ್ನು ಈ ಮಸೂದೆಯಲ್ಲಿ ಮಾಡಬೇಕೆಂದು ಕೇಳಿಕೊಳ್ಳುತ್ತೇವೆ. ಅಲ್ಲಲ್ಲಿನ ಮಹಾಜನಗಳು ಸಭೆಗಳನ್ನು ಕೂಡಿಸಿ ಈ ಮಸೂದೆಯ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಕಳಿಸುವದು ಅವಶ್ಯವಾಗಿದೆ.

ಜಾತೀಯತೆಯನ್ನು ಗೆಲ್ಲುವುದು

ಜಾತೀಯತೆಯನ್ನು ಗೆಲ್ಲಲು ನಿಶ್ಚಿತವಾದ ಕ್ರಮಗಳನ್ನು ಸೂಚಿಸದೇಕೆಂದು ಪತ್ರಕಾರರೊಬ್ಬನು ಕೇಳುತ್ತಾನೆ ಮತ್ತು "ಮಾನವ್ಯವಾದ" ಎಂಬ ಹೊಸ ತತ್ವದ ಆಧಾರದ ಮೇಲೆ "ಸಾರ್ವಪಕ್ಷಸ್ಥಾಪಕ"ವೆನಿಸುವ ವಿಶೇಷ ಸೇವಾದಳದ (ಸ್ವಯಂಸೇವಕ ಸಂಘದ) ನವ ಸಂಸ್ಥೆಯೊಂದನ್ನು ನಿರ್ಮಿಸಬೇಕು ಎಂದು ಸಲಹೆ ಮಾಡುತ್ತಾನೆ.

ನನ್ನ ನಮ್ರ ಮತವೇನೆಂದರೆ, ಸತ್ಕಾರ್ಯ ಮಾಡಲು ಅಥವಾ ಅವಶ್ಯಕ ಸುಧಾರಣೆಯನ್ನು ತರಲು ಹೊಸ ಹೊಸ ಸಂಸ್ಥೆ, ಸಮಿತಿ, ಸ್ವಯಂಸೇವಕದಲ, ತಕ್ಷ ಮುಂತಾದವನ್ನು ಸ್ಥಾಪಿಸುವದು ಅನಗತ್ಯ. ಪ್ರತಿಯೊಂದು ಹೊಸ ಸಂಸ್ಥೆಯೂ ಒಂದು ಹೊಸ ಪಂಗಡವನ್ನು ನಿರ್ಮಿಸಬಹುದು. ಸಂಸ್ಥೆಗಳ ಮೇಲೆ ಸಂಸ್ಥೆಗಳನ್ನು ನಿರ್ಮಿಸುತ್ತ ಹೋಗುವದೇ ನಮ್ಮಲ್ಲಿ ಒಂದು ರೋಗವಾಗಿದೆ ಎಂದು ತೋರುತ್ತದೆ. ಆಗಲೇ ನಮ್ಮಲ್ಲಿ ಜಾತೀಯತೆಯಲ್ಲಿ ನಂಬಿಗೆಯಿಡದ ಅನೇಕ ಸಂಸ್ಥೆಗಳಿವೆ. ಅವುಗಳಲ್ಲಿ ನಾವು ಸ್ಥಾಪಿಸಿದ ಕೇಂದ್ರ, ಪ್ರಾಂತಗಳ ಜಾತ್ಯತೀತ ಸರಕಾರಗಳು, ಕಾಂಗ್ರೆಸ್, ಉದಾರವಾದಿಗಳು, ಸೋಶಲಿಸ್ಟರು, ಮತ್ತು ರಚನಾತ್ಮಕ ಕಾರ್ಯಕ್ರಮದ ಸಂಸ್ಥೆಗಳು ಮುಖ್ಯವಾದವು. ಜಾತೀಯತೆಯ ವಿರುದ್ಧ ಹೋರಾಡಲು ಈ ಸಂಸ್ಥೆಗಳ ಪ್ರತಿನಿಧಿಗಳ ಸಂಯುಕ್ತಸಮಿತಿ ಕೂಡ ಇರುವದು ಅನವಶ್ಯಕ.

ಆದರೆ ಸ್ಪಷ್ಟಾಭಿಪ್ರಾಯಗಳಿಲ್ಲದ, ಈ ವಿಷಯದಲ್ಲಿ ಸಾಕಷ್ಟು ಸರ್ವಗ್ರಾಹಿಯಾದ ಭಾವ, ಭಾವನೆಗಳಿಲ್ಲದ ಜನರು ಈ ಪ್ರತಿಯೊಂದು ಸಂಸ್ಥೆಯಲ್ಲೂ ಇರುವುದು ಇವುಗಳಲ್ಲಿ ನಾನು ಕಂಡ ಪ್ರಥಮ ನ್ಯೂನತೆ.

ಒಬ್ಬ ಸುಲ್ತಾನನಿಗೊಬ್ಬ ಗುಲಾಮನಿದ್ದ. ಸುಲ್ತಾನನು ತನ್ನ ಕುಮಾರನೊಡನೆ ಆಟವಾಡಲು ಒಬ್ಬ ಯೋಗ್ಯ ಗೆಳೆಯನನ್ನು ಹುಡುಕಿಕೊಂಡು ಬಾ ಎಂದು ಗುಲಾಮನಿಗೆ ಹೇಳಿದ. ಗುಲಾಮನಿಗೆ ತನ್ನ ಮಗನಿಗಿಂತ ಯೋಗ್ಯವಾದವನು ಯಾವನೂ ಸಿಕ್ಕಲಿಲ್ಲವಂತೆ. ನಮ್ಮಲ್ಲಿಯ ಪ್ರತಿಯೊಬ್ಬನ ಕತೆಯಾದರೂ ಕೆಲ ಮಟ್ಟಿಗೆ ಹೀಗೇ ಇದೆ. ಭಾರತದಲ್ಲಿರುವ ನಾವು ಸಂಸ್ಕೃತ ಮತ್ತು ವೇದಗಳನ್ನು ಆಧರಿಸಿನಿಂತ ಹಿಂದು ಧರ್ಮದ ಮುದ್ರೆಯನ್ನು ಭಾರತೀಯ ರಾಷ್ಟ್ರೀಯತೆ, ಭಾಷೆ ಮತ್ತು ಸಂಸ್ಕೃತಿಗಳು ತಳೆದಿರಬೇಕು ಎಂಬ ಭಾವವನ್ನು ಬಿಡಲಾರದವರಾಗಿದ್ದೇವೆ. ಜೈನ, ಶೀಖ, ಲಿಂಗಾಯತರೇ ಮೊದಲಾದ ಅವೈದಿಕ ಭಾರತೀಯರಂತೆ ಭಾರತದ ಮುಸಲ್ಮಾನ, ಕ್ರೈಸ್ತ ಮತ್ತು ಪಾರಸಿಕರು ಕೂಡ ಭಾರತದ ಜನತೆ ಮತ್ತು ಸಂಸ್ಕೃತಿಗಳ ಅವಿಭಾಜ್ಯ ಅಂಗಗಳೆಂಬುದನ್ನು ನಾವು ಅರಿಯಲಾರದವರಾಗಿದ್ದೇವೆ. ಪಾಕಿಸ್ತಾನದಲ್ಲಿ ಮುಸಲ್ಮಾನರೂ ಹೀಗೇ ಭಾವಿಸುತ್ತಾರೆ. ಪಾಕಿಸ್ತಾನವೆಂಬ ಪ್ರತ್ಯೇಕ ರಾಜ್ಯವನು, ಇಟ್ಟುಕೊಳ್ಳಬಹುದಾದರೂ ಹಿಂದು ಮುಸಲ್ಮಾನ ಜನಗಳ ಮತ್ತು ಅವರ ನಾಗರಿಕತೆಗಳ ಮಿಶ್ರಣವನ್ನು ನಿಲ್ಲಿಸಲು ಸಾಧ್ಯವಿಲ್ಲವೆಂಬುದನು ಅವರಾದರೂ ಅರಿಯಲು ಅಶಕ್ತರಾಗಿದ್ದಾರೆ. ಏಕೆಂದರೆ, ಹಿಮಾಲಯದ ನದಿಗಳು — ಸಮುದ್ರೋಶದಿಂದ ಯಾರು ಸಿಂಧು ನದಿಯನ್ನು ದಾಟುವರೋ ಅವರೆಲ್ಲ ಯಾವ ಧರ್ಮದವರಿದ್ದರೂ ಹಿಂದುಗಳಾಗುತ್ತಾರೆ- ಎಂದು ಸಾರಿ ಹೇಳುತ್ತಿವೆ. ಅವರು ನಮ್ಮವರೇ ಆಗಿಬಿಡುತ್ತಾರೆ. ಹಿಂದುಗಳಲ್ಲದವರ ಭಾಷೆ, ಸಂಸ್ಕೃತಿ, ಸ್ಫೂರ್ತಿಯ ಆಕರ ಮತ್ತು ವಂಶ ಇವು ಭಾರತೀಯೇತರ ಅಂಶಗಳೊಡನೆ ಬೆರಕೆ ಹೊಂದಿದರೂ ಈ ಭಾರತೀಯ ನೆಲದ ಮೇಲಿರುವಾಗ ಭಾರತಜನ್ಯ ಮತ್ತು ಭಾರತದ ಒಡೆಯತನಕ್ಕೆ ಸೇರಿದವೇ ಆಗಿವೆ. ಕಾಂಗ್ರೆಸ್ಸಿನಲ್ಲಿರುವ ಹಿಂದುವಾದಿಗಳ ಭಾರತೀಯ ಸಂಸ್ಕೃತಿಯ ಕಲ್ಪನೆ ಸರಿಯಾದದ್ದೇ ಆದರೆ, ಅವರ ಅಭಿಪ್ರಾಯಕ್ಕೂ ಹಿಂದುಮಹಾಸಭೆ ಮತ್ತು ರಾಷ್ಟ್ರೀಯ ಸ್ವಯಂಸೇವಕ ಸಂಘಗಳ ಅಭಿಪ್ರಾಯಕ್ಕೂ ಏನೂ ಭೇದವಿಲ್ಲೆಂದು ನನಗನಿಸುತ್ತದೆ. ಈ ಸಂಸ್ಥೆಗಳು ಕೂಡ ಹಿಂದುಗಳಲ್ಲದವರಿಗೆ ಗೌಣವಾದದ್ದಾದರೂ ಯೋಗ್ಯವಾದ ಸ್ಥಾನವನ್ನು ಕೊಟ್ಟು ಅವರನ್ನು ತಾಳ್ಮೆಯಿಂದ ನೋಡಲು ಸಿದ್ಧವಾಗಿವೆ.

ಆದುದರಿಂದ ಭಾರತದಲ್ಲಿಯ ಹಿಂದು ಸಂಸ್ಕೃತಿ ತನ್ನ ಹಕ್ಕಿನ ಮೇರೆಗೆ ಪ್ರಥಮ ಸ್ಥಾನವನ್ನು ಆಕ್ರಮಿಸಬೇಕು ಮತ್ತು ಅದನ್ನು ಅಹಿಂದು ಅಂಶಗಳೊಡನೆ-ಅದರಲ್ಲೂ ಇಸ್ಲಾಮಿನೊಡನೆ ಸಂಬಂಧಿಸಿದ ಅಂಶಗಳೊಡನೆ-ಬೆರಕೆಯಾಗದಂತೆ ನೋಡಿಕೊಳ್ಳುವುದು ಪ್ರತಿಯೊಬ್ಬ ಸಾತ್ವಿಕ ಹಿಂದುವಿನ ಕರ್ತವ್ಯ ಎಂಬ ದುರ್ಗ್ರಹವನ್ನು ನಮ್ಮ ಮನಸ್ಸಿನಿಂದ ಹೊರಗಟ್ಟುವುದು ನಮ್ಮ ಮೊದಲನೆಯ ಮುಖ್ಯ ಕರ್ತವ್ಯ. ಒಮ್ಮೆ ನಾವು ಈ ಭ್ರಮೆಯಿಂದ ಮುಕ್ತರಾದೆವೆಂದರೆ, ಬಹಳ ಪ್ರಯತ್ನವಿಲ್ಲದೆ ಮಿಕ್ಕ ಶುಭೋದಯಗಳು ತಮ್ಮಿಂದ ತಾವೇ ಒಂದೊಂದಾಗಿ ಉಂಟಾಗುವುವು.

ನಮ್ಮ ಶಿಕ್ಷಣ ಸಂಸ್ಥೆ ಮತ್ತು ಸಾರ್ವಜನಿಕ ಸಂಸ್ಥೆಗಳನ್ನು ಶುದ್ಧೀಕರಿಸುವುದು ಎರಡನೆಯ ಆವಶ್ಯಕತೆ. ನಮ್ಮ ಹಲವು ಶಾಲೆ ಕಾಲೇಜುಗಳು ಜಾತೀಯತೆಯ ಪ್ರಸವಕೇಂದ್ರಗಳಾಗಿವೆ. ಕೆಲವೆಡೆಗಳಲ್ಲಿ ಬಾಲ್ಯದಿಂದಲೇ ಹುಡುಗ ಹುಡುಗಿಯರನ್ನು ಜಾತೀಯ ದ್ವೇಷ ತಲೆತುಂಬ ತುಂಬಿಕೊಂಡಿರುವ ತಂದೆ, ತಾಯಿ, ಗುರು[illegible] ಸಾಕಿ ದೊಡ್ಡವರನ್ನಾಗಿ ಮಾಡುತ್ತಾರೆ. ಕಮ್ಯುನಿಸ್ಟರಿಗೂ ಜಾತೀಯತಾವಾದಿಗಳಿಗೂ ಧ್ಯೇಯಗಳಲ್ಲಿ ಯಾವ ವ್ಯತ್ಯಾಸವಿದ್ದರೂ ಸರಿಯೆ, ಅಸತ್ಯ, ದ್ವೇಷ, ದಂಗೆ, ಕೊಲೆ, ಕುತಂತ್ರಬದ್ಧ ವಿಧ್ವಂಸಕ ಚಟುವಟಿಕೆ ಮುಂತಾದ ಹಿಂಸಾತ್ಮಕ ಕ್ರಮಗಳಲ್ಲಿ ಶ್ರದ್ಧೆಯಿಡುವದರಲ್ಲಿ ಇಬ್ಬರೂ ಏಕಾಭಿಪ್ರಾಯವುಳ್ಳವರಾಗಿದ್ದಾರೆ. ಇಬ್ಬಣದವರೂ ಸತ್ಯ, ಅಹಿಂಸೆ, ಪ್ರೇಮ, ಸಂಯಮ ಮೊದಲಾದ ಸದ್ಗುಣಗಳನ್ನು ಅಪಹಾಸ್ಯ ಮಾಡುತ್ತಾರೆ. ಗುಪ್ತ ಚಳವಳಿಗಳ ಪ್ರಸಾರದಲ್ಲಿ (ಸೋಶಲಿಸ್ಟರನ್ನೊಳಗೊಂಡ) ಕಾಂಗ್ರೆಸ್ಸಿಗರು ಭಾಗವಹಿಸಿಲ್ಲ, ಅವರು ಬಹಳ ಯೋಗ್ಯರು ಎಂದು ಹೇಳಬರುವಂತಿಲ್ಲ. ೧೯೪೨ ರಲ್ಲಿ ಸ್ವತಃ ನಾನೇ ಅದರಲ್ಲಿ ಜಾರಿ ಬೀಳುವವನಿದ್ದೆ. ಆ ಕೂಡಲೆ ತಡೆಹಿಡಿದದ್ದು ಮತ್ತೆ ನಾನು ಮುಗ್ಗರಿಸಿ ಬೀಳುವದನ್ನು ತಡೆಯಿತು. ಒಬ್ಬರು ದೇವರನ್ನು ಮೊದಲು ಇಲ್ಲವೆಂದು ಹೇಳಿ ಈ ದುರ್ಗ್ರಹಗಳನ್ನು ಪಸರಿಸುತ್ತಾರೆ; ಮತ್ತೊಬ್ಬರು ದೇವರ ಹೆಸರಿನಲ್ಲಿ ದೇವರಿಗಾಗಿ ಎಂದು ಹೇಳಿ ಇದನ್ನು ಹರಡಲು ಉಪಕ್ರಮಿಸುತ್ತಾರೆ!

ಸರಕಾರೀ ನೌಕರರಿಗೂ ಪಕ್ಷಗ್ರಹ ಬಲವಾಗಿ ಹಿಡಿದುಕೊಂಡುಬಿಟ್ಟಿದೆ. ಅದರ ಪರಿಣಾಮವಾಗಿ ಯಾವುದಾದರೊಂದು ವಿಶಿಷ್ಟ ಪಕ್ಷದ ಮೇಲೆ ಸರಕಾರವೇನಾದರೂ ಕ್ರಮ ತೆಗೆದುಕೊಂಡರೆ ಅದಕ್ಕೆ ಸಂಪೂರ್ಣ ಯಶಸ್ಸು ಸಿಕ್ಕುವದಿಲ್ಲ. ಬ್ರಿಟಿಶ್ ಸರಕಾರದ ವಿರುದ್ಧ ಎದ್ದ ಕಾಂಗ್ರೆಸ್ ಚಳವಳಿಗಳಲ್ಲಿ ಕಾಂಗ್ರೆಸ್ ಕೆಲಸಗಾರರಿಗೆ ಕಾಂಗ್ರೆಸ್ಸಿನ ಬಗ್ಗೆ ಸಹಾನುಭೂತಿಯುಳ್ಳ ಸರಕಾರೀ ನೌಕರರು ಅಡಗಿಕೊಂಡಿರಲು, ಹಿಡಿಯಲು ಬಂದಾಗ ತಪ್ಪಿಸಿಕೊಳ್ಳಲು, ಆಸ್ತಿ ವಶಪಡಿಸಿಕೊಳ್ಳ ಹೊರಟಾಗ ತಪ್ಪಿಸಲು ಅನೇಕ ವೇಳೆ ಬಹಳ ಮಟ್ಟಿಗೆ ನೆರವಾಗಿದ್ದಾರೆಂಬುದು ನಮಗೆ ಗೊತ್ತಿದೆ. ತಮ್ಮಲ್ಲಿ ಸಹಾನುಭೂತಿಯುಳ್ಳ ಸರಕಾರೀ ನೌಕರರ ಸಹಾಯದಿಂದ ಬಹಿಷ್ಕೃತ ಸಂಸ್ಥೆಗಳ ಪ್ರಚ್ಛನ್ನ ಸದಸ್ಯರಾದರೂ ಹಾಗೇ ಮಾಡಬಲ್ಲವರಾಗಿದ್ದಾರೆ. ಇಂಥ ಸಂದರ್ಭಗಳಲ್ಲಿ ಮಂತ್ರಿಗಳು ಎಷ್ಟೋ ವೇಳೆ ಅಸಹಾಯರಾಗುತ್ತಾರೆ.

ಸರಕಾರೀ ನೌಕರರಲ್ಲಿ ಹೊಣೆಗಾರಿಕೆಯ ಸ್ಥಾನಗಳಲ್ಲಿರುವವರು ಸಾಮಾನ್ಯವಾಗಿ ಮಧ್ಯಮ ವರ್ಗದವರಿರುತ್ತಾರೆ. ಅವರಲ್ಲಿ ಕಾಂಗ್ರೆಸ್ ಕೆಲಸಗಾರರ ಸಂಬಂಧಿಕರು ಸ್ವಲ್ಪವಿಲ್ಲ. ಅವರೆಲ್ಲ "ವಿದ್ಯಾವಂತರು". ಒಂದೇ ಶುದ್ಧವಾಗಿ ಇಲ್ಲವೇ ಕ್ಷುಬ್ಧವಾಗಿ ಇರುವದು ಈ ವರ್ಗದವರ ಮನಸ್ಸೇ. ಸಾಮಾನ್ಯ ಪೋಲೀಸರು, ವಾರ್ಡರರು, ಶಿಪಾಯಿಗಳು ಮತ್ತು ಇತರರು ಕೂಲಿಕಾರ ವರ್ಗದಿಂದ ಬಂದವರಾಗಿರುತ್ತಾರೆ. ಸಾಮಾನ್ಯವಾಗಿ ಅವರು ತಮ್ಮ ಪ್ರತ್ಯಕ್ಷ ಮೇಲಧಿಕಾರಿಗಳ ಆಜ್ಞೆಗಳನ್ನು ಪಾಲಿಸುವದಷ್ಟನ್ನು ಮಾಡಿಬಿಡುತ್ತಾರೆ. ಜಾತೀಯ ದಂಗೆಗಳಲ್ಲಿ ಸಂಕಟಕ್ಕೆ ಬಹಳವಾಗಿ ಗುರಿಯಾಗುವವರು ಈ ಜನರು ಮತ್ತು ನೌಕರಿಯಲ್ಲಿರದ ಇವರ ಬಂಧುಗಳೇ. ದಂಗೆಗಳನ್ನು ಮಧ್ಯಮ ವರ್ಗದವರೇ ನಡೆಸಿದಾಗಲೂ ಅನಾಗರಿಕ ಕೃತ್ಯಗಳನ್ನು ನಡೆಸಲು ಉತ್ತೇಜನ ಪಡೆವವರೂ ಈ ವರ್ಗದವರೇ. ಕಡೆಯ ಪಕ್ಷ ಗಾಯಹೊಂದಿಯಾದರೂ, ಕಷ್ಟನಷ್ಟಕ್ಕೆ ಗುರಿಯಾಗುವವರೂ ಎಲ್ಲರಿಗಿಂತ ಹೆಚ್ಚಾಗಿ ಇವರೇ. ಆದುದರಿಂದ ತಮ್ಮ ಶತ್ರುಗಳೆಂದು ತಿಳಿಯಲು ಕಲಿಸಲಾದ ಇವರ ವಿರೋಧಿ ವರ್ಗ ಅಥವಾ ಜಾತಿಯ ಬಗ್ಗೆ ಇವರು ಬಹಳ ಕ್ರುದ್ಧರಾಗಿರುತ್ತಾರೆ. ಹೀಗಿದ್ದರೂ ಇವರ ಕ್ರೋಧವು ಆಳವಾಗಿ ಬೇರುಬಿಟ್ಟಿರುವದಲ್ಲ, ಚಿರಕಾಲವಿರತಕ್ಕದ್ದಲ್ಲ. ಏಕೆಂದರೆ, ಯಾವುದಾದರೊಂದು ಧರ್ಮ ಅಥವಾ ಸಂಸ್ಕೃತಿಯ ಬಗ್ಗೆ ಧರ್ಮಾಂಧ ಬುದ್ಧಿಯು ಪಕ್ಷಪಾತ ಇವರ ಮನಸ್ಸಿನಲ್ಲಿ ಇರುವದಿಲ್ಲ; ಆ ಪಕ್ಷಪಾತವಿರುವದು ಕಲಿತವರ ಲಕ್ಷಣ. ಆ ವಿಷವನ್ನು ಮೊದಲನೆಯವರ ಮನಸ್ಸಿನಿಂದ ಬಹುಬೇಗ ತೊಡೆದುಹಾಕಿಬಿಡಬಹುದು, ಆದರೆ ಎರಡನೆಯವರ ಮನಸ್ಸಿನಿಂದ ತೊಡೆದುಹಾಕುವುದು ಅಷ್ಟು ಸುಲಭವಲ್ಲ. ಆದಕಾರಣ, ನಮ್ಮ ಮತ್ತು ವಿದ್ಯಾವಂತರ ಮನಸ್ಸನ್ನು ಶುದ್ಧಗೊಳಿಸುವುದೂ ಶಾಲೆ ಕಾಲೇಜುಗಳ ವಾತಾವರಣವನ್ನು ಶುಚಿಯಾಗಿಡುವುದೂ ಮೊದಲನೆಯ ಆವಶ್ಯಕತೆ. ಬೇರೆಬೇರೆ ಕಾಲಗಳಲ್ಲಿ ಭಾರತವನ್ನು ಹೊಕ್ಕ ವಿದೇಶೀ ಧರ್ಮ ಮತ್ತು ಸಂಸ್ಕೃತಿಗಳು ನಮ್ಮಲ್ಲಿದ್ದು ಅನೇಕ ದೇಶಬಾಂಧವರ ಜೀವನದ ಅವಿಯೋಜ್ಯ ಅವಯವಗಳಾಗಿವೆ ಎಂದು ನಾವು ಭಾವಿಸಬೇಕು. ಆ ಧರ್ಮಗಳನ್ನು ಸ್ವೀಕರಿಸಿದವರ ... ಅವು ಪರಿಣಾಮವನ್ನುಂಟುಮಾಡಿವೆ. ... ಒಟ್ಟಿನ ಮೇಲೆ ಹಾಗಾಗಿರುವುದು ಭಾರ... ಒಳ್ಳೆಯದಕ್ಕಾಗಿಯೇ. ತನ್ನಷ್ಟಕ್ಕೆ ... ಹಿಂದು ಧರ್ಮವು ಸ್ಥಾಪಿತಗೊಂಡಿತ್ತು... ರಿಂದ ಸುಧಾರಣೆಹೊಂದಲು ಅದಕ್ಕೆ ... ವಿದ್ಯುದಾಘಾತ ಅವಶ್ಯಕವಾಯಿತು. ... ಉಡಿಗೆತೊಡಿಗೆ, ಮನೆಮಾರು ಮತ್ತು ... ಬದುಕುಗಳಂತೆಯೇ, ಸ್ವತಃ ಸಂಸ್ಕೃತ ... ಲ್ಲೊಂದು ನಮ್ಮ ಭಾಷೆಗಳೂ ಮುಸಲ್ಮಾ... ಮತ್ತು ಕ್ರೈಸ್ತ ಸಂಸ್ಕೃತಿ ಧಾರೆಗಳಿಂದ ... ತೆಯನ್ನು ಹೊಂದಿವೆ. ಮುಸಲ್ಮಾ... ಕಾಲಕ್ಕಿಂತ ಹಿಂದಿನ ಶುದ್ಧ ಸಾಗರಿಕ... ಬಗ್ಗೆ ಇರುವ ಅಂಧಪಕ್ಷಪಾತವನ್ನು ಬಿಟ್ಟು ಜಾತ್ಯತೀತಮನಸ್ಕತೆಯನ್ನು ಬೆಳೆಸಿಕೊ... ವುದರಲ್ಲಿ ನಾವು ಮೊದಲು ಹೆಜ್ಜೆಯನ್ನಿಟ್ಟಂ... ದೀತು.

ವರ್ಧಾ, ೫-೨-೪೯ ಕಿ. ಘ. ಮಶ್ರುವಾ...

ಕಾಂಗ್ರೆಸು ಮತ್ತು ರಚನಾತ್ಮಕ ಕಾರ್ಯಕರ್ತರ...

೧

೧೯೪೮ ನೆ ಇಸ್ವಿಯ ದಿಸೆಂಬರ ೫ ನೇ ತಾರೀಕಿನ ಹರಿಜನದಲ್ಲಿ ಶ್ರೀ ಜೆ. ಸಿ. ಕುಮಾರಪ್ಪನವರು "ಅಖಿಲ ಭಾರತ ಸರ್ವ ಸೇವಾ ಸಂಘ" ಎಂಬ ಶಿರೋನಾಮದಲ್ಲಿ ಲೇಖವೊಂದನ್ನು ಬರೆದಿದ್ದರು. ಕಾಂಗ್ರೆಸ್ಸಿನ ಹೊಸ ಘಟನೆಯ ಕರಡಿಗೆ ಬರೆದ ಕೊನೆಯ ಬರೆಹದಲ್ಲಿ ಗಾಂಧೀಜಿಯವರು ಬಯಸಿದಂತೆ ಕಾರ್ಯ ಮಾಡಲು ಸದ್ಯದ ಧುರೀಣರು ನಿರಾಕರಿಸಿರುವರು ಎಂದು ಅವರು ಆ ಬರೆಹದಲ್ಲಿ ಅಭಿಪ್ರಾಯಪಟ್ಟಿದ್ದರು. ಅಲ್ಲದೆ ಗಾಂಧೀಜಿಯ ಈ ಬಯಕೆಯನ್ನು ಈಡೇರಿಸಲು ರಚನಾತ್ಮಕ ಕಾರ್ಯಕರ್ತರು ಅಖಿಲ ಭಾರತ ಸರ್ವ ಸೇವಾ ಸಂಘವನ್ನು ಸಂಸ್ಥಾಪಿಸಿಕೊಂಡು ಪ್ರಯತ್ನಿಸುತ್ತಿರುವರೆಂದೂ ಅವರು ಬರೆದಿದ್ದರು. ಶ್ರೀ ಕುಮಾರಪ್ಪನವರು ತಮ್ಮ ಬರೆಹದ ಪ್ರಾರಂಭದಲ್ಲಿ ಇಂತು ಬರೆದಿದ್ದರು. . . .

...''ಕಾಂಗ್ರೆಸ್ಸಿನ ಹಿಂದಿನ ರಾಜಕೀಯ ಚಟುವಟಿಕೆಗಳ ಪರಿಣಾಮವಾಗಿ ಇಂದು ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದ್ದು ಇನ್ನು ಮುಂದೆ ಅದು ಲೋಕ ಸೇವಕ ಸಂಘವಾಗಿ ಮಾರ್ಪಡಬೇಕು; ಮತ್ತು ಹಳ್ಳಿಗಳನ್ನೆಲ್ಲ ಸ್ವಾವಲಂಬಿಗಳನ್ನಾಗಿಸಿ ಜನಸಾಮಾನ್ಯಕ್ಕೆಲ್ಲ ಸ್ವರಾಜ್ಯವನ್ನು ಕಲ್ಪಿಸಿಕೊಡುವದಕ್ಕಾಗಿ ರಚನಾತ್ಮಕ ಕಾರ್ಯಕ್ಷೇತ್ರದಲ್ಲಿ ದುಡಿಯಬೇಕು. ಧೋರಣ ಮತ್ತು ಘಟನೆಯಲ್ಲಿ ಈ ಬಗೆಯ ಬದಲಾವಣೆಯು ಕಾಂಗ್ರೆಸ್ಸಿಗೆ ಒಪ್ಪಿಗೆಯಾಗಲಿಲ್ಲ, ಗಾಂಧೀಜಿಯ ಬಯಕೆಗಳನ್ನೆಲ್ಲ ಕಾರ್ಯಕಾರಿ ಮಾಡುವದಕ್ಕಾಗಿ ಮತ್ತು ಅವರಿಂದ ಸ್ಫೂರ್ತಿಪಡೆದು ಸಂಸ್ಥಾಪಿತವಾದ ಎಲ್ಲ ಸಂಸ್ಥೆಗಳಲ್ಲಿ ಸಂಘಟಿತ ಕಾರ್ಯವನ್ನು ಸಾಗಿಸುವದಕ್ಕಾಗಿ ಅಖಿಲ ಭಾರತ ಸೇವಾ ಸಂಘವು ಸಂಸ್ಥಾಪಿತವಾಗಿದೆ" ಗಾಂಧೀಜಿಯ ಮರಣದ ನಂತರ ಕಾಂಗ್ರೆಸ್ಸಿನ ಸೂತ್ರಧಾರತ್ವವು ಯಾರ ಕಡೆಗೆ ಬಂದಿತೋ ಅವರು ಬೇಕಂತಲೆ ಗಾಂಧೀಜಿಯ ಬಯಕೆಯಂತೆ ನಡೆದಿಲ್ಲವೆಂದೂ ಗಾಂಧೀಜಿಯ ಕೊನೆಯ ಬಯಕೆಯನ್ನು ಕಾರ್ಯರೂಪದಲ್ಲಿ ತರುವದಕ್ಕಾಗಿ ರಚನಾತ್ಮಕ ಕಾರ್ಯಕರ್ತರು ಅಣಿಯಾದುದರ ಪರಿಣಾಮವಾಗಿಯೆ ಅಖಿಲ ಭಾರತ ಸರ್ವ ಸೇವಾ ಸಂಘವು ಸಂಸ್ಥಾಪಿತವಾಗಿದೆಯೆಂದೂ ಮೇಲಿನ ಬರೆಹದಿಂದ ವಾಚಕರೆಲ್ಲರೂ ತಿಳಿದುಕೊಳ್ಳಬಹುದಾಗಿದೆ. ಆದರೆ ಶ್ರೀ ಕುಮಾರಪ್ಪಾ ಇವರು ಉಲ್ಲೇಖಿಸಿದ ಸಂಗತಿಗಳು ಸತ್ಯಪೂರ್ಣವಾಗಿರುವವೆ? ಸದ್ಯದಂಥ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ರಾಷ್ಟ್ರದ ಮತ್ತು ಕಾಂಗ್ರೆಸ್ಸಿನ ನೌಕೆಯನ್ನು ನಡೆಸಲು ಪ್ರಯತ್ನಿಸುತ್ತಿರುವ ಈ ಮಹನೀಯರು ಶ್ರೀ ಕುಮಾರಪ್ಪನವರಂಥ ಅತ್ಯಂತ ಬುದ್ಧಿಶಾಲಿಗಳಾದ ಗೆಳೆಯರಿಂದ ಈ ಬಗೆಯ ನಿಷೇಧಕ್ಕೆ ಅರ್ಹರಾಗಿರುವರೋ?

ತಾವು ಸಂಸ್ಥಾಪಿಸಿದ ಎಲ್ಲ ರಚನಾತ್ಮಕ ಸಂಸ್ಥೆಗಳನ್ನು ಒಟ್ಟುಗೂಡಿಸಿ ಒಂದೇ ಬಗೆಯ ಯೋಜನೆ ಮತ್ತು ದಿಸೆಯಲ್ಲಿ ರಚನಾತ್ಮಕ ಕಾರ್ಯವು ಸಾಗುವಂತೆ ಮಾಡಬೇಕೆಂದು ಗಾಂಧೀಜಿ ತಮ್ಮ ದುರಂತ ಮರಣಕ್ಕಿಂತ ಮೊದಲು ಬಹಳ ದಿನಗಳಿಂದ ಗಂಭೀರವಾಗಿ ವಿಚಾರಿಸುತ್ತಿದ್ದರೆಂಬದು ಗಾಂಧೀಜಿಯ ವಿವಿಧ ರಚನಾತ್ಮಕ ಚಟುವಟಿಕೆಗಳಲ್ಲಿ ಸಹಕರಿಸುತ್ತಿದ್ದ ರಚನಾತ್ಮಕ ಮತ್ತು ರಾಜಕೀಯ ಕಾರ್ಯಕರ್ತರಿಗೆ ಮತ್ತು ಅವರ ಮನೋರಂಗವನ್ನು ಅರಿತವರಿಗೆಲ್ಲ ತಿಳಿದ ವಿಷಯವಾಗಿ... ಆಯಾ ಸಂಘ ಸಂಸ್ಥೆಗಳು ತಮ್ಮ ತ... ಕ್ಷೇತ್ರಗಳಲ್ಲಿ ಉಪಯುಕ್ತ ರಚನೆಯ ಕಾ... ವನ್ನು ಪ್ರತ್ಯೇಕವಾಗಿ ಮಾಡುತ್ತಿದ್ದುವೆಂಬ... ಯಾವ ಸಂದೇಹವೂ ಇಲ್ಲ. ಆದರೆ ಇದರಿಂ... ಕಾರ್ಯಕರ್ತರಲ್ಲಿ ಪ್ರತ್ಯೇಕತೆಯ ಭಾವನೆಯು ಉಂಟಾಗಿದೆಯೆಂದೂ ಆದರಿಂದ ಅವ... ತಮ್ಮ ಕ್ಷೇತ್ರವನ್ನಷ್ಟೇ ನೋಡಿಕೊಂ... ಉಳಿದುದನ್ನೆಲ್ಲ ಅಲಕ್ಷಿಸುತ್ತಿರುವರೆಂದು ಗಾಂಧೀಜಿಯವರಿಗೆ ಅನುಭವದಿಂದ ಕಂ... ಬಂದಿತು. ತಾನು ಯಾವ ಕಾರ್ಯದಲ್ಲಿ ತೊಡಗಿ... ವನೋ ಅದನ್ನೊಂದು ಉಳಿದ ಉಳಿದ ಎ... ರಚನಾತ್ಮಕ ಚಟುವಟಿಕೆಗಳನ್ನು ಕಾ... ಕರ್ತರು ಅಲಕ್ಷಿಸುತ್ತಿದ್ದರಷ್ಟೇ ಅಲ್ಲ, ಹಲವು ಸ... ಅವುಗಳಿಗೆ ವಿರೋಧಿಗಳಾಗಿ ಹಾನಿಯನ್ನೂ ಉಂಟುಮಾಡುತ್ತಿದ್ದರೆಂಬುದು ಕಂಡು ಬಂದಿತು. ಹಳ್ಳಿಗಳಲ್ಲಿ ತಯಾರಾದ ಸಾಮಾನು... ಗಳನ್ನೇ ಉಪಯೋಗಿಸಬೇಕಾದುದು ಕರ್ತವ್ಯವೆಂಬುದನ್ನು ಖಾದಿ ಕಾರ್ಯಕರ್ತನು ಭಾವಿಸು... ತಿರಲಿಲ್ಲ. ಅದೇ ರೀತಿಯಾಗಿ ಜನತೆಯ ಸೇ... ಮಾಡಬಯಸಿದವನು ಖಾದೀ ಉಡುಪನ್ನು ಧ... ಸುವದು ತನ್ನ ಕರ್ತವ್ಯವಾಗಿದೆಂದು ಎಣಿಸುತ್ತಿ... ಲಿಲ್ಲ. ರಚನಾತ್ಮಕ ಕಾರ್ಯಕರ್ತನಲ್ಲಿಯ ... ಅಜ್ಞಾನ ಮತ್ತು ಉದಾಸೀನತೆಯ ಪರಿಣಾ... ವಾಗಿ ಗಾಂಧೀಜಿಯ ರಚನಾತ್ಮಕ ಕಾರ... ಕ್ರಮವು ಮೂಲಉದ್ದೇಶಕ್ಕೆ ವಿರೋಧಕವಾ... ಸಮಾಜ ಸುಧಾರಣೆಯ ಚಟುವಟಿಕೆಯಾ... ಪರಿಣಮಿಸಿತು. ತಮ್ಮ ರಚನಾತ್ಮಕ ಕಾರ್ಯ... ಕ್ರಮದಿಂದ ಅಹಿಂಸಾತ್ಮಕ ಸಾಮಾಜಿ... ಕ್ರಾಂತಿಯಾಗಲು ಚೈತನ್ಯ ಪೂರ್ಣವಾ... ಶಕ್ತಿಯಾಗಲೆಂದು ಗಾಂಧೀಜಿ ಬಯಸಿದ್ದ... ಲ್ಲದೆ ಸಾಮಾಜಿಕ ಸುಧಾರಣೆಯಲ್ಲಿ ಅದೊಂ... ಸಾಮಾಕವಾದ ಕಾರಣವಾಗಬೇಕೆಂದು ಅವ... ಅಭಿಪ್ರಾಯವಾಗಿರಲಿಲ್ಲ. ಗಾಂಧೀಜಿಯ... ರಚನಾತ್ಮಕ ಕಾರ್ಯಕ್ರಮವನ್ನು ... ಯಾಗಿ ಸ್ವೀಕರಿಸಿ ನವ ಅಹಿಂಸಾತ್ಮಕ ಸಮಾಜ... ರಚನೆಯ ತಳಹದಿ ಅದೆಂದು ತಿಳಿದು ಅದನ್ನು... ಕಾರ್ಯರೂಪದಲ್ಲಿ ತರಲು ಪ್ರಯತ್ನಿಸಿದರೇನೇ... ಅದರಲ್ಲಿಯ ಕ್ರಾಂತಿಕಾರಕ ತತ್ವಗಳು ಗೋಚ... ರವಾಗಬಲ್ಲುವು. ರಚನಾತ್ಮಕ ಕಾರ್ಯಕ್ರಮ... ದಲ್ಲಿಯ ಈ ಅಂಶವನ್ನು ರಚನಾ... ತ್ಮಕ ಕಾರ್ಯಕರ್ತರು ಅಲಕ್ಷಿಸಬಾರದೆಂದು ಗಾಂಧೀಜಿ ಬಯಸಿದ್ದರು. ಪ್ರತ್ಯೇಕ ಸಂಸ್ಥೆ... ಗಳ ಸ್ಥಾಪನೆಯಿಂದ ಈ ಬಗೆಯ ಅನಿಷ್ಟ ಪರಿ... ಣಾಮವುಂಟಾಗಹತ್ತಿದೆಂದು ಅವರಿಗೆ ಕಂಡು ಬರಹತ್ತಿದ್ದರಿಂದಲೆ ಅವರು ಒಂದೇ ಸಂಸ್ಥೆಯ ಮುಖಾಂತರ ವಿವಿಧ ಚಟುವಟಿಕೆಗಳನ್ನು ಸಾಗಿಸುವದು ಅತ್ಯುತ್ತಮ ಉಪಾಯವೆಂದು ನಿರ್ಣಯಿಸಿದರು.

೧೯೪೨ ನೇ ಇಸ್ವಿಯ ಹೋರಾಟದಿಂದ ಉಂಟಾದ ಹಿಂಸಾತ್ಮಕ ಮಾರ್ಪಾಟದಿಂದ ಈ ಬಗೆಯಾಗಿ ಏಕಸಂಸ್ಥೆಯನ್ನು ಸ್ಥಾಪಿಸುವದು ಅತ್ಯವಶ್ಯವೆಂದು ಅವರು ನಿರ್ಧರಿಸಬೇಕಾಯಿತು. ಅವರು ಬಿಡುಗಡೆಯಾಗಿ ಬಂದಕೂಡಲೆ ತಮ್ಮ ಈ ಸಮಗ್ರಗ್ರಾಮಸೇವೆಯ ಯೋಜನೆಯನ್ನು, ಸೇವಾಗ್ರಾಮದಲ್ಲಿ ೧೯೪೪ ನೇ ಇಸ್ವಿಯ ಸಪ್ಟಂಬರ ತಿಂಗಳಲ್ಲಿ ಕೂಡಿದ ಪ್ರಮುಖ ರಚನಾತ್ಮಕ ಕಾರ್ಯಕರ್ತರ ಮುಂದೆ

—ಎರಡನೆಯ ಪುಟಕ್ಕೆ

ಲಂಡನ್ ಪತ್ರ

(ಸ್ವಂತ ಪ್ರತಿನಿಧಿಯಿಂದ)

ಪ್ರಪಂಚದಲ್ಲಿ ಬೆಳೆಯ ಆಧಿಕ್ಯ— ಕಮ್ಯುನಿಷ್ಟರ ಬಗ್ಗೆ ಆಂಗ್ಲರ ಭಾವನೆ— ನಟಸಾರ್ವಭೌಮ ರಾಮಗೋಪಾಲ— ಸುಂದರ ನೆಹರು— ಜಾಗತಿಕ ವಾಯುಮಾರ್ಗ—

೯ ಫೆಬ್ರುವರಿ

"ರೊಟ್ಟಿಯೊಂದರಿಂದಲೇ ಮನುಷ್ಯ ಬದುಕಲಾರ" ಎಂದು ಬೈಬಲ್ಲಿನಲ್ಲಿ ಹೇಳಿದೆ. ಆದರೆ ಇಂದು ಆಹಾರದ ಕೊರತೆಯು ದೆಸೆಯಿಂದ ಇಂಗ್ಲಂಡಿನ ಪತ್ರಿಕೆಗಳಲ್ಲೆಲ್ಲ "ಉತ್ತಮ ರೊಟ್ಟಿ ಬೇಕು" ಎಂಬ ಮೇಲ್ಪಂಕ್ತಿ ಮೆರೆಯುತ್ತಿದೆ. ಫೆಬ್ರುವರಿ ೫ ರಲ್ಲಿ "೧೯೪೯ ರಲ್ಲಿ ಜಗತ್ತಿಗೆ ಹೆಚ್ಚು ಆಹಾರ ಸಿಗುತ್ತದೆ" ಎಂಬ ವಿಶ್ವಾಸ್ಯವೂ ಸ್ವಾಗತಾರ್ಹವೂ ಆದ ಸಂ. ರಾ. ಸಂಘದ ಆರ್ಥಿಕ ಸಮಿತಿಯ ಹೇಳಿಕೆಯನ್ನು ಕೇಳಿ ಇಲ್ಲಿಯ ಪತ್ರಿಕೆಗಳೂ ಜನರೂ ಬಹಳ ಸಂತೋಷಪಟ್ಟರು. ಆದರೆ ಕೆಲವು ವಿತಂಡವಾದಿಗಳು ಮಾತ್ರ "ಆಹಾರಮಂತ್ರಿ ಕಚ್ಛೇರಿಮು ಕಾಣದಿದ್ದರೆ ಜಗತ್ತಿನ ತುಂಬ ಆಹಾರ ತುಂಬಿದ್ದರೂ ಏನು ಪ್ರಯೋಜನ?" ಎಂದು ನಿರಾಶೆಯ ರಾಗ ತೆಗೆದರು.

"ರಶಿಯವೊಂದನ್ನು ಬಿಟ್ಟು ಮಿಕ್ಕ ಎಲ್ಲ ಪ್ರದೇಶಗಳಲ್ಲೂ ೧೯೪೮ ರ ಉತ್ತರಾರ್ಧದಲ್ಲಿ ಕಾಳುಗಳ ಬೆಳೆ ಚೆನ್ನಾಗಿ ಬಂದಿದೆ" ಎಂದು ಸಂ. ರಾ. ಸಂಘದ ಆರ್ಥಿಕ ಸಮಿತಿ ವರದಿ ಮಾಡಿದೆ. ಭಾರತಕ್ಕೆ ಈ ಸುದ್ದಿಯ ಪ್ರಾಧಾನ್ಯ ಸುಸ್ಪಷ್ಟವಿದೆ. ಕಾಳು ಭಾರತದ ಮುಖ್ಯ ಆಹಾರ ಪದಾರ್ಥವಾಗಿರುವದರಿಂದ ಯುದ್ಧಾನಂತರದಲ್ಲಿ ಸಂಭವಿಸಿದ ಈ ಅತ್ಯುತ್ಕ್ರಾಂತಿ ಸುಗ್ಗಿ ಭಾರತದ ಆಹಾರ ಸಮಸ್ಯೆಯ ಬಿಗಿಯನ್ನು ಸಡಿಲಿಸುವದರಲ್ಲಿ ಬಹಳ ಉಪಕಾರಿಯಾದೀತು. ಇದರಿಂದ ತಿಳಿಯತಕ್ಕ ಒಂದು ಕುತೂಹಲದ ಸಂಗತಿಯೆಂದರೆ, ಏಶಿಯದಲ್ಲಿ ಯುದ್ಧಪೂರ್ವದ ಪ್ರಮಾಣವನ್ನೇ ಅಕ್ಕಿಯ ಬೆಳೆ ಮುಟ್ಟಿದ್ದು.

ಸ್ಟಾಲಿನ್ನರ ಶಾಂತಿಸೂಚನೆ

ಕಬ್ಬಿಣದ ಮರೆಯ ಹಿಂದಿರುವ ರಶಿಯದಲ್ಲಿ ಏನಾಗುತ್ತಿದೆ ಎಂಬುದನ್ನು ಯಾರೂ ತಿಳಿಯಹೊರಟಂತಿಲ್ಲ. ಆದರೆ ಸ್ಟಾಲಿನ್ನರ ಶಾಂತಿಸೂಚನೆ ರಾಜಕೀಯ ವಿಮರ್ಶಕರ ಕಲ್ಪನೆಯನ್ನು ಕೆಣಕುತ್ತಿದೆ. ಇತ್ತೀಚಿನ ಅರ್ಥಪಿವರಣೆಯಂತೆ ಸಾರ್ವಗೆ ಅಮೇರಿಕದ ಶಾಂತಿ ಸಾಧನೆಯ ಅಪ್ರಾಣಿಕತೆಯನ್ನು ಸಿದ್ಧಮಾಡಿ ತೋರಿಸಿ ರಶಿಯದ ದಡ್ಡು ಯುದ್ಧ ಹೂಡಲು ಸಾರ್ವಯಲ್ಲಿ ಅದು ಕಾಣೆ ಹೊಡಲಿದೆಯೆಂದು ವಿಶದಪಡಿಸಲು ಸ್ಟಾಲಿನ್ನರು ಹೀಗೆ ಶಾಂತಿಸೂಚನೆ ಮಾಡಿದ್ದು ಎಂದು ಹೇಳಲಾಗುತ್ತಿದೆ. ಕೆಲ ನಿಷ್ಪಕ್ಷಪಾತಿಗಳೆನ್ನುವಂತೆ, ಮೆಕ್ಸಿಕೋದೊಡನೆ ಒಪ್ಪಂದ ಮಾಡಿಕೊಳ್ಳಲು ರಶಿಯವನ್ನು ಅಮೇರಿಕ ಬಿಡುವುದೇ? ಅದು ಹೇಗಾದರೂ ಇರಲಿ, ಸ್ಟಾಲಿನ್ನರದು ಇದೇ ಕೊನೆಯ ಸೂಚನೆಯೆಂದೂ ಮತ್ತೆ ಬೇಕಾದರೆ ಪಾಶ್ಚಾತ್ಯರೇ ಸೂಚನೆ ಮಾಡಲು ಮುಂದೆ ಬರಬೇಕಾದೀತೆಂದೂ ಹೇಳಲಾಗುತ್ತಿದೆ.

ಆಂಗ್ಲರ ಭ್ರಾತೃಭಾವಪ್ರದರ್ಶನ

ಈ ವಾರವೆಲ್ಲ ಬ್ರಿಟಿಶ್ ಪತ್ರಿಕೆಗಳ ಮುಖಪುಟದಲ್ಲಿ ಎಲ್ಲೆಲ್ಲಿ ನೋಡಿದರೂ ರಶಿಯನ್ನರ ಸುದ್ದಿಗಳೇ! ಇದೇನೋ ಸ್ವಲ್ಪ ಆಶ್ಚರ್ಯವೆನಿಸಬಹುದಾದ ಸಂಗತಿ. ಯುದ್ಧದ ಕಾಲದಲ್ಲಿ ರಶಿಯಕ್ಕೆ ಎರವಲುಕೊಟ್ಟ "ರಾಯಲ್ ಸಾವೆರಿನ್" ಎಂಬ ಆಂಗ್ಲ ಯುದ್ಧನೌಕೆಯನ್ನು ಈಗ (ತಡವಾಗಿ) ರಶಿಯದ ನಾವಿಕರು ಇಂಗ್ಲಂಡಿಗೆ ಸುರಕ್ಷಿತವಾಗಿ ತಂದು ಒಪ್ಪಿಸಿದ್ದಾರೆ. ಅಷ್ಟಲ್ಲದೆ ಸ್ಕಾಟ್ಲಂಡ ಮತ್ತು ವೇಲ್ಸಗಳ ನಡುವೆ ನಡೆದ ರಗ್ಬಿ ಪಂದ್ಯದಲ್ಲಿ ಆ ೭೦ ರಶಿಯನ್ನರು— ಅವರಿಗೆ ಕೇವಲ "ಯೆಸ್" ಎಂಬ ಒಂದೇ ಒಂದು ಇಂಗ್ಲೀಷ ಶಬ್ದ ಬರುತ್ತಿದ್ದರೂ— ಆಟದ ನಡುವೆ ಒಳ್ಳೆಯ ಉತ್ಸಾಹದಿಂದ ಜಯಕಾರ ಹಾಕಿದರು. ಆಗ ನೆರೆದ ಮಂದಿಯೆಲ್ಲ ಅದರಿಂದ ಆನಂದಾಶ್ಚರ್ಯಭರರಾಗಿ ಅವರೊಡನೆ ಭ್ರಾತೃಭಾವವನ್ನು ತಾಳಿ ಕ್ಷಣಕಾಲ ಯುದ್ಧ, ರಾಜಕಾರಣ, ಅಪ್ರೀತಿ ಎಲ್ಲವನ್ನೂ ಮರೆತುಬಿಟ್ಟರು. ಇತರ ಐರೋಪ್ಯರಂತೆ ಆಂಗ್ಲರು ಪ್ರದರ್ಶನಶೀಲರಾಗಿದ್ದರೆ, ಅವರನ್ನು ಬಹಳ ದಿನಗಳ ಮೇಲೆ ತಿರುಗಿಬಂದ ಕಳೆದುಹೋಗಿದ್ದ ಸಹೋದರರೆಂದು ಅಪ್ಪಿಕೊಳ್ಳುತ್ತಿದ್ದರೋ ಏನೋ!

ಮಿಂಡ್ಸೆಜೆಂಟಿಯ ವಿಚಾರಣೆ

ಆದರೆ ಕಮ್ಯುನಿಜಂ ಇನ್ನೊಂದು ವಿಧದಲ್ಲಿ ಆಂಗ್ಲರಿಗೆ ಸಿಟ್ಟು ಬರುವಂತೆ ಮಾಡಿತು. ಹಂಗೇರಿಯ ಮುಖ್ಯ ಪಾದ್ರಿಯಾದ ಕಾರ್ಡಿನೆಲ್ ಮಿಂಡ್ಸ್‌ಜೆಂಟಿಯನ್ನು ಜನತಾ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಪಡಿಸಿದ್ದು ಕೆಲ ಪಾರ್ಲಿಮೆಂಟ್ ಸದಸ್ಯರಿಗೂ ಎಲ್ಲ ರೋಮನ್ ಕ್ಯಾಥೊಲಿಕರಿಗೂ ಬಹಳ ಕೋಪ ಬರಿಸಿದೆ. ಸೋಮವಾರದ ದಿನ ದೇಶದ ಎಲ್ಲ ಭಾಗದ ಕ್ಯಾಥೊಲಿಕರು ಒಂದು ಪ್ರತಿಭಟನಾ ಸಭೆ ಸೇರಿಸಿ, ಬೃಹದಾಕಾರದ ರಾಯಲ್ ಅಲ್ಬರ್ಟ್ ಭವನದ ಹೊರಗೆ ಮಳೆ ಬರುತ್ತಿದ್ದರೂ ಲಕ್ಷಿಸದೆ ಮೊಣಕಾಲೂರಿ ಪ್ರಾರ್ಥನೆ ಮಾಡಿದರು. ಬಹಳ ಜನ ಭಾಷಣಕಾರರು ಪಶ್ಚಿಮಕ್ಕೆ ಕಮ್ಯುನಿಸ್ಟರ ಭೀತಿ ಬಡಿದಿದೆ ಎಂದು ಎಚ್ಚರಿಕೆ ಇತ್ತರು. ತಪ್ಪೊಪ್ಪಿಕೊಳ್ಳುವಂತೆ ಮಾಡಲು ಮಿಡ್ಸ್‌ಜೆಂಟಿಗೆ ಮದ್ದು ಹಾಕಿರಬಹುದು ಅಥವಾ ಚಿತ್ರಹಿಂಸೆ ಮಾಡಿರಬಹುದು ಎಂದು ಪತ್ರಿಕೆಗಳೂ ಸಾರ್ವಜನಿಕ ಭಾಷಣಕಾರರೂ ಬಹಿರಂಗವಾಗಿ ಹೇಳುತ್ತಿದ್ದಾರೆ.

ಕಾಮಶಾಸ್ತ್ರದ ಶಿಕ್ಷಣ

ಕಾಮಶಾಸ್ತ್ರವನ್ನು ಅಭ್ಯಾಸದ ಪಟ್ಟಿಯಲ್ಲಿ ಸೇರಿಸಿ ಮಕ್ಕಳಿಗೆ ಹೇಳಿಕೊಡಬೇಕೋ ಬಾರದೋ ಎಂಬ ಬಗ್ಗೆ ಇಲ್ಲಿ ಒಂದು ತುರುಸಿನ ಚರ್ಚೆಯೆದ್ದಿದೆ. ಮುಗ್ಧರಾದ ಎಳೆಯರನ್ನು ಹೀಗೆ ಅನೀತಿಗೆಳೆಯುವುದನ್ನು ಬ್ರಿಟನ್ನಿನ ಎಲ್ಲೆಡೆಯ ತಾಯ್ತಂದೆಯರೂ ಪ್ರತಿಭಟಿಸಿದ್ದಾರೆ. ಆದರೆ ಕೂಲಿಕಾರ ಶಿಕ್ಷಣ ಸಮಿತಿಯು ಒಂದು ಹಸ್ತಪತ್ರಿಕೆ ಮಕ್ಕಳಿಗೆ ಜೀವನದ ಪ್ರಾಥಮಿಕ ಸಂಗತಿಗಳನ್ನು ತಿಳಿಸಬೇಕು ಎಂದು ಅಧಿಕೃತವಾಗಿ ಸೂಚಿಸಿದೆ. ಕೊಕ್ಕರೆ ನಿನ್ನನ್ನು ತಂದುಕೊಟ್ಟಿತು, ಕೌಡು ಕೊಟ್ಟು ನಿನ್ನನ್ನು ಕೊಂಡೆ. ಎಂಬೀ ಕಥೆಗಳನ್ನೆಲ್ಲ ಮೂಲೆಗೆ ಎಸೆಯಬೇಕು. ಮನಸ್ಸಿಗೆ ಭಯಭೇದಗಳುಂಟಾಗದಂತೆ ಮಕ್ಕಳಿಗೆ ಕಾಮಶಾಸ್ತ್ರದ ಗೂಢವನ್ನು ತಿಳಿಸುವಲ್ಲಿ ತಾಯ್ತಂದೆಯರ ಸಹಕಾರ ಅತ್ಯಂತ ಅವಶ್ಯಕ.

ಭಾರತದ ಸಾಂಸ್ಕೃತಿಕ ದೂತ

"ಭಾರತದ ಸಾಂಸ್ಕೃತಿಕದೂತ"ನೆಂದು ಪದೇಪದೇ ಕರೆಸಿಕೊಳ್ಳುತ್ತಿರುವ ಅತಿ ಸಮರ್ಥ ಭಾರತೀಯ ನರ್ತಕ ರಾಮಗೋಪಾಲನು ಈಗ ತನ್ನ ಮೇಳದೊಡನೆ ಸ್ಕಾಂಡಿನೇವಿಯಕ್ಕೆ ತೆರಳಿದ್ದಾನೆ. ಕೆಲ ವಾರಗಳ ಹಿಂದೆ ಅವನು ಅಮೇರಿಕದಿಂದ ಇಲ್ಲಿಗೆಬಂದ ಅಮೇರಿಕದಲ್ಲಿ ನ್ಯೂಯಾರ್ಕಿನ ಮೇಯರನು ಅವನನ್ನು ಜುಬಿಲಿ ಸಮಾರಂಭದಲ್ಲಿ ಇತರ ಅಂತಾರಾಷ್ಟ್ರೀಯ ಕಲಾವಿದರೊಡನೆ ಭಾಗವಹಿಸಲು ನಿಮಂತ್ರಿಸಿದ್ದನು. ಅಮೇರಿಕದ ಪತ್ರಿಕೆಗಳು ಅವನನ್ನು ಅತ್ಯಂತ ಸುಂದರ ನರ್ತಕ ಎಂದು ಪ್ರಶಂಸಿಸಿವೆ. ಒಬ್ಬ ವಿಮರ್ಶಕ ಅವನದು ಸ್ವಂಜ್ ರಬ್ಬರಿನ ಮುಂಡ (Torso) ಎಂದ, ಅವನ ಅಂಗಸ್ವರಭಾರ ನೋಯೆಲ್ ಕವರ್ಡ್‌ನ ಸ್ವರಭಾರದಷ್ಟು ಸುಂದರವಾದುದ್ದು ಎಂದು ಉದ್ಗರಿಸಿದ.

ಸುಂದರ ನೆಹರು

ಇತ್ತೀಚೆಗೆ ಭಾರತದ ಮುಖ್ಯಮಂತ್ರಿ ನೆಹರುಗಳ ಕಡೆ ಪಾಶ್ಚಾತ್ಯರ ಲಕ್ಷ ಹೆಚ್ಚುತ್ತಿದೆ. ಅನೇಕ ಪತ್ರಿಕೆಗಳು ಅವರ ಭಾವಚಿತ್ರವನ್ನು ಪ್ರಕಟಿಸಿವೆ. ಮೊನ್ನೆ ಮೊನ್ನೆ ಪ್ರಕಟವಾದ "ಇಕಾನಮಿಸ್ಟ್" ಎಂಬ ಪ್ರಭಾವಿಯೂ ಸೂಕ್ಷ್ಮವೃತ್ತಿಯೂ ಎನಿಸಿದ ಪತ್ರಿಕೆಯಲ್ಲಿ, ಕೆಲವು ವಾಕ್ಯಗಳು ಇಂತಿವೆ: ತೋರಿಕೆಯಲ್ಲಿ ದೃಢರಾದರೂ ಒಳಗೆ ನೆಹರು ಕೋಮಲ ಸ್ವಭಾವದವರೂ ಬೇಗ ಮನನೊಂದುಕೊಳ್ಳುವವರೂ ಪಯಾಪಂತರೂ ಆಗಿದ್ದಾರೆ. ಇನ್ನೊಬ್ಬರಿಗೆ ನೋವಾದೀತೆಂಬ ಭಯದಿಂದ ಅವರು ಯಾರಿಗೂ ಯಾವುದನ್ನೂ "ಇಲ್ಲ" ಎಂದು ಹೇಳಲಾರರು. ಬಾಲಬಡಿಕರಿಂದ ಸುತ್ತುವರಿಯಲ್ಪಟ್ಟ ಮುತ್ಸದ್ದಿಯಲ್ಲಿ ಇದೊಂದು ನ್ಯೂನತೆ. ಏಕೆಂದರೆ ಅವರ ಸಂಬಂಧಿಕರೆಲ್ಲರೂ ಕಾರ್ಯನಿಷ್ಠರೆನಿಸರು. ಅವರ ಪ್ರಾಮಾಣಿಕತೆ ಮಿತಿಮೀರಿದ್ದು. ಅದರಿಂದ ಅವರು ಒಮ್ಮೊಮ್ಮೆ ಹೇಳಬಾರದ್ದನ್ನೂ ಹೇಳಿಬಿಡುತ್ತಾರೆ. ಅಲಕ್ಷ ಮಾಡುವ ಬುದ್ಧಿಯೇ ಇಲ್ಲದ ಅವರು, ಅವರೇ ಹೇಳಿಕೊಂಡಂತೆ, ಸ್ತೋತ್ರಪ್ರಿಯರಾಗಿದ್ದಾರೆ.

ನೆಹರುಗಳ ವ್ಯಕ್ತಿಸೌಂದರ್ಯ ಅದ್ಭುತವಾದುದು. ಅವರ ತೇಜಃಪುಂಜವಾದ ಕಣ್ಣುಗಳೂ ಸೊಗಸಾದ ನರನಾಡಿಗಳ ಲಕ್ಷಣವೂ ನಿಜವಾದ ಅಂಜಂತಾದ ಗುಹಾಂತರ್ದೇವಾಲಯಗಳಲ್ಲಿಯ ವರ್ಣರಂಜಿತ ಭಿತ್ತಿಚಿತ್ರಗಳಲ್ಲಿಯ ಆಕೃತಿಗಳ ಅಂಗೋಪಾಂಗಗಳ ಮಾದರಿಯವಿವೆ. ಆದರೆ ಅವರು ಆ ಕಾರಣದಿಂದ ಡಾಂಭಿಕರಾಗಿಲ್ಲ. ಇಂದು ಅವರ ಮುಖದಲ್ಲಿ ಆಧ್ಯಾತ್ಮಿಕ ಸೌಂದರ್ಯ ಸೂಸುತ್ತಿದೆ, ಗಾಂಭೀರ್ಯ ಖೇದಭಾರಗಳು ಅವರ ಮುಖವನ್ನು ಆವರಿಸಿವೆ. ಭಾರತದ ಸ್ವಾತಂತ್ರ್ಯಕ್ಕಾಗಿ, ಜಾತಿನಿರ್ಮೂಲನಕ್ಕಾಗಿ ಮತ್ತು ಮಾನವಕುಲದ ಗೌರವ ಗಾಂಭೀರ್ಯಗಳ ಸಂರಕ್ಷಣೆಗಾಗಿ ತಮ್ಮ ಆಯುಷ್ಯ, ಪಿತ್ರಾರ್ಜಿತ ಆಸ್ತಿ ಮತ್ತು ತಮ್ಮ ಮನಃಶಾಂತಿ ಈ ಎಲ್ಲವನ್ನೂ ಅವರು ಬಲಿದಾನ ಮಾಡಿಬಿಟ್ಟಿದ್ದಾರೆ!

ಅಜೀರ್ಣ

ಅಜೀರ್ಣವು ಅತ್ಯಂತ ಸರ್ವಸಾಧಾರಣ ವ್ಯಾಧಿ. ಆದರೆ ಇದನ್ನು ನೀಗಿಸಲು ತೀವ್ರ ಫಲಕಾರಿಯಾದ ಮದ್ದು ಇನ್ನೂ ತಿಳಿದಿಲ್ಲ. ಬ್ರಿಟಿಶ್ ವೈದ್ಯರು ಪ್ರಯೋಗದಿಂದ ಇಂದು ಒಂದು ಹೊಸ ಚಿಕಿತ್ಸೆಯನ್ನು ಕಂಡು ಹಿಡಿದಿದ್ದಾರೆ. ಈ ಸಂಶೋಧನೆ ನಡೆದದ್ದು ಬರ್ಮಿಂಗ್‌ಹ್ಯಾಮಿನ ವೈದ್ಯಕೀಯ ಶಾಲೆಯಲ್ಲಿ. ಒಂದು ಯಂತ್ರ. ಅದಕ್ಕೆ ವಿದ್ಯುತ್ತಿನ ತಂತಿಗಳನ್ನು ಹಚ್ಚಲಾಗುತ್ತದೆ. ಅನಂತರ ರೋಗಿಯು ಅದರಿಂದ ಉತ್ಪನ್ನವಾಗುವ "ಇಲೆಕ್ಟ್ರೋಡ್ಸ್"ಗಳನ್ನು ನುಂಗುವುದು. ಇದೇ ಸಂಪೂರ್ಣ ಚಿಕಿತ್ಸೆ. "ನಾವು ರಚಿಸಿದ ಯಂತ್ರವು ಅನ್ನಕೋಶದಲ್ಲಿಯ ಪಿತ್ತರಸದ ಓಡಾಟವನ್ನು ಗೊತ್ತುಹಚ್ಚುತ್ತದೆ. ನಮ್ಮ ಅಭ್ಯಾಸ ಪೂರ್ಣವಾದರೆ ಜಗತ್ತಿನಲ್ಲಿ ಅತ್ಯಂತ ಸರ್ವಸಾಧಾರಣವಾದ ಅಜೀರ್ಣವ್ಯಾಧಿಗೆ ನಿವಾರಣೋಪಾಯವನ್ನು ಕಂಡು ಹಿಡಿದಂತಾಗುವುದು" ಎಂದು ಶಾಲೆಯ ಸಂಶೋಧನ ಸಮಿತಿಯವರು ವರದಿ ಮಾಡಿದೆ.

ವಾಯುಮಾರ್ಗದ ಶೋಧ

ರಶಿಯೇತರ ಸೈನಿಕ ಶಾಖೆಯಲ್ಲಿ ಜಗತ್ತಿನ ಅತ್ಯಂತ ಗುಪ್ತ ವಾಯುಮಾರ್ಗ ಯಾವುದು ಎಂಬ ಬಗ್ಗೆ ಅಭ್ಯಾಸ ನಡೆದಿದೆ. ವೈಮಾನಿಕ ಯುದ್ಧ ನಡೆದು ವಾಯುಮಾರ್ಗದ ಮೊದಲನೆಯ ರೇಖಾಪತ್ರಿಕೆ ಪ್ರಕಟವಾದ ನಂತರ ಅದರಲ್ಲಿ ಹೇಳಿದ್ದೇ ಜಗತ್ತಿನ ಅತ್ಯಂತ ದೊಡ್ಡ ವಾಯು ಮಾರ್ಗವೆಂದು ರಶಿಯದ ತಜ್ಞರು ತೀರ್ಮಾನಿಸಿದ್ದಾರೆ. ರಶಿಯದ ವಾರ್ತಾಬಹಿಷ್ಕಾರ ಧೋರಣದಿಂದ ಈ ವರೆಗೆ ಈ ವಿಷಯ ಯಾರಿಗೂ ಗೊತ್ತಿದ್ದಿಲ್ಲ.

ವ್ಯಾಪಾರ ಪ್ರಪಂಚ

ಮುಂಬಯಿ ಶೇರಪೇಟೆ

ತಾ. ೧೭

ಹಣದ ಪೇಟೆಯಲ್ಲಿ ಉಂಟಾಗಿರುವ ಮುಗ್ಗಟ್ಟನ್ನು ವಿವರಿಸಿ ಅರ್ಥ ಮಂತ್ರಿಗಳ ಕಡೆ ಸ್ಟಾಕ ಎಕ್ಸಚೇಂಜಿನ ಶಿಷ್ಟಮಂಡಲವೊಂದು ಹೋಗಿತ್ತು. ಅದರ ಪರಿಣಾಮ ಮುಂಗಡ ಪತ್ರದ ಮೇಲೆ ಏನಾಗುವದೋ ಗೊತ್ತಿಲ್ಲ. ಆದರೆ ಕೆಲ ಪ್ರಮುಖ ಶೇರುಗಳ ಬೆಲೆ ಈ ವಾರ ತುಸು ಸುಧಾರಿಸಿದೆ. ಇಂದಿನ ಕೊನೆಯ ದರಗಳು ಹೀಗಿವೆ.

ಮುಂಬಯಿ ಡಾಯಿಂಗ್	೯೪೦-೦-೦
ಕೋಹಿನೂರು	೩೭೬-೦-೦
ಸ್ವದೇಶಿ	೩೭೬ ೦ ೦
ಗೋಕಾಕ	೩೭೯-೦-೦
ಸೊಡುರಿ	೨೪೫-೦-೦
ಸೆಂಟ್ರಲ ಇಂಡಿಯಾ	೨೪೬-೦-೦
ಟಾಟಾ ಸ್ಟೀಲ ಡೆಫರ್ಡ	೧೬೧೦-೦-೦
ಇಂಡಿಯನ್ ಆಯರ್ನ	೨೪-೦-೦
ಅಸೊ. ಸಿಮೆಂಟ್ಸ	೧೫೨-೪-೦
ಬೇಲಾಪುರ ಸಕ್ಕರೆ	೨೨೦-೦-೦
ಸೆಂಟ್ರಲ ಬ್ಯಾಂಕ್	೮೭-೦-೦
ಇಂಪೀರಿಯಲ್ ಬ್ಯಾಂಕ್	೧೮೫೫ ೦ ೦
ಬ್ಯಾಂಕ ಆಫ್ ಇಂಡಿಯಾ	೧೯೭ ೮-೦

ಚಿನ್ನ ಬೆಳ್ಳಿ

ಚಿನ್ನ	೧೧೮-೧೨-೦
ಬೆಳ್ಳಿ	೧೮೮ ೧೦-೦
ಸಾವರಿನ್	೭೬-೬-೦

ಅರಳೆ

ಮೇ	೬೨೪-೦-೦
ಜುಲೈ	೬೨೨-೦-೦
ಸೆಪ್ಟೆಂಬರ	೬೨೧-೦-೦

ಎಣ್ಣೆಕಾಳು

ಶೇಂಗಾ	೧೭೪-೧೨ ೦
ಅಗಸಿ	೨೬-೫-೦
ಹೊಸ	೨೬ ೦-೦
ಅಗಸಿ ಹಿಂ	೧೬-೫-೦
ಔಡ್ಲ	೨೮-೯-೦

ಹುಬ್ಬಳ್ಳಿ

ತಾ. ೧೭

ಜ. ಹತ್ತಿ ನಗಳ್ಕೆ		೪೯೦-೫೨೦
ಮುಂ. ಹತ್ತಿ		೪೮೦ ೫೦೫
ಜ. ಅರಳೆ	,,	೨೯೦ ೩೧೦
ಜ. ಹತ್ತಿಕಾಳು	ರೂ.ಗೆ ೪೩/೫-೪೭/೮	ಪೌಂಡು
ವಿ. ಹತ್ತಿಕಾಳು	,,	೫೧/೪ ಪೌಂಡು
ಕುಸುಬಿ (ಬ. ಮಣಕ್ಕೆ)	೧೫-೯-೦	೧೫-೧೩-೦
ಅಗಸಿ (ಚೀಲಕ್ಕೆ)		೩೭-೩೮-೮ ೦
ಔಡಲ	,,	೩೯ ೪೦
ಜ. ಹೆಸರು	,,	೪೨-೪೮॥
ಕರಿ ಎಳ್ಳು	,,	೫೧-೬೪
ಬಿಳಿ ಎಳ್ಳು	,,	೬೪ ೮೫
ಕಡಲೆ	,,	೬೦
ಜ. ತೊಗರಿ	,,	೩೨ ೩೩
ಹುರಳಿ	,,	೩೬-೩೭
ಕೆಂ. ಅಲಸಂದಿ	,,	೫೪-೫೬
ಬಿ. ಅಲಸಂದಿ	,,	೫೮ ೬೦
ಶೇಂಗಾ (ಹೇರು)		೪೪-೪೬।

ಶಿವಮೊಗ್ಗೆ

ತಾ. ೧೬

ದೇಶಾವರ ನಂ. ೧	ರೂ. ೩೦-೩೩
,, ೨	೨೮-೩೦
,, ೩	೨೫-೨೮
ರಾಜಾ ಅಲವು	೨೪-೩೦
ಬೆಟ್ಟವಂತಿ	೧೬।-೧೮
ಬೆಟ್ಟ	೧೪-೧೬

ಕಾಂಗ್ರೆಸ್ಸು ಮತ್ತು ರಚನಾತ್ಮಕ ಕಾರ್ಯಕ್ರಮ

(೯ನೇ ಪುಟದಿಂದ ಮುಂದು)

ಮಂಡಿಸಿದರು. ಅಯಾವ ಅಖಿಲ ಭಾರತ ರಚನಾತ್ಮಕ ಸಂಸ್ಥೆಗಳ ಪ್ರತಿನಿಧಿಗಳನ್ನೊಳಗೊಂಡ ಸಮಿತಿಯೊಂದನ್ನು ಅವರು ಸಂಸ್ಥಾಪಿಸಬೇಕೆಂದು ಸೂಚಿಸಿದರು. ಆದರೆ ಈ ವಿಚಾರಕ್ಕೆ ಮೂರ್ತಸ್ವರೂಪ ಬರುತ್ತ ನಡೆದಂತೆ ಈ ಎಲ್ಲ ಸಂಘಗಳು ಒಂದೇ ಸಂಸ್ಥೆಯಲ್ಲಿ ವಿಲೀನವಾಗದ ಯಶಸ್ವಿಯಾಗಿ ಕಾರ್ಯವು ನಡೆಯಲಾರದೆಂದು ಕಂಡುಬಂದಿತು. ಅವರ ಮರಣದ ಮುಂಚೆ ಕೆಲದಿನ ವಿವಿಧ ರಚನಾತ್ಮಕ ಸಂಸ್ಥೆಗಳ ಸದಸ್ಯರು ದಿಲ್ಲಿಯಲ್ಲಿ ತಮ್ಮ ಕಾಲಿಕ ಸಭೆಗಳಿಗಾಗಿ ಬಂದಿದ್ದರು. ಇದರ ಸಂಧಿಯನ್ನು ಸಾಧಿಸಿ ಅಖಿಲ ಭಾರತ ಕಾಂಗ್ರೆಸ ಸಮಿತಿಯ ರಚನಾತ್ಮಕ ಶಾಖೆಯವ ಈ ಕಾರ್ಯಕರ್ತರ ಅನೌಪಚಾರಿಕ ಸಭೆಯನ್ನು ಕರೆದರು. ಗಾಂಧೀಜಿಯು ಈ ಸಭೆಯಲ್ಲಿ ಉಪಸ್ಥಿತರಾಗಿದ್ದರು. ಈ ಎಲ್ಲ ರಚನಾತ್ಮಕ ಸಂಘಗಳನ್ನು ಒಂದೇ ಮಿಲಾಪಿ ಸಂಘದಲ್ಲಿ ವಿಲೀನಗೊಳಿಸಬೇಕೆಂಬ ಬಗ್ಗೆ ಈ ಸಭೆಯಲ್ಲಿ ಚರ್ಚಿಸಲಾಯಿತು. ಗಾಂಧೀಸೇವಾಸಂಘದ ಆಶ್ರಯದಲ್ಲಿ ದೇಶದಲ್ಲಿಯ ಪ್ರಮುಖ ಕಾರ್ಯಕರ್ತರ ಪರಿಷತ್ತೊಂದನ್ನು ವರ್ಧಾದಲ್ಲಿ ಕರೆಯಬೇಕೆಂದೂ ಈ ಸಭೆಯಲ್ಲಿ ಗಾಂಧೀಜಿ ಸ್ವತಃ ಉಪಸ್ಥಿತರಾಗಿ ಕೊನೆಯ ನಿರ್ಣಯವನ್ನು ಕೈಕೊಳ್ಳಬೇಕೆಂದೂ ಗೊತ್ತುಮಾಡಲಾಯಿತು. ಈ ರೀತಿಯಾಗಿ ಸ್ವತಂತ್ರ ಹಿಂದುಸ್ತಾನದಲ್ಲಿ ಕಾಂಗ್ರೆಸ್ಸಿನ ಹೊಸ ಘಟನೆಯೆಂತು ಇರಬೇಕೆಂದು ಬಗೆದು ಲೋಕಸೇವಕ ಸಂಘವನ್ನಾಗಿ ಅದನ್ನು ಮಾರ್ಪಡಿಸಬೇಕೆಂಬ ಪ್ರಶ್ನೆ ಉದ್ಭೂತವಾಗುವ ಬಹಳ ದಿನಗಳ ಮುಂಚೆಯೆ ಎಲ್ಲ ಸಂಸ್ಥೆಗಳನ್ನು ಒಟ್ಟುಗೂಡಿಸಿ ಒಂದು ಮಿಲಾಪಿ ಸಂಘವನ್ನು ಸಂಸ್ಥಾಪಿಸಬೇಕೆಂಬ ವಿಚಾರವು ಮಹಾತ್ಮಾ ಗಾಂಧೀಯವರ ಮನಸ್ಸಿನಲ್ಲಿ ಸುಳಿದಿತ್ತೆಂಬುದು ಮೇಲಿನ ವಿವೇಚನೆಯಿಂದ ಕಂಡುಬರುವದು.

—ಶಂಕರರಾವ ದೇವ

"ದರ್ಬಾನ್ ಹತ್ಯಾಕಾಂಡ ನಡೆದದ್ದು ಯುರೋಪಿಯನ್ನರ ಪ್ರಚೋದನೆಯಿಂದ" ಎಂದು ದರ್ಬಾನ್ ಗಲಭೆಯ ವಿಚಾರಣಾ ಮಂಡಲದ ಮುಂದೆ ಡಾ. ಜಿ. ಎಸ್. ಲೋವೆನ್ನರು ಪ್ರತಿಪಾದಿಸಿದರು.

ರೂಪರಂಗ

ತಾರಾವೇದ

(ಬ್ರಹ್ಮಚಾರಿಣಿಯ ಆಕಾಂಕ್ಷೆಯೊಡನೆ)

೧. ಪ್ರೇಮಿಸುವ ರೀತಿಗಳನ್ನು ಬದಲಾಯಿಸುವುದರಿಂದ ನೀವು ಸ್ವರ್ಗಕೃತ ಮದುವೆಗಳಲ್ಲಿ ಸ್ವರ್ಗವನ್ನು ತುಂಬಿಸಬಲ್ಲಿರಿ. ಆದರೆ ಮದುವೆಯಲ್ಲಿ ಈ ಪ್ರಕಾರ ಸ್ವರ್ಗವನ್ನು ತುಂಬುವುದು ಬಹಳ ಕಠಿನ ಕೆಲಸ ಮತ್ತು ಅಜ್ಞೆಯರಿಗೂ ಅಲ್ಪಜ್ಞೆಯರಿಗೂ ಅದು ಅಸಾಧ್ಯ –ಇತಿ [illegible] ಕೌಶಲಾ ಋಷಿ. [illegible]. ಹಾಗಾದರೆ ನಮ್ಮಂಥ ಅಜ್ಞಳಿಗೆ ಸ್ವರ್ಗ [illegible]? ಸುಜ್ಞರಾದ ತಮಗೆ ಸ್ವರ್ಗ ಸಿಕ್ಕಿರುವುದೇನು?

೨. ರಾಜಕುಮಾರರೂ ಕಾಲೇಜು ಹುಡುಗರೂ ಬಂದು ನನ್ನನ್ನು ಮದುವೆಯಾಗೆಂದರು. ಆದರೆ ಅವರಾರಲ್ಲೂ ಪ್ರೇಮದ ಬಿಸಿಯಿರಲಿಲ್ಲ –ಇತಿ ಬೇಗಂಪ್ಯಾರಾ ಋಷಿ: ಋಷಿಗಳೇ, ಹಾಗಾದರೆ ನಾನು ನನ್ನ ಅಣ್ಣನಿಗೆ ನಾಳೆ ಬರುವಾಗ ವಿದ್ಯುತ್ತಿನ ಕೈದೀಪ ತೆಗೆದುಕೊಂಡು ಬಾ ಎಂದು ಹೇಳಲೇ?

೩. ಗಂಡಸರೇ ಇಲ್ಲದ ಒಂದು ಜಗವನ್ನು ಹೆಂಗಸರು ನಿರ್ಮಿಸಬೇಕು. ಆಗ ಅಲ್ಲಿ ವ್ಯಭಿಚಾರವೆನ್ನುವ ಶಬ್ದವೇ ಇರಲಾರದು –ಇತಿ ಪ್ರತಿಮಾದಾಸ ಗುಪ್ತ ಋಷಿ. ಹಾಗಾದರೆ ಋಷಿಗಳೇ, ಇಂದಿನ ಸೂಳೆಯರ ಗತಿಯೇನು? ಹೆಂಗಸರ ಸಂತತಿಯಾದರೂ ಉಳಿದೀತೆ?

೪. ನಾನು ಹೋದಲ್ಲೆಲ್ಲ ಚೀನೀಯರು ನನಗೊಲಿಯುತ್ತಾರೆ. ಚೀನೀ ಹೊಟೇಲಲ್ಲಿಯ ಜವಾನರು ಕೂಡ ಉಚಿತ ಭೋಜನವನ್ನು ನನಗೆ ಕೊಡುತ್ತಾರೆ. "ನಮಗೆ ನೀನೆಂದರೆ ತುಂಬ ಇಷ್ಟ" ಎನ್ನುತ್ತಾರೆ ಅವರು –ಇತಿ ಸ್ನೇಹಪ್ರಭಾ ಋಷಿ: ಗುರುಗಳೇ, ಹಾಗಾಗಲು ನಿಮ್ಮ ಮೂಗಿನ ಸೌಂದರ್ಯವೇ ಕಾರಣವಿರಬಹುದಲ್ಲವೆ?

೫. (೧) ನನ್ನ ಗಂಡನು ಯಾವಾಗಲೂ ಸ್ತ್ರೀತ್ವವನ್ನು ಸಮರ್ಥನೆ ಮಾಡಿ ನನ್ನನ್ನೂ ನನ್ನ ಜಾತಿಯವರಾದ ಸ್ತ್ರೀಯರನ್ನೂ ತುಂಬ ಪ್ರಶಂಸೆ ಮಾಡುತ್ತಾನೆ ಇತಿ ವೀರಾ ಋಷಿ। ವೀರಾ ಋಷಿಯವರೇ, ನಿಮ್ಮೊಬ್ಬರ ಯೋಗ್ಯತೆಯನ್ನು ಪುರಸ್ಕರಿಸಲು ಇಡೀ ಸ್ತ್ರೀ ಜಾತಿಯನ್ನೇ ಏಕೆ ಬಲಿಗೊಡಬೇಕು?

(೨) ನನ್ನ ಗಂಡನು [illegible] ಸಮರ್ಥನೆ ಮಾಡಬಲ್ಲನು – ಆದರೆ ಲಂಬನಾಸ ಋಷಿಗಳೇ, ರಾಣಿಯರು ಸ್ತ್ರೀತ್ವಕ್ಕೆ ಉತ್ತಮ ಮಾದರಿ ಹಾಕಿಕೊಟ್ಟಿದ್ದಾರೆಂದು ಎಲ್ಲಿಯೂ ಹೇಳಿಲ್ಲ. ಬಹುಶಃ ಇದೇ ಕಾರಣದಿಂದ ವೀರಾ ಸ್ವಾಮಿಯವರ ಹಿಂದಿನ ರಾಣಿ ಪಾಕಿಸ್ತಾನಕ್ಕೆ ಹೋದಳೋ ಹೇಗೆ?

(೩) ನನ್ನ ಗಂಡನಿಗೆ ಯಾವಾಗಲೂ ಹೇಳಿದ್ದನ್ನೇ ಹೇಳುವವಳನ್ನು ಕಂಡರಾಗದು— ಆದರೆ ಸ್ತ್ರೀಬೃಹಸ್ಪತಿಗಳೇ, ಒಬ್ಬ ಗಂಡನು ನಾಲ್ಕು ಜನ ಸ್ತ್ರೀಯರನ್ನು ಏಕಕಾಲದಲ್ಲಿ ಮದುವೆಯಾಗಬಹುದೆಂದು ಇಸ್ಲಾಮಿನಲ್ಲಿ ಹೇಳಿದೆ ಎಂಬುದನ್ನು ಮರೆತುಬಿಟ್ಟಿರಾ? ಒಬ್ಬಳಿಗೆ ಬದಲು ೪ ಜನರಿದ್ದರೆ ಅವರು ಹೇಳಿದ್ದೇ ಹೇಳಲಾರರಲ್ಲವೆ?

೬. ಯಶೋಧರೆ ಬಂದುದರಿಂದ ನನಗೆ ಸ್ವಲ್ಪ ತೊಂದರೆಯಾಗಿದೆ ..ಇತಿ ಸ್ನೇಹನಾ ಋಷಿ। ಖಿಡ್ಕಿ ಔರತ್ ಎನಿಸಿದವರೇ. ವಿದ್ಯಾವತಿಯರಾದ ಹುಡುಗಿಯರಿಗೆ ನಿಮ್ಮಂಥ ಸ್ನೇಹನಾಗಳಿಗೆ ಸ್ವಲ್ಪ ಅವಕಾಶ ಮಾಡಿಕೊಡುವ ಔದಾರ್ಯವಿರಬೇಕೆನ್ನುವಿರಲ್ಲವೆ?

೭. [illegible] ಆಕರ್ಷಕತೆಗೆ ಭಂಗ ತಂದ[illegible]ದ್ದಾಳೆ–.ಇತಿ ಪ್ರತಿಮಾದಾಸ ಗುಪ್ತ ಋಷಿ! ಗಂಡುಹುಡುಗಿಯವರೇ, ಆಕೆ ಗಂಡುಡಿಗೆಯಲ್ಲಿ ನಿಮ್ಮನ್ನು ಮೀರಿಸಿದ್ದಲ್ಲದೆ ಗಂಡುಮಾತಿನಿಂದ ನಿಮ್ಮ ಪುರುಷಸಹಜ ಆಕರ್ಷಕತೆಯನ್ನು ಕಸಿದುಕೊಂಡು ಬಿಟ್ಟಳೆನ್ನುವಿರಾ? ಹಾಯ್ ನಿಮ್ಮ ಸ್ಥಿತಿ ಬಹಳ ಚಿಂತಾಜನಕವಿದೆ!

೮. ನನಗೀಗ ಒಂದು ಸಂತಾನಲಾಭವಾಗಿದೆ. ಇನ್ನು ಮೇಲೆ ನಾನು ಹೊಸದಾಗಿ ಜೀವನಮಾರ್ಗವನ್ನು ಹುಡುಕಿಕೊಳ್ಳಬೇಕಾಗಿದೆ— ಇತಿ ವೀಣಾ ಋಷಿ! ವೀಣಾಮರ ಋಷಿಗಳೇ, ಮೊದಲ ಮಗುವನ್ನು ನಿಮ್ಮ ಅಪ್ಪನ ಕೈಗೊಪ್ಪಿಸಿದ ನೀವು ೨ ನೆಯ ಮಗುವನ್ನು ಯಾರಿಗೆ ಒಪ್ಪಿಸಿ ಆಲ್ ನಾಸಿರನೊಡನೆ ಮದುವೆ ಮಾಡಿಕೊಳ್ಳುವಿರಿ? ಅವನಾದರೂ ನಿಮಗೆ ಸತಿವ್ರತನಾಗಿ ಬಾಳುವನೆಂದು ನಿಮಗೆ ನಂಬಿಗೆಯಿದೆಯೇ?

೯. ನಾವೂ ನಿಮ್ಮ ಜೂಜುಗಾರರ ವರ್ಗಕ್ಕೆ ಸೇರಿದವರು. ಆದರಿಂದಲೇ ನಿಮ್ಮ ಕುದುರೆಯ ಜೂಜಿನ ಪಡೆಗಳಲ್ಲಿ ಬಂದು ನಿಮ್ಮೊಡನೆ ಕುಳಿತು ಫೋಟೋ ತೆಗೆಸಿಕೊಳ್ಳುತ್ತೇವೆ–ಇತಿ ತಾರಾಗಣಃ! ಸ್ತ್ರೀಬ್ರಹ್ಮರೇ, ನೀವು ಅವರ ವರ್ಗಕ್ಕೆ ಸೇರಿದವರಲ್ಲವೆಂದು ಯಾರಾದರೂ ತಿಳಿದುಕೊಂಡಾರೆಂಬ ಭೀತಿಯುಂಟಾಯಿತೇನು ನಿಮಗೆ?

೧೦. ನಾನು ನನ್ನ ಸಿನೆಮದ ವಸ್ತ್ರಾಲಂಕಾರ ಸಹಿತವಾಗಿ ಕುದುರೆ ರೇಸಿಗೆ ಹೋಗಿ ಕುಳಿತು ಫೋಟೋ ತೆಗೆಸಿಕೊಳ್ಳುತ್ತೇನೆ.. ಇತಿ ಕಾಮಿನೀಕೌಶಲಾ ಋಷಿ: ಕುಶಲ ಋಷಿಗಳೇ, ಬಹುಶಃ ಅದರಿಂದಲೇ ಕುದುರೆಗಳಿಗೆ ನಾಚಿಕೆಯಾಗಿ ಅವು ವೇಗ ಕಡಿಮಾಡತೊಡಗಿ ಇತ್ತೀಚೆಗೆ ಬಹಳ ಸೋಲುಗಳು ಸಂಭವಿಸಿರಬೇಕಲ್ಲವೆ?

೧೧. ಜನರ ನಡುವೆ ಸಂಚರಿಸುವಾಗ ನಾವು ವಿಲಕ್ಷಣ ವೇಷಧಾರಿಗಳಾಗಿರುತ್ತೇವೆ. ಅದರಿಂದ ಅವರ ಮನಸ್ಸನ್ನು ಆಕರ್ಷಿಸಲು ಬರುತ್ತದೆ. ಅದರಿಂದ......ಇತಿ ತಾರಾಪಥಃ, ಆಕಾಶಗಂಗೆಯರೇ, ನಿಜವಾಗಿಯೂ ನೀವು ಹೀಗೆ ಮಾಡುವುದರಿಂದ ಕುದುರೆ ರೇಸಿನ ಅಂಗಣಗಳಲ್ಲಿ ಜಯಶೀಲರಾಗುವಿರಿ. ಆದರೆ ಆ ಜನರು ನಿಮ್ಮ ಸಿನೆಮಕಲೆಯ ಬಗೆ ಏನೆಂದುಕೊಳ್ಳುವರೆಂಬುದನ್ನು ಮಾತ್ರ ಕಿವಿಯ ಮೇಲೆ ಹಾಕಿಕೊಳ್ಳಕೂಡದು!

೧೨. ನನ್ನ ಮೈಬಣ್ಣ ಚಾಕಲೇಟನದಿದೆ. ಅದು ಹಾಳಾದೀತೆಂದು ನಾನು ಚಾಕಲೇಟನ್ನು ತಿನ್ನುವುದಿಲ್ಲ–ಇತಿ ಸುರಯ್ಯಾ ಋಷಿ– ಆದರೆ ನಾರ್ಗೀಸಳು ಚಾಕಲೇಟು, ಮಸಿಕೆಂಡ ಎಂಬ ಭೇದವಿಲ್ಲದೆ ಏನಿದ್ದರೂ ಅದನ್ನು ತಿಂದು ಬಿಡುತ್ತಾಳೆ; ಅವಳ ಬಣ್ಣ ಕಂದದೆಹೋಗದು, ಅಲ್ಲವೇನ್ರೀ?

ಬ್ರಹ್ಮಚಾರಿಣಿ

ಮಗುವಿನ ಉತ್ತರ

"ಅಲ್ಲೇ ಅಮ್ಮಾ, ತನಗೆ ಮಗು ಹುಟ್ಟುತ್ತೇಂತ ಎಲಿಜಬೇತ್ ರಾಜಕುಮಾರಿಗೆ ಗೊತ್ತಾಗಿದೆಯಂತಲ್ಲಾ, ಹೇಗೆ ಗೊತ್ತಾಯಿತು?" ಹತ್ತು ವರ್ಷದ ಹುಡುಗಿ ತಾಯಿಯನ್ನು ಕೇಳಿದಳು.

ಉತ್ತರ ಕೊಡಲು ತಾಯಿ ಬಾಯಿ ತೆರೆಯುವ ಮೊದಲೆ ಅವಳ ಹಿರಿ ವರ್ಷದ [illegible] ಮಗಳು ತಿರಸ್ಕಾರದಿಂದ ಹೇಳಿದಳು. "ಎಂಥ ಹೆಡ್ಡಿಯೇ ನೀನು. ದಿನಾ ಪೇಪರಿನಲ್ಲಿ ಬರ್‍ತಿತ್ತು, ರಾಜಕುಮಾರಿಗೆ ಮಗುವಾಗುತ್ತೇ ಅಂತ. ಅಷ್ಟು ದೊಡ್ಡ ರಾಜನ ಮಗಳು ಪೇಪರ್ ಓದದೆ ಇರುತ್ತಾಳೆಯೆ?"

ಘರ್ ಘರ್ ಕಿ ಕಹಾನಿ

"ಘರ್ ಘರ್ ಕಿ ಕಹಾನಿ" ಜನಕ ಪಿಕ್ಚರ್ಸ ಕಥೆಯಾಗಿದೆ. ಲೀಲಾ ಚಿಟ್ನೀಸ್, ರಾಜಶೇಖರ್ ಮುಂತಾದವರು ಪಾತ್ರ ವಹಿಸಿದ್ದಾರೆ. ಚಾಟು ದಮಾನಿಯರ ದಿಗ್ದರ್ಶನ. ಎಂ. ಜಿ. ರಾಂಗಣೇಕರರು ಕಥಾಕಾರರು. ಕೇಶವ ಧಯಿಬಾರರು ನಿರ್ಮಾಪಕರು.

ಈ ಸಾಮಾಜಿಕ ಚಿತ್ರದಲ್ಲಿ ಒಂದು ಸಂಯುಕ್ತ ಕುಟುಂಬದ ಕಥೆಯಿದೆ. ತಂದೆ, ತಾಯಿ, ಮೂರು ಜನ ಮಕ್ಕಳು: ನಾರಾಯಣ, ರಾಜು ಮತ್ತು ಶಾಂತೆ. ನಾರಾಯಣನ ಹೆಂಡತಿ ಲಕ್ಷ್ಮಿ. ಅವಳ ಅಲ್ಪ ಆಧುನಿಕತೆಯೂ ಅವಳ



ಮುದುಕ ಮಾವನಿಗೆ ಸರಿಬರುವುದಿಲ್ಲ. ಆಕು ಕರೆದು ಪಿತೃವತ್ಸಲವಾದ ಪತಿಯನ್ನು ಕರೆದುಕೊಂಡು ಹೇಗೆ ಹೇಗೋ ಬೇರೆ ಮನೆ ಮಾಡಲು ಶಕ್ತಳಾದಳು.

ನಾರಾಯಣನಿಗಿಂತ ರಾಜು ಬುದ್ಧಿವಂತ. ಅವನು ತನಗಿಷ್ಟಳಾದ ಶೋಭೆಯನ್ನು ಉಪಾಯದಿಂದ ಮದುವೆಯಾಗಿ ಹೆಂಡತಿಯೊಡನೆ ತಾನು ತಂದೆಗೆ ವಿಧೇಯನಾದಂತೆ ನಟಿಸುತ್ತ, ಸಂಪ್ರದಾಯ ಶರಣತೆಯ ಸೋಗು ಹಾಕಿ ಮನೆಯಲ್ಲಿ ಉಳಿಯುತ್ತಾನೆ. ಶೋಭೆಯ ಪ್ರಭಾವದಿಂದ ಶಾಂತೆ ಒಬ್ಬ ಪ್ರೊಫೆಸರನನ್ನು ಮದುವೆಯಾಗುತ್ತಾಳೆ ಮತ್ತು ರಾಜುವಿನ ಸಹಾಯದಿಂದ ಮನೆಯಿಂದ ತಪ್ಪಿಸಿಕೊಂಡು ಹೋಗುತ್ತಾಳೆ. ಇದರ ಪರಿಣಾಮವಾಗಿ ರಾಜು ಶೋಭೆಯರು ಮನೆ ಬಿಟ್ಟು ಹೊರಡಬೇಕಾಗುತ್ತದೆ. ತಾಯಿ, ತಂದೆ ಇಬ್ಬರೇ ಮನೆಯಲ್ಲಿ ಉಳಿದಾಗ ನಾರಾಯಣ ಬಂದು ಅಪ್ಪ ಅಮ್ಮಂದಿರ ಕಾಲು ಹಿಡಿದು ತಪ್ಪಾಯಿತೆಂದು ಅಂಗಲಾಚಿ ಪುನಃ ತಾನು ಒಬ್ಬನೆ ಮನೆಯಲ್ಲಿರುವೆನೆಂದ. ಆದರೆ ಅಪ್ಪ ಅವನನ್ನು ಕುತ್ತಿಗೆಗೆ ಕೈಹಾಕಿ ದಬ್ಬಿ ಮೆಟ್ಟಲ ಮೇಲೆ ಬೀಳಿಸಿ ಬುರುಡೆ ಒಡೆದು ಹೋಗುವಂತೆ ಮಾಡಿದ. ಅವ್ವ ಸುಮ್ಮನೆ ಅತ್ತಳು; ಅವಳ ಮಾತಿಗೆ ಬೆಲೆಯಿಲ್ಲ. ಆಷು ಹೊತ್ತಿಗೆ ಲಕ್ಷ್ಮಿ ಬಂದು ಶೈತ್ಯೋಪಚಾರ ಮಾಡಿದಳು. ರಾಜುವೂ ಬಂದ. ಶಾಂತೆಯೂ ಅವಳ ಗಂಡನೂ ಬಂದರು. ನಾರಾಯಣ ಬದುಕಿದ. ಲಕ್ಷ್ಮಿ ಗಂಡು ಮಗುವನ್ನು ಹಡೆದಳು. ಅಪ್ಪನಿಗೆ ಅಷ್ಟು ಹೊತ್ತಿಗೆ ಪಶ್ಚಾತ್ತಾಪವಾಗಿತ್ತು. ಅಲ್ಲಿಯ ವರೆಗೆ ಪ್ರತಿ ನಿಮಿಷದಲ್ಲೂ 'ಇದು ನನ್ನ ಮನೆ. ಆದುದರಿಂದ ಇಲ್ಲಿ ಪ್ರತಿಯೊಬ್ಬರೂ ನನ್ನ ಅಜ್ಞೆಗೆ ಒಳಪಟ್ಟಿರಬೇಕು, ಎನ್ನುತ್ತಿದ್ದ ಅವನು 'ಇದು ನಿಮ್ಮ ಮನೆ, ನಾನು ಇಲ್ಲಿ ವಾಸಿಸಲು ಬಂದಿದ್ದೇನೆ" ಎಂದು ತನ್ನಲ್ಲಾದ ಹೃದಯಪರಿವರ್ತನವನ್ನು ವ್ಯಕ್ತ ಮಾಡಿ. ಮಕ್ಕಳು, ಸೊಸೆಯರು ಮತ್ತು ಮೊಮ್ಮಗ ಇವರೊಡನೆ ಸುಖವಾಗಿ ಇರತೊಡಗಿದ.

"ಹಿರಿಯರ ದೌರ್ಜನ್ಯವು ಕಿರಿಯರ ಸ್ವಾಚ್ಛಂದ್ಯಕ್ಕೊಂದು ನೆವವಾಯಿತು" ಎಂಬ ನೆರಿಡಿತ್ತನ ಮಾತಿನಂತೆ ಯಜಮಾನನ ಹಿಟ್ಲರಶಾಹಿಯಿಂದ ರಾಜುವಿನಂತಹ ಮಗನು ಸ್ವಾರ್ಥಕ್ಕಾಗಿ ಕಪಟವನ್ನು ಕಲಿತನು– ಇನ್ನು ಹೆಚ್ಚು ಕಪಟಿಯೂ ಮುಮ್ಮ[illegible] ಆಗುತ್ತಿದ್ದನೋ ಏನೋ! ಅದಕ್ಕಿಲ್ಲಿ ಸಂದರ್ಭವೊದಗಲಿಲ್ಲ. ಪಿತೃವತ್ಸಲನಾದ ನಾರಾಯಣನ ಬಾಳು ತ್ರಿಶಂಕುವಿನದಾಯಿತು. ಲಕ್ಷ್ಮಿಯ ಗತಿ ದುರ್ಧರವಾಯಿತು. ತಾಯ್ತಂದೆಯರ ಅಂಕೆ ಏನೂ ಇಲ್ಲದಾಗ "ಹೇಳುವವರಿಲ್ಲದವರ ಮಗಳು ಸೂಳೆ ಬಸವಿಯಾದಳು" ಎಂದಾಗುವಂತೆ. ಆ ಅಂಕೆಹೆಚ್ಚಾದರೂ ಆ ಮಕ್ಕಳು ಆಸುಬೆಗಳಾಗಿ ಕಪಟಿಗಳಾಗಿ ಅಥವಾ ಮಾತಾಪಿತೃ ವೈರಿಗಳಾಗಿ ಹೋಗುವ ಸಂಭವವಿದೆಯೆಂಬ ನ್ಯಾಯ್ಯ ನೀತಿಯನ್ನು ಈ ಚಿತ್ರ ಉದಾಹರಿಸುತ್ತದೆ [illegible]

ನ ಗೆ ಮ ನೆ

"[illegible]"

[illegible]

ಆ ಸಲ ಫಲಿತಾಂಶವು ಒಳ್ಳೇ [illegible] ಬಿಟ್ಟು ಕಳವಳಗೊಂಡಿದ್ದ [illegible] ಅದೆಷ್ಟೋ ವಿದ್ಯಾರ್ಥಿ— [illegible] ಹುಸು ಗಲಾಟೆ ಎಬ್ಬಿಸಿದರು.

ವರ್ಗದಲ್ಲಿದ್ದ ಶುಕ್ಲಾಚಾರ [illegible] ಇದರ ಸುಳಿವು ಹತ್ತಿದಾಕ್ಷಣ [illegible] ದನ್ನು ನಿಲ್ಲಿಸಿ ಅವರು ಕೈಯಲ್ಲಿದ್ದ [illegible] ವನ್ನು ಮೇಜಿನ ಮೇಲೆ ಅಪ್ಪ[illegible] ಎಲ್ಲರನ್ನು ಒಮ್ಮೆ ದಿಟ್ಟಿಸಿ ನೋಡಿ [illegible] ವಾಣಿಯಲ್ಲಿ ಅಂದರು: "ನಿಮ್ಮ [illegible] ಬುದನ್ನು ನಾನು ಚೆನ್ನಾಗಿ ಬಲ್ಲೆ. [illegible] ಗಿಂದ ಹಾಗೂ ಅದಕ್ಕೆ ಕಾರಣವಾದ [illegible] ಯೊಳಗಿಂದ ಪಾರಾಗುವ ಒಂದೇ [illegible] ಸುಲಭ ಉಪಾಯವಿದೆ. ಅದೇ [illegible] ಅದನ್ನು ತಪ್ಪದೆ ಅನುಸರಿಸ[illegible] ಹೇಳುವೆ."

"ಅಡ್ಡಿಯಿಲ್ಲ, ಸರ್!" ಎಂ[illegible] ಉತ್ಸುಕತೆಯಿಂದ ಎಲ್ಲರೂ ಕಿ[illegible] ವಂತೆ ದನಿಗೂಡಿಸಿದರು.

"ಇನ್ನೊಂದು ಮಾತು: [illegible] ವದು ಗುಟ್ಟಾಗಿರಬೇಕು. ಈ ವರ್ಗ[illegible] ಹೋಗಕೂಡದು."

"ಹೊಹೋ! —— ದೇವರಾ[illegible], ಹೇಳುವದಿಲ್ಲ, ಸರ್!– . . [illegible] ನೋಡಿ, ಸರ್! – – [illegible] ವಿದೆಯೋ, ಸರ್! – . . ನಮ್ಮ [illegible] ಅವಿಶ್ವಾಸವೇ, ಸರ್!" ಇದು, ಸರ್ [illegible] ಸರ್! ಹೀಗೆ, ಸರ್! ಹಾಗೆ, ಸರ್! [illegible] ಗುಲ್ಲನ್ನೇ ಎಬ್ಬಿಸಿ ಬಿಟ್ಟರು.

"ಶ್ಯಾಟಪ್!" ಅನ್ನುತ್ತ [illegible] ಒಮ್ಮೆ ಕಸುವಾಗಿ ಬದಿದರು.

ಸದ್ದೆಲ್ಲ ಒಮ್ಮೆಗೆ ಅಡಗಿತು.

"ಮಗ್ಗಲಿನ ವಿದನಯ [illegible] ಇಲ್ಲಿಯೇ ಇದ್ದಾರೆಯೇ?"

"ಪಿಟಿ (P. T.) [illegible] ಸರ್!" ಅಂತ ಒಂದು ಕೂಗಾ[illegible]

"ಕೇಳಿರಿ, ಹಾಗಾದರೆ!" [illegible] ಕೆಣಕುವ ರೀತಿಯಲ್ಲಿ ಗೂಢ[illegible] ಯನ್ನು ವರ್ಗದ ತುಂಬ ಬೀ[illegible]

ಎಲ್ಲರ ಉಸಿರು ಸಿಂತಿತು; ಕಣ್ಣೆರಾ[illegible] ಯಿತು. ಹಿಂಬದಿಯಲ್ಲಿದ್ದವರ ದೆ[illegible] ಸದ್ದು ಮಾಡದೆ ತಕ್ಕವಿನ್ನಷ್ಟು ಮ[illegible] ಆಯಿತು.

ಶುಕ್ಲಾಚಾರ ಮಾಸ್ತರರು [illegible] ತಮ್ಮ ಗಂಟಲವನ್ನು ಸರಿ[illegible] ಜೇಬಿನೊಳಗಿಂದ ನಸ್ಯದ [illegible] ಹೊರತೆಗೆದು ಅದರಲ್ಲಿಂದ ಕ್ಷಣಿಕ [illegible] ವನ್ನು ತೋರಿಸುವ ಒಂದು ಚಿ[illegible] ನಲ್ಲಿ ಸುಗ್ಗಿಸಿ ನೆತ್ತಿಗೇರಿಸಿದರು [illegible] ಕ್ಷೀಂಪ್! ಎಂತ ಒಂದು ಖ[illegible] ಸೀನಿನ ಸ್ಫೋಟನಾಯಿತು; [illegible] ತುಂತುರು ಹನಿಗಳು ಪಸರಿ[illegible] ದವು; ಸನಿಯದಲ್ಲಿದ್ದವರಲ್ಲ [illegible] ದಿದ್ದರು.

ತಮ್ಮ ಕರವಸ್ತ್ರದಿಂದ [illegible] ಒರಸಿ ಸರಿಪಡಿಸಿಕೊಂಡ[illegible] ಸಂಭ್ರಮದಿಂದ. ಸಿಥಾವಮಾಗಿ [illegible] ಕೊಂಡ ಇಳಿಸಿ: "[illegible] ಕ್ಷಿ-ಮೂ (ಸ್ವಲ್ಪ ತಡೆದು, ಮಗ[illegible], [illegible] ರನ್ನು ಕಣ್ತುಂಬ ನೋಡಿ)... [illegible] ಚಿ. ಸ್ಯಾ. ಗಿ... ಚೆ ಸ್ಯಾಗಿ... [illegible] ಚೆನ್ನಾಗಿ ಅಭ್ಯಾಸ ಮಾ[illegible] ಅಲ್ಲಿಂದ ಎದ್ದೇಬಿಟ್ಟರು!!

[illegible]



ಪ್ರತಾಪಸುಂದರ

ನಾವು ನಾಗರಿಕ ಆರ್ಯ ಕುಲದವರು ...ಸಾವಿರ ವರ್ಷಗಳ ಹಿಂದೆ ನಾವು ಉತ್ತರ ...ಲ್ಲಿ ನಮ್ಮ ಸಹೋದರರಿಂದ ಒಡೆದು ಇತ್ತ ...ಂದು ನೆಲೆಸಿದೆವು. ಅಲ್ಲೇ ಉಳಿದ ನಮ್ಮ ...ಹೊ ಪರರಕ್ಷಿಸ್ತ್ರೀಕರು ಮೊದಲಿಗರು. ಅವ...ರ ನಮ್ಮ ವೇದದ ದೇವರಂತೆ ಅನೇಕ ದೇವರಿದ್ದಾರೆ. ಆ ದೇವರುಗಳಿಗೆ ನಮ್ಮಂತೆಯೇ ಪ್ರೀತಿ, ದ್ವೇಷ ಮುಂತಾದ ಗುಣಗಳಿವೆ. ಅವರಲ್ಲಿ ಅಪೋಲೋ ಅಥವಾ ಸೂರ್ಯನಾರಾಯಣನು ಅಗ್ರಗಣ್ಯನು. ಅವನು ಪ್ರತಾಪಸುಂದರ, ಪ್ರಭಾಮಯ; ...ನು ದೇವನಾದ ಡ್ಯೂಸ್ ಎಂಬವನನ್ನು ಬಿಟ್ಟರೆ ಸರ್ವಾಂಗಸುಂದರ ಗುಣವಂತರಲ್ಲಿ ಇವನನ್ನು ಬಿಟ್ಟರೆ ಮತ್ತಾರೂ ಸಿಕ್ಕಲಾರರು.

ಸುಂದರನೂ ಪ್ರತಾಪಿಯೂ ಆದ ಈ ಅಪೋಲೋ ಎಂಬ ತರುಣದೇವನು ಸಾಹಿತ್ಯ ಸಂಗೀತಗಳ ಅಧಿದೇವತೆ ಹೀಗಿರುವಾಗ ಒಂದು ದಿನ ಅಥೀನಳೆಂಬ ದೇವತೆ ಕೊಳಲು ಬಾರಿಸುತ್ತಿದ್ದಳು. ಅವಳು ಬಾರಿಸುತ್ತ ಕುಳಿತಲ್ಲಿ ಒಂದು ಕೆರೆಯಿತ್ತು. ಆ ಕೆರೆಯಲ್ಲಿ ತನ್ನ ಪ್ರತಿಬಿಂಬವನ್ನು ಕಂಡಳು. ಅದರಲ್ಲಿ ತನ್ನ ಮುಖ ಬಹಳ ವಿಕಾರವಾಗಿ ದ್ದುದನ್ನು ನೋಡಿ, ಬೇಸರಗೊಂಡು ಕೊಳಲನ್ನು ತೆಗೆದು ಕೆರೆಗೊಗೆದಳು. ಅದನ್ನು ಮಾರ್ಸ್ಯಸನೆಂಬ ಒಕ್ಕಲಿಗ ಒಯ್ದ.

ಆ ಕೊಳಲ ಸ್ವರ ಬಹಳ ಇಂಪಾದದ್ದಾಗಿತ್ತು. ಒಕ್ಕಲಿಗನು ಅದು ತನ್ನ ಸಂಗೀತ ಪಾಂಡಿತ್ಯದ ಫಲವೆಂದೇ ತಿಳಿದು ಅಹಂಕಾರ ಕ್ಕೊಳಗಾಗಿ ಸಂಗೀತದಲ್ಲಿ ತನ್ನನ್ನು ಸರಿಗಟ್ಟುವುದು ಅಪೋಲೋನಿಗೂ ಅಸಾಧ್ಯ ಎಂದು ಹೇಳುತ್ತ ತಿರುಗಿದನು. ಇದರಿಂದ ಅಪೋಲೋ ಬಹಳ ಸಿಟ್ಟಾದನು. ಸಂಗೀತ ವಿದ್ಯಾಪತಿಯರೆದುರು ಅಪೋಲೋ ಮತ್ತು ಮಾರ್ಸ್ಯಸರ ಕಲಾಪರೀಕ್ಷೆಯಾಯಿತು. ಅದರಲ್ಲಿ ಸುಂದರ ಅಪೋಲೋ ವಿಜಯ ಶಾಲಿಯಾದನು. ಅನಂತರ ಅವನು ಮಾರ್ಸ್ಯಸನನ್ನು ಮರಕ್ಕೆ ಕಟ್ಟಿಹಾಕಿ ಚರ್ಮ ಸುಲಿಸಿಬಿಟ್ಟನು.

ಶಕ್ತನು ಸುಂದರನಲ್ಲದಿದ್ದರೆ ಇನ್ನಾರು ಸುಂದರರು? ಅಶಕ್ತರ ಅಹಂಕಾರವೆಂದೂ ನಿಜವಾಗಿ ಸುಂದರವಾಗದು. ಅಥವಾ ದುರ್ಬಲರಾದ ಅಶಕ್ತರ, ಅಬಲರ ಯಾವುದು ಸುಂದರವಾದೀತು? ಅಪೋಲೋ ಶರೀರದಲ್ಲಿ ಸುಂದರ, ಪರಾಕ್ರಮದಿಂದ ಸುಂದರ, ಆದ್ದರಿಂದಲೂ ಹೆಚ್ಚಾಗಿ ನಿಜವಾದ ಕಲಾ ಪರಿಣತಿಯಿಂದಲೂ ಧೈರ್ಯಸ್ಥೈರ್ಯಗಳಿಂದಲೂ ಸುಂದರ ಅರ್ಥಾತ್ ಶಕ್ತ. ಇದೇ ನಿಜ ವಾದ ಜೀವನ. ಇದಕ್ಕೆ ಎಲ್ಲೆಲ್ಲೂ ಜಯ, ಎಲ್ಲೆಲ್ಲೂ ಆನಂದ. ಅಲ್ಪಶಕ್ತರ ಅಥವಾ ಅಬಲಾಬಲೆಯರ ಶಾಂತಿ, ಸುಧೀರವೆನಿಸದು, ಜಯಶೀಲವೆನಿಸದು. ಶಕ್ತನಿಗೆ ಧೈರ್ಯ, ಕ್ಷಮೆ, ವಿನಯಗಳೇ ಆಭರಣಗಳು; ಸೋಲು ಕೂಡ ಅವರಲ್ಲಿ ಗೆಲುವಾಗಿ ಕಂಡೀತು. ಇದಕ್ಕೆ ಹಿರಿಯರು 'ಸತ್ವ' ಅಥವಾ 'ಅತ್ಮಶಕ್ತಿ' ಎನ್ನುತ್ತಾರೆ. ಸತ್ವಶಾಲಿಗಳಾಗದವರ ಬಾಳು ಹಾಳೇ ಸರಿ. ಹೀಗೆ ಸತ್ವ, ತೇಜ, ಬಲ, ಧೃತಿಗಳಿಗೆ ಆಗರವೆನಿಸಿದ್ದಾನೆ ಸೂರ್ಯ ನಾರಾಯಣ.

೧

ಜಂಭದ ಜನಗಳ
ಬೇಡ ಪ್ರಸಂಗಳ
ಕಂಡರೆ ಗುಡುಗಿಯೆ ಗುಡುಗುವನು

ಸಂಪು ಕೂಲಿಕಾರರ ಕೊನೆಯ ಅಸ್ತ್ರ

ಸದ್ಯದಲ್ಲಿ ಅದನ್ನು ಯೋಜಿಸದೆ ಉತ್ಪಾದನೆ ಹೆಚ್ಚಿಸಬೇಕು.

ಪಂಡಿತ ಜವಾಹರಲಾಲರ ಸದುಪದೇಶ

'ಅಧಿಕಾರದಲ್ಲಿರುವದೂ ಹುಲಿಯ ಮೇಲೆ ಸವಾರಿ ಮಾಡುವದೂ ಇಂದು ಒಂದೇ ಬಗೆಯ ಸಾಹಸಗಳಾಗಿವೆ. ವಿಶ್ರಾಂತಿ ಹೊಂದುವ ಹಾಗು ಸುಖವಾಗಿ ಕಾಲ ಕಳೆಯುವ ಸಮಯ ಇದಲ್ಲ ವರಿಷ್ಠರಿಗೆ. ಇಂದು ದೇಶವನ್ನು ಎದುರಿಸುತಿರುವ ಸಮಸ್ಯೆಗಳನ್ನು ಪರಸ್ಪರ ಸಹಕಾರ, ಪ್ರಯತ್ನಗಳಿಲ್ಲದೆ ಪರಿಹರಿಸುವದು ಸಾಧ್ಯವಿಲ್ಲ' ಎಂದು ಹಿಂದುಸ್ತಾನದ ಮುಖ್ಯ ಮಂತ್ರಿ ಪಂಡಿತ ಜವಾಹರಲಾಲರು ೧೩ ನೇ ತಾರೀಕು ಅಹಮ್ಮದಾಬಾದಿನಲ್ಲಿ 'ಲಾಲ ದರವಾಜಾ' ಬಯಲಿನಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತ ಹೇಳಿದರು.

ಅಹಮ್ಮದಾಬಾದ ನಗರಸಭೆ ಮತ್ತು ಜಿಲ್ಹಾ ಲೋಕಲ್ ಬೋರ್ಡುಗಳ ಪರವಾಗಿ ಮುಖ್ಯ ಮಂತ್ರಿಗಳಿಗೆ ಮಾನಪತ್ರ ಸಮರ್ಪಿಸಲಾಯಿತು. ಸಾಯಂಕಾಲದ ಸಾರ್ವಜನಿಕ ಸಭೆಯ ಭಾಷಣದ ಮುಖ್ಯಾಂಶವಿಂತಿದ್ದಿತು.

ಇಂದು ಈ ನಗರವು ಔದ್ಯಮಿಕ ಕೇಂದ್ರವೆಂದು ಪ್ರಸಿದ್ಧವಿದ್ದರೂ ನೂರಾರು ವರುಷಗಳ ನಂತರ ಈ ಔದ್ಯಮಿಕ ಅಭಿವೃದ್ಧಿಯು ಮರೆತುಹೋಗಬಹುದು. ಆದರೆ ಗಾಂಧೀಜಿ ವಾಸಿಸಿದ ನಗರವಿದು ಎಂದು ಆಗ ಕೂಡ ಇದರ ಪ್ರಖ್ಯಾತಿ ಉಳಿಯಬಲ್ಲದು. ಗಾಂಧೀಜಿಯ ಸಂದೇಶ, ಉಪದೇಶ ಅಮರವಾಗಿದ್ದುದರಿಂದಲೆ. ಅವರು ವಾಸಿಸುತಿದ್ದ ಆಶ್ರಮದ ಸಮೀಪದಲ್ಲಿಯೆ ಇರುವ ಈ ನಗರವು ಸುಪ್ರಖ್ಯಾತವಾಗಿದೆ. ಮಹಾತ್ಮರು ಇಂದು ಕಣ್ಮರೆಯಾಗಿದ್ದರೂ ಅವರು ಉಪದೇಶಿಸಿದಂತೆ ನಾವೆಲ್ಲರೂ ನಡೆಯಲು ಅಣಿಯಾಗಬೇಕು. ನಿರಾಶ್ರಿತರ ಸಮಸ್ಯೆಯನ್ನು ಯಶಸ್ವಿಯಾಗಿ ಬಿಡಿಸಬೇಕಾಗಿದೆ. ಇಂಥ ಅನೇಕ ಪ್ರಶ್ನೆಗಳನ್ನು ಇಂದು ಹಿಂದುಸ್ತಾನ ಬಿಡಿಸಬೇಕಾಗಿದ್ದರೂ ಅಂತಾರಾಷ್ಟ್ರೀಯ ಸ್ಥಾನಮಾನಗಳಲ್ಲಿ ಅದು ಉಚ್ಚ ಸ್ಥಾನವನ್ನು ಪಡೆದಿದೆ.

ಹಿಂದುಸ್ತಾನದಲ್ಲಿ ಗಣಿಸಂಪತ್ತು ವಿಪುಲವಾಗಿದೆ. ಅದನ್ನೆಲ್ಲ ತಿರಿಗೋಧಿಸಿ ಉಪಯೋಗಿಸಿಕೊಳ್ಳಬೇಕಾಗಿದೆ. ಆರ್ಥಿಕ ಸಮಾನತೆಯುಳ್ಳ ವರ್ಗರಹಿತ ಸಮಾಜ ರಚನೆಯೇ ನಮ್ಮ ಆದರ್ಶವಾಗಿದೆ. ಪ್ರತಿಯೊಬ್ಬನು ತನ್ನ ಹೊಣೆಯನ್ನು ನಿರ್ವಹಿಸಿಕೊಂಡರೆ ಮಾತ್ರ ಈ ಧ್ಯೇಯ ಸಾಧ್ಯವಾಗಬಹುದು. ಸದ್ಯಕ್ಕೆ ದೇಶದಲ್ಲಿಯ ಉತ್ಪಾದನೆಯನ್ನು ಹೆಚ್ಚಿಸುವದು ಅತ್ಯವಶ್ಯವಾಗಿದೆ. ಅಹಮದಾಬಾದಿನಲ್ಲಿ ಔದ್ಯಮಿಕ ಶಾಂತಿ ನೆಲಸಿದ್ದನ್ನು ನೋಡಿ ನನಗೆ ಸಂತೋಷವಾಗಿದೆ. ದೇಶದಲ್ಲಿ ಇಂದು ಸಂಪಿನ ಬಿರುಗಾಳಿಯೆದ್ದಿದೆ. ರೇಲ್ವೆ, ಅಂಚೆ ಮತ್ತು ತಂತಿ ಕೆಲಸಗಾರರು ಸಂಪಿನ ಮೇಲೆ ಹೋಗುವ ಬಗ್ಗೆ ವಿಚಾರ ನಡೆಸಿದ್ದಾರೆ. ಸಂಪು ಹೂಡುವ ಹಕ್ಕನ್ನು ನಾನು ಅಲ್ಲಗಳೆಯದಿದ್ದರೂ ಈಗಿನ ವಿಷಮತೆ ಮತ್ತು ಇನ್ನಿತರ ತೊಂದರೆ ದೂರಾಗುವ ವರೆಗೆ ಆ ಅಸ್ತ್ರವು ಕೆಲಸಗಾರರಲ್ಲಿ ಅಸ್ತ್ರವಾಗಿಯೆ ಉಳಿಯಬೇಕು. ಇಂದಿನ ಸರಕಾರ ಎಲ್ಲರ ಮಟ್ಟವನ್ನು ಸಮವಾಗಿ ಎತ್ತರಿಸುವಂತೆ ಪ್ರಯತ್ನಿಸುತಿರುವದು. ಈ ಸಮಯದಲ್ಲಿ ಕೆಲಸಗಾರರು ತಮ್ಮ ಪಾತ್ರವನ್ನು ವಹಿಸದಿದ್ದರೆ ನಾವು ಈ ಗುರಿಯನ್ನು ಮುಟ್ಟಲಾರೆವು. ಸಂಪುಗಳಿಂದ ದೇಶದಅಭಿವೃದ್ಧಿಗೆ ತಡೆಯಾಗುವದು. ಇದು ರಾಷ್ಟ್ರವಿಘಾತಕವಾದುದು. ಇದೇ ಸಮಯದಲ್ಲಿ ಬಂಡವಲುದಾರರಿಗೂ ನಾನು ಕೆಲ ಮಾತು ಹೇಳಬಯಸುವೆ. ಜವಳಿ ಮತ್ತು ಇನ್ನಿತರ ಸರಕುಗಳ ವ್ಯಾಪಾರದಲ್ಲಿಯ ಲಾಭಬಡಕತನವು ಜನತೆಯನ್ನು ತೊಂದರೆಗೀಡುಮಾಡಿದೆಯಲ್ಲದೆ ಹಣವಂತರಿಗೆ ಕೆಟ್ಟಹೆಸರನ್ನೂ ತಂದಿದೆ. ಈ ಬಿಕ್ಕಟ್ಟಿನ ಸಮಯದ ಪ್ರಯೋಜನ ಪಡೆಯುತಿರುವವರು ಅವರು. ತಮ್ಮ ಧೋರಣವನ್ನು ಬದಲಿಸಿ ಅವರು ಹೊಸ ವಾತಾವರಣಕ್ಕೆ ಹೊಂದಿಕೊಂಡು ಹೋಗಬೇಕು ಈ ಆಶಯದ ಭಾಷಣ ಮಾಡಿ ಮುಖ್ಯ ಮಂತ್ರಿಗಳು ಆನಂದಕ್ಕೆ ಹೋದರು.

ಜಾತ್ಯತೀತ ಸರಕಾರವೆಂದರೇನು ?

ಪಂಡಿತ ಜವಾಹರಲಾಲರು ಗೋಧ್ರಾದಲ್ಲಿಯ ತಮ್ಮ ಭಾಷಣದಲ್ಲಿ 'ಜಾತ್ಯತೀತ ಸರಕಾರವೆಂದರೇನು ಎಂಬುದನ್ನು ಸಂಕ್ಷೇಪತಃ ಹೀಗೆ ಹೇಳಿದರು.' ರಾಷ್ಟ್ರವು ಇಟ್ಟುಕೊಂಡ ಜಾತ್ಯತೀತ ಧೋರಣವನ್ನು ಎಷ್ಟೇ ಅಡೆತಡೆ ಬಂದರೂ ಪಾಲಿಸಲಿಕ್ಕೆ ಬೇಕು. ಹೀಗೆ ಹೇಳಿದ ಮಾತ್ರಕ್ಕೆ ನಾವೆಲ್ಲರೂ ಪಾಷಂಡಿಗಳಾಗಬೇಕೆಂದಾಗಲಿ ನಿರೀಶ್ವರವಾದಿಗಳಾಗಬೇಕೆಂದಾಗಲಿ ಅರ್ಥವಲ್ಲ.

'ತನಗೆ ಸರಿದೋರಿದ ಯಾವದೇ ಧರ್ಮವನ್ನು ಅನುಸರಿಸಲು ಪ್ರತಿಯೊಬ್ಬ ವ್ಯಕ್ತಿಗೆ ಸ್ವಾತಂತ್ರ್ಯವಿದೆ; ಯಾವನೊಬ್ಬನಿಗೆ ಅವನ ವಿಶಿಷ್ಟ ಧರ್ಮದ ಮೂಲಕ ಯಾವದೇ ಬಗೆಯ ಅಪಾತ್ರತೆ ಇರತಕ್ಕದ್ದಲ್ಲ ಎಂಬುದೇ ಜಾತ್ಯತೀತ ರಾಷ್ಟ್ರದ ಲಕ್ಷಣವಾಗಿದೆ.

ಆರ್ಥಿಕ ಪರಿಸ್ಥಿತಿ ಸುಧಾರಿಸಿರಿ

ಅಹಮದಾಬಾದಿನಲ್ಲಿ ಮುಖ್ಯ ಮಂತ್ರಿ ಪಂಡಿತ ಜವಾಹರಲಾಲರು ಗುಜರಾಥ ವಿದ್ಯಾಸಂಸ್ಥೆಯ ಶತಸಾಂವತ್ಸರಿಕ ಉತ್ಸವದ ಕಾಲಕ್ಕೆ ಭಾಷಣ ಮಾಡುತ್ತ ಕೆಲ ಮಹತ್ವದ ಮಾತುಗಳನ್ನು ಹೇಳಿದರು. ಮೊದಲು ಅವರು ರಾಷ್ಟ್ರಭಾಷೆಯ ಬಗ್ಗೆ ನಡೆದ ವಾದವನ್ನೆತ್ತಿ "ಭಾಷೆಯು ಸಸಿ ಇಲ್ಲವೆ ಹೂವಿನಂತೆ ಕೋಮಲವಾಗಿದ್ದುದರಿಂದ ದಕ್ಷತೆಯಿಂದ ಅದರ ಅಭಿವೃದ್ಧಿಯನ್ನು ಮಾಡತಕ್ಕದ್ದು ಇತರ ಭಾಷೆಗಳಲ್ಲಿಯ ಶಬ್ದ ಹಾಗು ಧ್ವನಿಗಳನ್ನು ಸ್ವೀಕರಿಸದೆ ಹೋದರೆ ಅದು ನಿಷ್ಪ್ರಯೋಜಕವಾಗುವದು. ಭಾಷೆಯನ್ನು ರಾಜಕೀಯ ವಿಷಯವನ್ನಾಗಿ ಮಾಡತಕ್ಕದ್ದಲ್ಲ— ದೇಶದಲ್ಲಿ ಮುಖ್ಯವಾಗಿ ೧೦—೧೨ ಪ್ರಾಂತೀಯ ಭಾಷೆಗಳಿದ್ದು ಅವನ್ನು ನಾವು ಪೋಷಿಸಿ ಬೆಳೆಸಲಿಕ್ಕೆಬೇಕು. ನಮ್ಮ ರಾಜಕಾರಣದಲ್ಲಿ ಅವು ಮಹತ್ವದ ಪಾತ್ರವನ್ನು ವಹಿಸಿವೆ.

ಆದರೆ ಅಖಿಲ ಭಾರತಕ್ಕಾಗಿ ನಮಗೊಂದು ರಾಷ್ಟ್ರಭಾಷೆ ಬೇಕು. ಹಿಂದುಸ್ತಾನಿಯೆ ರಾಷ್ಟ್ರಭಾಷೆಯಾಗಬಲ್ಲುದು. ಗಾಂಧೀಜಿ ಇದ್ದಾಗಿನಿಂದ ಈ ಹಿಂದೀ ಹಿಂದುಸ್ತಾನಿಯೆ ವಾದ ಇದ್ದೇ ಇದೆ. ರಾಷ್ಟ್ರಭಾಷೆಯು ರಾಷ್ಟ್ರದ ಬಲ, ಸತ್ವ ಮತ್ತು ಪ್ರಗತಿಯನ್ನು ಪ್ರತಿಬಿಂಬಿಸುವಂತದಿರಬೇಕು. ಹಿಂದೀ ಭಾಷೆಯ ಪರವಾಗಿ ಬರಿ ಚಳವಳಿ ಮಾಡಿದರೆ ಪ್ರಯೋಜನವೇನು?

ಉತ್ಪಾದನೆಯನ್ನು ಹೆಚ್ಚಿಸುವದೇ ಜವಳಿ ಕೂಲಿಕಾರರ ಕರ್ತವ್ಯವಾಗಿದೆ. ಬಂಗಾರ ಇಲ್ಲವೆ ಬೆಳ್ಳಿಯಿಂದ ದೇಶವು ಸಂಪನ್ನವೆನಿಸಿಕೊಳ್ಳುವದಿಲ್ಲ. ಆದರೆ ಹೊಲ ಮತ್ತು ಕಾರಖಾನೆಗಳಲ್ಲಿ ಹುಟ್ಟುವ ಸರಕುಗಳ ತರಗತಿ ಹಾಗೂ ಪ್ರಸಾರವನ್ನು ಅದು ಅವಲಂಬಿಸಿರುವದು ಎಂದು ಹೇಳಿದರು. ರೇಲ್ವೆ ಕೆಲಸಗಾರರು ಸಂಪು ಹೂಡಿದ್ದೇ ಆದರೆ ಅವರಿಗೆ ದೇಶದ ಆರ್ಥಿಕ ಪರಿಸ್ಥಿತಿ ಸುಧಾರಣೆ ಬೇಡವಾಗಿದೆ ಎಂದು ಸಿದ್ಧವಾಗುವದು. ಏಕೆಂದರೆ ಅವರ ಉದ್ದೇಶವು ರಾಜಕೀಯವಾಗಿದೆ ಅಂದರೆ ಸರಕಾರವನ್ನು ಬುಡಮೇಲು ಮಾಡುವದಾಗಿದೆ. ಇದು ತೀರ ಅಯೋಗ್ಯವಾಗಿದೆ. ಸರಕಾರಗಳನ್ನು ಮತಗಳಿಂದ ಬದಲಿಸಬೇಕಲ್ಲದೆ ಸಂಪುಗಳಿಂದ ಅಲ್ಲಎಂದು ಅವರು ಅಭಿಪ್ರಾಯಪಟ್ಟರು. ರೇಲ್ವೆ ಕೆಲಸಗಾರರು ಸಂಪು ಹೂಡಿದರೆ ವಿಪರೀತ ಹಾನಿಯಾಗುವದೆಂದು ಮುಂತಾಗಿಯೂ ಹೇಳಿದರು.

ಭಂಡತನದ ಕಪ—
ಟಿಗಳನು ಕಂಡರೆ
ಮಂಡೆಗೆ ಸಿಡಿಲನು ಬಡಿಯುವನು!

೨

ರಸಿಕರ ಕಂಡರೆ
ಮಿಂಚುತ ಬರುವನು;
ದೆಸೆದೆಸೆಗಾಡುವ ಮೋಡಗಳ
ಹಸದನ ಹೆಚ್ಚಿಸೆ,
ಉದುರುವುದಪ್ಪಿದ
ಸಂತಸ ಮಳೆಮಣಿರೂಪುಗಳ!

೩

ಹೊಳಪಿನ ಹೊಂದಲೆ
ಎತ್ತಿದ ರವಿಯಿಗೊ
ಬೆಳಕಿನ ಗೀತವ ಹಾಡುವವನು;
ಘೀಳಲನೆ ಎದ್ದು ನಮ—
ಸ್ಕರಿಸುವೆ; ತಡ—
ಮಾಡದಲೆತ್ತರ ಕೇರುವನು!

—ಇತಿ ಮಾಮನ ಬೆಳಕಿನ ಮುತ್ತುಗಳು

ವಲ್ಲಭ ವಿದ್ಯಾನಗರ

ಪಂಡಿತ ಜವಾಹರಲಾಲರಿಂದ ಶಂಕು ಸ್ಥಾಪನೆ

ಸರದಾರ ವಲ್ಲಭಭಾಯಿ ಪಟೇಲರ ಜನ್ಮಸ್ಥಳವಾದ ಕರಮುಸದ ಗ್ರಾಮದ ಸಮೀಪದಲ್ಲಿ ಇರುವ ಆನಂದದಲ್ಲಿ ಸ್ಥಾಪಿತವಾಗಲಿರುವ ವಲ್ಲಭ ವಿದ್ಯಾನಗರದ ಶಂಕು ಸ್ಥಾಪನೆಯು ಮುಖ್ಯ ಮಂತ್ರಿ ಪಂಡಿತ ಜವಾಹರಲಾಲರಿಂದ ಇದೆ ೧೩ ನೇ ತಾರೀಕು ಒಳ್ಳೆ ವಿಜೃಂಭಣೆಯಿಂದ ನೆರವೇರಿತು. ಈ ವಿದ್ಯಾನಗರದಲ್ಲಿ ಕಾಲೇಜು ಮತ್ತು ವಸತಿ ಗೃಹಗಳ ಕಟ್ಟಡಗಳು ಪೂರ್ತಿಯಾಗುತ್ತ ಬಂದಿವೆ. ಹಳ್ಳಿಗಳಲ್ಲಿ ಆಧುನಿಕ ರೀತಿಯಲ್ಲಿ ವಿಧಾಯಕ ಕಾರ್ಯವನ್ನು ಸಾಗಿಸಬೇಕು ಎಂದು ಗಾಂಧೀಜಿ ಹೇಳುತ್ತ ಬಂದುದಕ್ಕೆ ಈ ವಿದ್ಯಾನಗರವು ಸಾಕ್ಷಿಯಾಗಿ ನಿಲ್ಲಬಹುದಾಗಿದೆ.

ಪಂಡಿತ ಜವಾಹರಲಾಲರು ಇದರ ಉದ್ಘಾಟನ ಸಮಾರಂಭವನ್ನು ಜರುಗಿಸುತ್ತ ಸರದಾರ ವಲ್ಲಭಭಾಯರ ದೇಶಸೇವೆಯನ್ನು ಬಲವಾಗಿ ಕೊಂಡಾಡಿದರು. ಗುಜರಾಥದಲ್ಲಿಯ ಬರಗಾಲವನ್ನು ಕಂಡು ಅವರು ಬಹಳವಾಗಿ ವಿಷಾದಪಟ್ಟು ಕೇಂದ್ರ ಸರಕಾರದವರು ಶಕ್ಯವಿದ್ದ ಸಹಾಯವನ್ನೆಲ್ಲ ಮಾಡುವದಾಗಿ ಆಶ್ವಾಸನವನ್ನಿತ್ತರು. ಆದರೆ ಅದೇ ಕಾಲಕ್ಕೆ ಅವರು ಉತ್ಪಾದನೆಯನ್ನು ಹೆಚ್ಚಿಸಿಕೊಂಡು ಸ್ವಾವಲಂಬಿಗಳಾಗಲು ಜನರನ್ನು ಬಿನ್ನವಿಸಿಕೊಂಡರು. ಆಣೆಕಟ್ಟು, ನೀರಾವರಿ ಯೋಜನೆಗಳು ಪೂರ್ಣವಾಗುವ ವರೆಗೆ ದೇಶದಲ್ಲಿ ಆಹಾರ ಧಾನ್ಯಗಳ ಕೊರತೆ ಉಳಿಯುವದು. ಜನರು ತಮ್ಮ ನಿತ್ಯದ ಆಹಾರದಲ್ಲಿ ಅವಶ್ಯ ಬಿದ್ದರೆ, ಬೇರೆ ಆಹಾರವನ್ನು ಸೇರಿಸಿಕೊಂಡು ಕೊರತೆಯನ್ನು ತುಂಬಿಕೊಳ್ಳಬೇಕು ಎಂದೂ ಅವರು ಉಪದೇಶಿಸಿದರು.

"ನಾನೀಗ ಶಂಕುಸ್ಥಾಪನೆ ಮಾಡಿರುವ ವಲ್ಲಭ ವಿದ್ಯಾನಗರವು ಸರದಾರ ವಲ್ಲಭಭಾಯಿಯವರ ಗೌರವಕ್ಕಾಗಿ ಸ್ಥಾಪಿಸಲಾಗುತಿದೆ. ಸರದಾರ ವಲ್ಲಭಭಾಯರು ಇಡೀ ಹಿಂದುಸ್ತಾನದವರು. ಅವರ ಜನ್ಮಸ್ಥಳವಾದ ಕರಮುಸದ ಗ್ರಾಮದ ಸಮೀಪದಲ್ಲಿಯೆ ದೇಶಾಭಿವೃದ್ಧಿ ಕಾರಕವಾದ ಈ ಸಂಸ್ಥೆಯನ್ನು ಕಟ್ಟಿ ಸರದಾರರನ್ನು ಗೌರವಿಸುವ ಹಕ್ಕು ಅವರ ನೆರೆಹೊರೆಯ ಜನರಿಗೆ ಇದೆ ಎಂದೂ ಜವಾಹರಲಾಲರು ಅಭಿಪ್ರಾಯಪಟ್ಟರು. ಈ ಕಾರ್ಯಕ್ರಮವನ್ನು ಮುಗಿಸಿಕೊಂಡು ಮುಖ್ಯ ಮಂತ್ರಿಗಳು ಆನಂದದಲ್ಲಿಯ ಒಕ್ಕಲತನ ಕಾಲೇಜನ್ನು ಸಂದರ್ಶಿಸಿದರು. ಅಲ್ಲಿನ ರೈತರಿಗೆ ನಾಲ್ಕು ಉಪದೇಶದ ಮಾತುಗಳನ್ನು ಹೇಳಿದರು. ಪಶ್ಚಿಮ ಹಿಂದುಸ್ತಾನದಲ್ಲಿಯೇ ಈ ಸಂಸ್ಥೆ ಉತ್ತಮ ಸಂಸ್ಥೆಯೆಂದು ಪರಿಗಣಿಸಲ್ಪಟ್ಟಿದೆ.

ಚಂದಾದಾರರಲ್ಲಿ ವಿನಂತಿ

—೦—

ಯಾವದೆ ಪತ್ರವ್ಯವಹಾರ ಮಾಡುವಾಗ್ಗೆ ನಿಮ್ಮ ಚಂದಾ ನಂಬರನ್ನು ಅಂದರೆ ನಾವು ನಿಮ್ಮ ವಿಳಾಸದ ಪ್ರಾರಂಭಕ್ಕೆ ಸೇರಿಸಿದ ನಂಬರನ್ನು ಬರೆದರೆ ಮಾತ್ರ ನಿಮ್ಮ ಪತ್ರಕ್ಕೆ ಲಕ್ಷ್ಯಗೊಡಲಾಗುವದು. ಅವಧಿ ಮುಗಿಯುವ ಮುಂಚೆಯೇ ೧೫ ದಿನ ಪೂರ್ವದಲ್ಲಿ ವ್ಹಿ. ಪಿ. ಮಾಡಲಾಗುವದು. ವ್ಹಿ. ಪಿ. ಬೇಡಾದವರು ೧೫ ದಿನ ಮೊದಲೇ ನಮಗೆ ತಿಳಿಸಬೇಕು. ವ್ಹಿ. ಪಿ. ಸಿರಾಕರಿಸಿ ಹಿಂದುಗಡೆ M. O. ಮಾಡಿದರೆ ವ್ಹಿ. ಪಿ. ಖರ್ಚು ಮುರಿಯಲಾಗುವದು.

ಕರ್ಮವೀರ ಚಂದಾ ವಿವರ

ಅಂಚೆವೆಚ್ಚಸಹಿತ (ಚಂದಾಹಣ ಮುಂಗಡ)

೧ ವರ್ಷ	೬-೪-೦
೬ ತಿಂಗಳಿಗೆ	೩-೪-೦
೩ " " . . .	೧-೧೨-೦

ವ್ಹಿ. ಪಿ. ಯಿಂದ ತರಿಸಿಕೊಂಡಲ್ಲಿ ಹೆಚ್ಚಿಗೆ ಬೀಳುವದು.

ಕರ್ನಾಟಕ

ಧಾರವಾಡ

ಧಾರವಾಡದಲ್ಲಿ ಶಾಸನೂರು ವ್ಯಾಖ್ಯಾನ ಮಾಲೆಯಲ್ಲಿ ಶ್ರೀ ನಾಯಕ ವೆಂಕಟರಾಯರು, ಪ್ರಾ. ಟಿ. ರುಬೇನರು ಭಾಷಣ ಮಾಡುತ್ತ ವಿಶ್ವವಿದ್ಯಾಲಯಗಳು ಸ್ವತಂತ್ರ ಮತ್ತು ಸ್ವಾಯತ್ತವಿದ್ದು ಪ್ರಾದೇಶಿಕ ಭಾಷೆಯೆ ಮಾಧ್ಯಮವಾಗಬೇಕು ಎಂದು ಮುಂತಾಗಿ ಅಭಿಪ್ರಾಯಪಟ್ಟರು.

ಕಾಮರೇಡ ಮಾನವೇಂದ್ರನಾಥ ರಾಯರು ಕಳೆದ ವಾರ ಧಾರವಾಡ, ಹುಬ್ಬಳ್ಳಿ ಮೊದಲಾದವುಗಳನ್ನು ಸಂದರ್ಶಿಸಿ ಮಾನವ ಧರ್ಮದ ಪ್ರಚಾರಕ್ಕಾಗಿ ಉಪನ್ಯಾಸಗಳನ್ನು ಕೊಟ್ಟರು. ಧಾರವಾಡ ನವಜೀವನ ಅಭ್ಯಾಸ ವರ್ಗದವರು ಅವರಿಗೆ ೨೫೦೦ ರೂ. ನಿಧಿ ಕೊಟ್ಟರು.

ಹುಲಕೋಟಿಯ ಶ್ರೀ ರಾಯನಗೌಡ ಯಲ್ಲಪ್ಪಗೌಡ ಓದುಗೌಡರ ಇವರು ೧೩ಕ್ಕೆ ವಯಸ್ಸಿನ ೬೦ ನೇ ವರ್ಷದಲ್ಲಿ ದಿವಂಗತರಾದರು. ಇವರು ತಮ್ಮ ಆಯುಷ್ಯವನ್ನೆಲ್ಲ ಒಕ್ಕಲತನ ಸುಧಾರಣೆಯಲ್ಲಿಯೇ ಕಳೆದು ಆದರ್ಶ ಒಕ್ಕಲಿಗರೆಂದು ಖ್ಯಾತಿಪಡೆದರು. ಹುಲಕೋಟಿಯಲ್ಲಿಯ ಹಲವಾರು ಸಂಘ ಸಂಸ್ಥೆಗಳ ಸದಸ್ಯರೂ ಅವರಾಗಿದ್ದರು.

ಗದಗ ವಿದ್ಯಾದಾನ ಸಮಿತಿಯ ಗರ್ಲ್ಸ ಸೆಕೆಂಡರಿ ಸ್ಕೂಲನ್ನು ತೀವ್ರ ಹಾಯಸ್ಕೂಲನ್ನು ಮಾಡುವ ಉದ್ದೇಶದಿಂದ ಮುಂಬಯಿ ಸರಕಾರದವರು ಸಮಿತಿಗೆ ಒಂದು ಲಕ್ಷ ರೂಪಾಯಿ ಬೆಲೆ ಬಾಳುವ ೮ ಎಕರೆ ವಿಶಾಲವಾದ ಭೂಮಿಯನ್ನು ಕೊಟ್ಟಿರುವರು.

ಬೆಳಗಾವಿ

ಕಾಗವಾಡ ಗುಂಪಿನ ರೈತ ಪರಿಷತ್ತು ೧೨ ನೇ ತಾರೀಕಿನ ದಿನ ಶ್ರೀ ಷಣ್ಮುಖಪ್ಪ ಅಂಗಡಿಯವರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು. ಶ್ರೀಮತಿ ಪದ್ಮಾವತಿಬಾಯಿ ಅಂಗಡಿಯವರು ಅದರ ಉದ್ಘಾಟನ ಮಾಡಿದರು. ಬಾಳೇಶ್ವರಿ ನೀರಾವರಿ ಯೋಜನೆ, ಬೇಕೆಂಬ,ಬೆಳೆ ಚೆನ್ನಾಗಿ [illegible]ರಕ್ಕರಿಂದ ಲೆವಿ ವಸೂಲ ಮಾಡಬಾರದೆಂದು ಬಿನ್ನವಿಸುವ, ಕಾಗವಾಡವನ್ನು ಟ್ರ್ಯಾಕ್ಟರ ಕೇಂದ್ರ ಹಾಗು ತಾಲೂಕು ಸ್ಥಳ ಮಾಡಬೇಕೆಂದು ಬಿನ್ನವಿಸುವ ಗೊತ್ತುವಳಿಗಳು ಸ್ವೀಕೃತವಾದವು.

ಡಾ. ಎನ್. ಎಸ್. ಹರ್ಡೀಕರರು ಈಗ ಹುಕ್ಕೇರಿಯಲ್ಲಿ ಆರೋಗ್ಯ ಧಾಮದಲ್ಲಿ ವಿಶ್ರಾಂತಿ ಹೊಂದುತಿರುದರು. ಅವರು ತಮ್ಮ ಆರೋಗ್ಯದ ಬಗ್ಗೆ ಪ್ರಕಟನೆಯೊಂದನ್ನು ಕಳಿಸಿದ್ದಾರೆ. ನನಗೆ ಕ್ಷಯರೋಗ ತಗಲಿದ್ದರಿಂದ ಹುಕ್ಕೇರಿಯಲ್ಲಿರುವದಾಗಿ ಹಲವರ ಭಾವನೆಯಾಗಿರುವದೆಂದು ನನಗೆ ಬಂದ ಪತ್ರಗಳಿಂದ ತಿಳಿಯುತ್ತದೆ. ಆದರ ನನಗೆ ಕ್ಷಯರೋಗ ತಗಲಿಲ್ಲ. ಮುಂಬಯಿಯಲ್ಲಿ ಇರುವಾಗ ನಿಮೋನಿಯಾ ಬೇನೆಯಾಗಿ ಬಹಳ ಆಯಾಸವಾದ್ದರಿಂದ ವಿಶ್ರಾಂತಿಗಾಗಿ ಹುಕ್ಕೇರಿಯಲ್ಲಿ ಇರುತಿರುವೆ ಎಂದು ಮುಂತಾಗಿ ಅದರಲ್ಲಿ ಬರೆದಿರುವರು.

ಬೆಳಗಾವಿಯ ಸಿವಿಲ್ ಜಜ್ಜರಾದ ಶ್ರೀ ಚಿನ್ನಮ್ಮಳಗುಂದರು ತಮ್ಮ ಅಜ್ಜಂದಿರ ಸ್ಮರಣಾರ್ಥವಾಗಿ ರಾಜಾಲಖಮಗೌಡಾ ಲಾ ಕಾಲೇಜಿನಲ್ಲಿ ರಾ. ಬ. ಎಚ್. ವಿ. ಚಿನ್ನಮುಳಗುಂದ ಹಿಂದೂ ಲಾ ಪ್ರೈಜ ಎಂಬ ಒಂದು ಪಾರಿತೋಷಕವನ್ನಿಟ್ಟಿದ್ದಾರೆ.

ಉತ್ತರ ಕನ್ನಡ

ಇದೇ ತಾರೀಕು ೨೭ ನೇ ದಿನ ಶ್ರೀ ಗೋಕರ್ಣದ ಶ್ರೀ ರಾಮಚಂದ್ರಪುರ ಶ್ರೀ ಮಹಾಸಂಸ್ಥಾನದ ಸುಪ್ರಸಿದ್ಧ ಹಸ್ತಿದಂತ ಸಿಂಹಾಸನದ ಉದ್ಘಾಟನಾರೋಹಣ ಸಮಾರಂಭವು ಶ್ರೀ ಕ್ಷೇತ್ರ ಗೋಕರ್ಣದಲ್ಲಿ ಜರಗುವದು. ಈ ಸಮಾರಂಭಕ್ಕೆ ಮಹನೀಯರೆಲ್ಲ ಬರಬೇಕೆಂದು ಶ್ರೀ ಮಹಾಬಲೇಶ್ವರ ಭಟ್ಟ ಗೋಪಿಯವರ ಅಧ್ಯಕ್ಷತೆಯಲ್ಲಿ ಸ್ಥಾಪಿತವಾದ ಸ್ವಾಗತ ಸಮಿತಿಯವರು ಬಿನ್ನವಿಸುತ್ತಾರೆ.

ಗೋಕರ್ಣದ ಪವಿತ್ರ ತಾಮ್ರಗಂಗಾತೀರ್ಥದಲ್ಲಿ ಕಳೆದ ೧೨ ಕ್ಕೆ ಮಹಾತ್ಮರಿಗೆ ತರ್ಪಣ ಕೊಡಲಾಯಿತು. ಸುತ್ತಲಿನ ಭಾಗಗಳಿಂದ ಅನೇಕ ಜನರು ಬಂದಿದ್ದರು. ಪ್ರಾರ್ಥನೆ ಅಖಂಡ ಸೂತ್ರಯಜ್ಞ ಮೊದಲಾದವು ನಡೆದವು.

ಬಳ್ಳಾರಿ

ಬಳ್ಳಾರಿಯಲ್ಲಿ ೧೨ ನೇ ತಾರೀಕು ಮದ್ಯಪ್ರತಿಬಂಧ ಶಾಖೆಯ ಸಬ್ ಇನಸ್ಪೆಕ್ಟರರೊಬ್ಬರು ಭಟ್ಟಿಸರಾಯಿ ಪತ್ತೆ ಹಚ್ಚಿ ಒಬ್ಬನನ್ನು ಸೆರೆಹಿಡಿದಾಗ ಚಾಕುವಿನಿಂದ ಗಾಯಗೊಳಿಸಲ್ಪಟ್ಟಿದ್ದು,ಈಗ ಅವರನ್ನು ಆಸ್ಪತ್ರೆಗೆ ಹಾಕಲಾಗಿದೆ. ಇದರಂತೆ ಕಳೆದ ವಾರದಲ್ಲಿ ಮದ್ಯಪ್ರತಿಬಂಧದ ಕಾವಲುಗಾರರ ಮೇಲೆ ಏರಿ ಹೋದ್ದಕ್ಕಾಗಿ ೨೭ ಜನರನ್ನು ಬಂಧಿಸಿರುವರು.

ದಕ್ಷಿಣ ಕನ್ನಡ

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ಸಿನ ಅಧ್ಯಕ್ಷರಾದ ಶ್ರೀ ಎಸ್ ನಿಜಲಿಂಗಪ್ಪನವರು ದಿನಾಂಕ ೭ ರಿಂದ೧೦ ರ ವರೆಗೆ ದ.ಕ. ಜಿಲ್ಲೆಯ ಪ್ರವಾಸ ಮಾಡಿದರು. ಕಾಸರಗೋಡು, ಪುತ್ತೂರು, ಪೆರ್ಲ, ಪಾಣೇಮಂಗಳೂರು, ವಿಟ್ಲ, ಬಂಟ್ವಾಳಗಳನ್ನು ಸಂದರ್ಶಿಸಿ ಮರಳಿ ಮಂಗಳೂರಿಗೆ ಬಂದರು. ಈಯೆಲ್ಲ ಸ್ಥಳಗಳಲ್ಲಿ ಅವರು ಕಾಂಗ್ರೆಸ್ಸಿನ ಸಂದೇಶವನ್ನು ಬೀರಿ ಗಾಂಧೀ ಸ್ಮಾರಕ ನಿಧಿಗೆ ಸಹಾಯ ಸಲ್ಲಿಸಬೇಕೆಂದು ಕೇಳಿಕೊಂಡರು.

ಅದೇ ರೀತಿಯಾಗಿ ಅವರು ಮೂಡಬಿದ್ರಿ, ಕಾರ್ಕಳ, ಉಡುಪಿ ಕಟಪಾಡಿ ಮೂಲ್ಕಿಗಳನ್ನು ಸಂದರ್ಶಿಸಿದರು.

ದಕ್ಷಿಣ ಕನ್ನಡ ಜಿಲ್ಲಾ ಗಾಂಧಿ ಸ್ಮಾರಕ ನಿಧಿಯ ಕೋಶಾಧ್ಯಕ್ಷ ಶ್ರೀ ವೆಂಕಟೇಶ ಪೈಗಳು ಪ್ರಾಂತಿಕ ನಿಧಿಯ ಅಧ್ಯಕ್ಷರಾದ ಶ್ರೀ ನಿಜಲಿಂಗಪ್ಪನವರನ್ನು ತಮ್ಮ ರಂಗಭವನಕ್ಕೆ ಕರೆಸಿಕೊಂಡು ಸತ್ಕರಿಸಿ ಜಿಲ್ಲೆಯಲ್ಲಿ ಈ ವರೆಗೆ ೯೫ ಸಾವಿರಗಳ ಸಂಗ್ರಹವಾಗಿದೆಯೆಂಬುದನ್ನವರಿಗೆ ತಿಳಿಸಲಾಯಿತು.

ದಿನಾಂಕ ೮ ರಂದು ಸಂಜೆ ಎಸ್. ನಿಜಲಿಂಗಪ್ಪನವರು ಮಂಗಳೂರು ಜಿಲ್ಲಾ ಕಾಂಗ್ರೆಸ ಸಮಿತಿ, ಕರ್ನಾಟಕ ಏಕೀಕರಣ ಸಂಘ, ಸರ್ವೋದಯ ಸಂಸ್ಥೆಯವರಿತ್ತ ಸತ್ಕಾರವನ್ನು ಸ್ವೀಕರಿಸಿ, ವಾಣಿಜ್ಯ ಸಂಘಕ್ಕೆ ಹೋಗಿ ಅವರ ಮನವಿಗೆ ಉತ್ತರವೀಯುತ್ತಾ ವಣಿಜರಿಂದ ನಮ್ಮ ದೇಶಕ್ಕೆ ಬಂದ ಅಪಕೀರ್ತಿಯನ್ನು ಹೋಗಲಾಡಿಸಬೇಕೆಂದರು. ಮಂಗಳೂರು ಪೌರಸಭೆಯವರಿತ್ತ ಬಿನ್ನವತ್ತಳೆಯನ್ನು ಸ್ವೀಕರಿಸಿ ಅದಕ್ಕೆ ಉತ್ತರವೀಯುತ್ತಾ ಕರ್ನಾಟಕ ಪ್ರಾಂತವಾಗುವುದು ಭಾರತದ ಭದ್ರತೆಗೆಂದರು. ಅಲ್ಲಿಂದವರು ಗೋಕರ್ಣ ದೇವಸ್ಥಾನವನ್ನು ಸಂದರ್ಶಿಸಿದರು.

ಶ್ರೀ ನಿಜಲಿಂಗಪ್ಪನವರು ದಿನಾಂಕ ೧೦ ರಂದು ಆರೋಗ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟರ ಭಾವಚಿತ್ರದ ಅನಾವರಣವನ್ನು ವಿಜಯಾ ಬೇಂಕಿನ ಕಟ್ಟಡದಲ್ಲಿ ಮಾಡಿದರಲ್ಲದೆ ಮಂಗಳೂರಿನ ನಾಗರಿಕರ ಪ್ರಚಂಡ ಸಾರ್ವಜನಿಕ ಸಭೆಯಲ್ಲಿ ಭಾಷಣವಿತ್ತರು.

ಕಳೆದವಾರ ದಕ್ಷಿಣ ಕನ್ನಡ ಜಿಲ್ಲೆಯ ಗೌಡ ಸಾರಸ್ವತ ಬ್ರಾಹ್ಮಣರ ಮಠದೇವಾಲಯ ಮೊಕ್ತೇಸರರ ಸಂಘದ ಆಶ್ರಯದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಮಠದೇವಾಲಯಗಳ ಮೊಕ್ತೇಸರರ ಸಭೆಯೊಂದು, ಶ್ರೀ ಎಂ. ವೆಂಕಟೇಶ ಪೈಗಳ ಅಧ್ಯಕ್ಷತೆಯಲ್ಲಿ ಜರಗಿ ಮದ್ರಾಸು ಸರಕಾರವು ತರಲಿರುವ ದೇವಸ್ಥಾನಗಳ ಮಸೂದೆಯನ್ನು ಖಂಡಿಸಲಾಯಿತಲ್ಲದೆ. ಸದ್ಯಕ್ಕದನ್ನು ಹಿಂತೆಗೆಯಬೇಕಾಗಿ ಕೇಳಲಾಯಿತು. ಶ್ರೀ ಕೆ. ಬಿ. ಜಿನರಾಜ ಹೆಗ್ಗಡೆಯವರು ಈ ಮಸೂದೆಯಲ್ಲಿನ ದೋಷಗಳನ್ನು ವಿವರಿಸಿದರು.

ಮಂಗಳೂರಿನ ಗವರ್ನಮೆಂಟ ಹಾ॥ ಎ॥ ತರಬೇತಿಶಾಲೆಯ ವರ್ಧಂತಿಯು ದಿನಾಂಕ ೧೩ ರಂದು ಶ್ರೀ ವೆಂಕಟ ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿದಾಗ, ಸ್ವಾಗತ, ವರದಿ ಸ್ವಸ್ತಿವಚನಾದಿ ಭಾಷಣಗಳಾಗಿ ವಿನೋದಾವಳಿಗಳಾದುವು.

ಸುಬ್ರಹ್ಮಣ್ಯ ಮಠದ ಶ್ರೀಪಾದಂಗಳವರು ಮದ್ರಾಸು ಎಂಡೋಮೆಂಟ್ ಬಿಲ್ಲನ್ನು ವಿರೋಧಿಸಿ ಮುಖ್ಯಮಂತ್ರಿಗಳಿಗೆ ತಂತಿ ಕಳುಹಿಸಿರುತ್ತಾರೆ. ತಾ. ೧೩ ರಂದು ಉಡುಪಿಯ ಅಷ್ಟಮಠಗಳಲ್ಲಿ ಏಳು ಮಠಗಳ ಶ್ರೀ ಪಾದಂಗಳವರು ಆ ಮಸೂದೆಯ ವಿರುದ್ಧ ಪ್ರತಿಭಟನಾರ್ಥ ಉಪವಾಸವನ್ನಾಚರಿಸಿದರು.

ಪಣ್ಯಡ್ಕ ಅರಸಿನಮಕ್ಕಿಯ (ಪುತ್ತೂರು ತಾ.) ಶಾಲೆಯ ಕಟ್ಟಡದಲ್ಲಿ ತಾ ೧೧ ಶ್ರೀ ಕೆ. ಆರ್. ಕಾರಂತ, ಎಂ. ಎಲ್. ಎ., ಹಾಗು ಶ್ರೀ ಎಂ. ಎಸ್. ಭಿಡೆಯವರ ಮುಂದೆ ನೆರೆಗ್ರಾಮಗಳ ಮಲೆ ನಾಡಿಗರ ಸಂಕಷ್ಟಗಳನ್ನು, ಶ್ರೀ ಸಿ. ಕೆ. ಪದ್ಮಯ್ಯ ಮೊದಲಾದವರು ವಿವರಿಸಿದರು. ಶ್ರೀ ಕಾರಂತ ಹಾಗು ಭಿಡೆಯವರು ಈ ವಿಷಯದಲ್ಲಿ ಸರಕಾರದವರನ್ನು ಒತ್ತಾಯ ಮಾಡಲು ಪ್ರಯತ್ನಿಸುವದಾಗಿ ಆಶ್ವಾಸನ ಕೊಟ್ಟರು. ನೆರೆಗ್ರಾಮಗಳ ಪ್ರತಿನಿಧಿಗಳಿಂದೊಡಗೂಡಿದ ಮಲೆನಾಡು ಸಂಘದ ಶಾಖೆಯೊಂದನ್ನು ಶ್ರೀ ದರ್ಭೆತಡ್ಕ ರಂಗನಾಥ ಹೆಬ್ಬಾರರ ಅಧ್ಯಕ್ಷತೆಯಲ್ಲಿ ಪ್ರಾರಂಭಿಸಲಾಗಿದೆ.

ಕನ್ನಡ ಸಂಸ್ಥಾನ

ಸರದಾರ ವಲ್ಲಭಭಾಯಿ ಪಟೇಲರು ಫೆಬ್ರುವರಿ ೨೪ ಬೆಳಿಗ್ಗೆ ಮೈಸೂರಿಗೆ ಬಂದು ಅಂದು ಅಲ್ಲಿಯೇ ಉಳಿದು ಮರುದಿನ ಬೆಂಗಳೂರನ್ನು ಸಂದರ್ಶಿಸುವರು. ಈ ರೀತಿ ಮೈಸೂರು ಸಂಸ್ಥಾನದಲ್ಲಿ ಎರಡು ದಿನ ಕಳೆದು ಅವರು ಹೈದರಾಬಾದಕ್ಕೆ ಹೋಗುವರು. ಹೈದರಾಬಾದದಲ್ಲಿ ಅವರು ಮಿಲಿಟರಿ ಗವರ್ನರರಲ್ಲಿ ಉಳಿದುಕೊಳ್ಳುವರು. ಉಸ್ಮಾನಿಯಾ ವಿಶ್ವವಿದ್ಯಾಲಯದ ಡಾಕ್ಟರ ಪದವಿಯನ್ನು ಅವರು ಸ್ವೀಕರಿಸುವರು.

ಜಯಚಾಮರಾಜಪುರದಲ್ಲಿ ಸಂಭವಿಸಿದ ಜಾತೀಯ ಗಲಭೆಯ ಸಂಬಂಧದಲ್ಲಿ ಬೆಂಗಳೂರಿನ ಮುಸ್ಲಿಂ ಲೀಗಿನವರು ತಮ್ಮವರ ಕೇಳಿಕೆಗಳನ್ನು ತಿಳಿದುಕೊಂಡು ಹೋದರೆಂದು ತಿಳಿಯುತ್ತದೆ. ಹಿಂದೂ ಮುಖಂಡರಾಗಲಿ ಕಾಂಗ್ರೆಸ ಮುಖಂಡರಾಗಲಿ ಈ ವರೆಗೆ ಬಂದು ವಿಚಾರಣೆ ನಡೆಯಿಸಿಕೊಂಡು ಹೋಗಿಲ್ಲೆಂದು ತಿಳಿಯುತ್ತದೆ.

ಮೈಸೂರು ಆರೋಗ್ಯ ಮಂತ್ರಿಗಳಾದ ಮಾನ್ಯ ಮಹಮ್ಮದ ಶರೀಫರು ಶಿವಮೊಗ್ಗ ಜಿಲ್ಲೆಗೆ ಮೊದಲ ಸಲ ಭೆಟ್ಟಿ ಕೊಟ್ಟು ೫ ದಿನ ಜಿಲ್ಲೆಯಲ್ಲಿ ಸಂಚರಿಸಿದರು. ಮಲೆನಾಡಿನ ಸಮಸ್ಯೆಗಳನ್ನು ಅರಿತುಕೊಂಡು ಬೆಂಗಳೂರಿಗೆ ಮರಳಿ ಹೋದರು.

ಮೈಸೂರು ಸಂಸ್ಥಾನ ಕಾಂಗ್ರೆಸ್ಸು ಪ್ರತ್ಯೇಕವಾಗಿ ಉಳಿಯಬೇಕು. ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಸಮಿತಿಯಲ್ಲಿ ಸೇರಬಾರದು ಎಂದು ಮುಂತಾಗಿ ಮೈಸೂರು ಸಂಸ್ಥಾನ ಕಾಂಗ್ರೆಸ ಕಾರ್ಯಕಾರಿ ಸಮಿತಿ ನಿರ್ಧರಿಸಿದೆ.

ಹೊಸ ಜಿಲ್ಲೆಗಳಿಗಾಗಿ ಸಾತಾರೆಯ ಪೊಲೀಸ ಗೊಂಡು ಕಮಿಶನರರ ಒಂದು ಹೊಸ ಭಾಗವು ರಚಿಸಲ್ಪಟ್ಟು ಕೊಲ್ಹಾಪುರವನ್ನು ಅದರ ಮುಖ್ಯ ಸ್ಥಾನವನ್ನಾಗಿ ಮಾಡಲಾಗುವದೆಂದು ತಿಳಿಯುತ್ತದೆ.

ಸಾಂಗಲಿ ಹಿಂದಿನ ಮಹಾರಾಜರು ಪುಣೆ ವಿಶ್ವವಿದ್ಯಾಲಯಕ್ಕೆ ಒಂದು ಲಕ್ಷ ರೂಪಾಯಿ ಕೊಡಲು ಆಶ್ವಾಸನವಿತ್ತಿರುವರೆಂದು ತಿಳಿಯುತ್ತದೆ.

ವಿಜಾಪುರ

ವಿಜಾಪುರ ಜಿಲ್ಲೆಯಲ್ಲಿ [illegible] ವಿಜಾಪುರದಿಂದ [illegible] ಎಂ. ಎಲ್. ಎ. ಗಳಾಗಿರುವ ಶ್ರೀ [illegible] ಕಾಂಗ್ರೆಸ ಸಮಿತಿಯು [illegible] ಅಕ್ಷೇಪಿಸಿ [illegible] ಶ್ರೀ [illegible] ಮೊದಲಾದ [illegible] ಈ ಸಂಬಂಧದಲ್ಲಿ [illegible] ಮಾಡುವದಾಗಿ [illegible] ದಿಂದ [illegible] ಪಡೆದರು.

ವಿಜಾಪುರ ಜಿಲ್ಲಾ ಕಾಂಗ್ರೆಸ ಸಮಿತಿಯ ಅಧ್ಯಕ್ಷರಾದ ಶ್ರೀ ರಾಜಾರಾಮ ದುಬೆಯವರು ಈ ಸಂಬಂಧದಲ್ಲಿ ಪ್ರಕಟನೆಯೊಂದನ್ನು ಹೊರಡಿಸಿ ಆರೋಪಗಳನ್ನೆಲ್ಲ [illegible] ಶ್ರೀ ನಿಜಲಿಂಗಪ್ಪನವರು ಜಿಲ್ಲಾ [illegible] ಕೈಕೊಂಡಾಗ ಕೂಡಿದ [illegible] ರೂಗಳಲ್ಲಿ [illegible] ೨೦೦೦ ರೂಪಾಯಿಗಳನ್ನು ಮೋಟರ ಕೊಳ್ಳುವದಕ್ಕಾಗಿ ಉಪಯೋಗಿಸಲಾಗಿದೆಯೆಂಬುದು ಇಂದಿನ ಯುಗದಲ್ಲಿ ಮೋಟರಿಲ್ಲದಿರುವದು [illegible] ಯಲ್ಲೆಂದೂ ಹಲವು ಸಲ [illegible] ವರ್ತಿಸುತಿರುವದು [illegible] ಕಾಂಗ್ರೆಸ ಸಮಿತಿಯ ಲೆಕ್ಕಪತ್ರಗಳು [illegible] ವೆಂದೂ ಮುಂತಾಗಿ ಅದರಲ್ಲಿ ಹೇಳಿದ್ದಾರೆ.

ಬದಾಮಿ ತಾಲೂಕಿನ ೫ ನೇ ಪರಿಷತ್ತು ಕಗಲಗೊಂಬದಲ್ಲಿ ಶ್ರೀ [illegible] ವಕೀಲರ ಅಧ್ಯಕ್ಷತೆಯಲ್ಲಿ ೧೧ ಕ್ಕೆ ಸಾಂಗವಾಯಿತು. ಶ್ರೀ [illegible] ದುಬೆಯವರು ಪರಿಷತ್ತನ್ನು ಉದ್ಘಾಟಿಸಿದರು. [illegible] ದನಗಳ ಪ್ರದರ್ಶನವನ್ನು ಶ್ರೀ ವೆಂಕರಡ್ಡಿ ಹೂಲಿಯವರು ಪ್ರಾರಂಭಿಸಿದರು. ಉಪಮಂತ್ರಿಗಳಾದ ಶ್ರೀ ಕಂಬಿಯವರು ಆಹಾರ ಸಮಸ್ಯೆಯನ್ನು ಕುರಿತು ಮಾತಾಡಿದರು.

ಬಾಗಲಕೋಟೆಯ ಶ್ರೀ ಆರ್. ಆರ್. ಉಮ್ಮರ್ಜಿಯವರು ಕೋಲಂಬಿಯ ವಿಶ್ವವಿದ್ಯಾಲಯದ ಸ್ಟ್ಯಾಟಿಸ್ಟಿಕ್ಸ ಪರೀಕ್ಷೆಯಲ್ಲಿ ಮೊದಲನೆ ವರ್ಗದಲ್ಲಿ ಮೊದಲನೆ ನಂಬರು ಬಂದು ಡೀನ ಆಫ ಫ್ಯಾಕಲ್ಟಿಯವರ ೫೦೦ ಡಾಲರ ಸ್ಕಾಲರಶಿಪ್ ಪಡೆದಿರುವರು. ಹಿಂದುಸ್ತಾನ ಸರಕಾರದ ಶಿಷ್ಯವೃತ್ತಿ ಪಡೆದು ಇವರು ಕೋಲಂಬಿಯಕ್ಕೆ ಹೋಗಿದ್ದರು ಜುಲೈಯಲ್ಲಿ ಹಿಂದುಸ್ತಾನಕ್ಕೆ ಮರಳಿ ಬರುವರು.

ಕರ್ನಾಟಕ ಮಾಧ್ಯಮಿಕ ಶಿಕ್ಷಕರ ಸಮ್ಮೇಳನವು ವಿಜಾಪುರದಲ್ಲಿ ಇದೇ ೨೭ ಕ್ಕೆ ಶ್ರೀ ಷಣ್ಮುಖಪ್ಪಾ ಅಂಗಡಿಯವರ ಅಧ್ಯಕ್ಷತೆಯಲ್ಲಿ ನಡೆಯುವದು.

ಹೊಸದಿಲ್ಲಿ

ಭಾರತದಲ್ಲಿ ಇನ್ನೊಂದು ಹೊಸ ಉಕ್ಕಿನ ಕಾರಖಾನೆ ಮತ್ತು ಕಲ್ಲಿದ್ದಲಿಯಿಂದ ಕೃತ್ರಿಮ ಎಣ್ಣೆಯನ್ನು ತಯಾರಿಸುವ ಕಾರಖಾನೆಯನ್ನು ಪ್ರಾರಂಭಿಸುವ ಯೋಜನೆಗಳಿಗೆ ಮಂತ್ರಿ ಮಂಡಲವು ತನ್ನ ಒಪ್ಪಿಗೆಯನ್ನು ಕೊಟ್ಟಿದೆ.

ಕಾಂಗ್ರೆಸ ಮಹಾಸಭೆಗೆ ಧನಿಕರಿಂದ ಹೇರಳ ಹಣವು ಬರುವದೂ ಧನಿಕರೇ ಕಾಂಗ್ರೆಸ್ಸಿನ ಧೋರಣೆಯನ್ನು ನಿರ್ಧರಿಸಲು ಕಾರಣರಾಗುವರೆಂದೂ ಸೋಶಲಿಸ್ಟ ಧುರೀಣರಾದ ಅಶೋಕ ಮೆಹತಾ ಇವರು ಮಾಡಿದ ಆರೋಪಗಳನ್ನು ಕಾಂಗ್ರೆಸ ಕಾರ್ಯದರ್ಶಿಗಳಾದ ಶ್ರೀ ಕಳಾ ವೆಂಕಟರಾಯರು ಪ್ರಕಟನೆ ಹೊರಡಿಸಿ ಅಲ್ಲಗಳೆದಿದ್ದಾರೆ.

ರಾಜಧಾನಿಯ ನೈರುತ್ಯ ಭಾಗದಲ್ಲಿ ವಿದೇಶ ರಾಯಭಾರಿಗಳ ಕಚೇರಿಗಳಿಗಾಗಿ ಕಟ್ಟಡ ಕಟ್ಟಲು ೨೦೦ ಎಕರೆ ಭೂಮಿಯನ್ನು ಅಭಿವೃದ್ಧಿಗೊಳಿಸಬೇಕೆಂದು ಸರಕಾರದವರು ನಿರ್ಧರಿಸಿದ್ದಾರೆ. ಈ ಪ್ರದೇಶದಲ್ಲಿ ೮೦೦ ಪ್ಲಾಟುಗಳನ್ನು ನಿರ್ಮಿಸುವ ಒಟ್ಟು ಬೆಲೆ ೬೨ ಲಕ್ಷ ೬೨ ಸಾವಿರ ರೂಪಾಯಿಗಳಷ್ಟಾಗುವದು.

ಹಿಂದುಸ್ತಾನ ಸರಕಾರದ ಗೃಹಖಾತೆಯ ಕಾರ್ಯದರ್ಶಿ ಶ್ರೀ ಎಚ್. ವಿ. ಆರ್. ಅಯ್ಯಂಗಾರರು ಸುದ್ದಿಗಾರರ ಪರಿಷತ್ತಿನಲ್ಲಿ ಗೃಹಖಾತೆಯ ಹಿಂದಿನ ಮತ್ತು ಇಂದಿನ ಚಾಲನೆಗಳನ್ನು ವಿವರಿಸಿದರು.

ಗಾಂಧಿ ಕೊಲೆಯ ಖಟ್ಲೆಯ ಆರೋಪಿಗಳಲ್ಲಿ ನಥುರಾಮ ಗೋಡಸೆ ಮತ್ತು ಶಂಕರ ಕಿಷ್ಟಯ್ಯರನ್ನು ಬಿಟ್ಟು ಉಳಿದ ಆರೋಪಿಗಳೆಲ್ಲ ಪಂಜಾಬ ಹಾಯಕೋರ್ಟಿಗೆ ಅಪೀಲ ಅರ್ಜಿ ಮಾಡಿಕೊಂಡಿರುವರು. ನಥುರಾಮ ಗೋಡಸೆಯೂ ಒಳಸಂಚಿನ ಆರೋಪದಿಂದ ತನ್ನನ್ನು ಮುಕ್ತಮಾಡಬೇಕೆಂದು ಅಪೀಲ ಮಾಡಿಕೊಂಡಿರುವನು.

ಮಹಾತ್ಮಾ ಗಾಂಧಿಯವರ ಕೊಲೆಯ ಖಟ್ಲೆಯ ವಿಚಾರಣೆಗೆ ಐದು ಲಕ್ಷ ರೂಪಾಯಿಗಳಿಗಿಂತ ಹೆಚ್ಚು ವೆಚ್ಚಬಂದಿದೆಯೆಂದು ತಿಳಿಯುತ್ತದೆ. ಸರಕಾರದ ಮುಖ್ಯ ವಕೀಲರಾದ ಸಿ. ಕೆ. ದಫ್ತರಿಯವರಿಗೆ ದಿವಸಕ್ಕೆ ೧೫೦೦ ರೂಪಾಯಿಯಂತೆ ಕೊಡಲಾಯಿತು.

ಭೋಪಾಲದ ನವಾಬರು ಬೇಗನೆ ರಾಜ್ಯತ್ಯಾಗ ಮಾಡುವರೆಂದೂ ಅವರ ಉತ್ತರಾಧಿಕಾರಿಯಾದ ಅವರ ಮಗಳು ಸಂಸ್ಥಾನದ ವಿಲಯನ ಪ್ರಶ್ನೆಯನ್ನು ನಿರ್ಣಯಿಸುವರೆಂದೂ ತಿಳಿಯುತ್ತದೆ.

ಜಹಗಿರದಾರರ ಕಂದಾಯ ವಸೂಲಿ ಅಧಿಕಾರಗಳನ್ನು ಕಸಿದುಕೊಳ್ಳಲು ಜೋಧಪುರ ಸರಕಾರವು ನಿರ್ಧರಿಸಿರುವದಾಗಿ ಸುದ್ದಿ ಬಂದಿದೆ. ಈ ಬಗ್ಗೆ ಶಕ್ಯ ಕಾಯದೆಯನ್ನು ಬೇಗನೆ ಮಾಡಲಾಗುವದು. ಜಹಗಿರದಾರರ ಪೋಲಿಸ ಮತ್ತು ನ್ಯಾಯದಾನ ಅಧಿಕಾರಗಳನ್ನು ಈಗ ಎರಡು ತಿಂಗಳ ಹಿಂದೆಯೇ ಕಸಿದುಕೊಳ್ಳಲಾಗಿದೆ.

ಯುಕ್ತಪ್ರಾಂತ—ಬಿಹಾರ

ದೇಶದಲ್ಲಿಯ ಪೆಟ್ರೋಲ ಕೊರತೆಯನ್ನು ಹೋಗಲಾಡಿಸಲು ಪಾವರ ಅಲ್ಕೊಹಾಲದ ಉತ್ಪಾದನೆಯನ್ನು ಹೆಚ್ಚಿಸಲು ತೀವ್ರ ಕ್ರಮ ಕೈಕೊಳ್ಳಲು ನಿರ್ಧರಿಸಲಾಗಿದೆ.

ಯುಕ್ತಪ್ರಾಂತ ಮತ್ತು ಬಿಹಾರಗಳ ಸಕ್ಕರೆ ಕಾರಖಾನೆಯ ಕೂಲಿಕಾರರು ಹೂಡಿದ ಸಂಪು ಅಕ್ರಮವೆಂದು ಸರಕಾರವು ಸಾರಿದ್ದರಿಂದ ಕೂಲಿಕಾರರ ಮುಖಂಡರಾದ ಬ್ರಿಜಕಿಶೋರ ಶಾಸ್ತ್ರಿ, ಮುಕುಂದಸಿಂಗ, ಹರಿಭಾನ ಸಿಂಗ ಇವರು ಉಪವಾಸವನ್ನು ಪ್ರಾರಂಭಿಸಿದ್ದರಷ್ಟೇ. ಅವರ ಪ್ರಕೃತಿಯು ರೋಗಪೀಡಿತವಾದ್ದರಿಂದ ಅವರನ್ನು ಆಸ್ಪತ್ರೆಗೆ ಸಾಗಿಸಲ್ಪಾಯಿತು.

ಕಳೆದ ಯುದ್ಧದಿಂದ ಜಗತ್ತಿನ ನೀತಿಮತ್ತೆಗೆ ಆಘಾತ ಎಂಬ ವಿಷಯದ ಮೇಲೆ ಶ್ರೇಷ್ಠವಾದ ನಿಬಂಧ ಬರೆದವರಿಗೆ ೫೦೧ ರೂ. ಬಹುಮಾನ ಕೊಡುವದಾಗಿ ಗಯಾದಲ್ಲಿಯ ಹಿಂದೀ ಸಂಸ್ಕೃತಿ ಸಂಘದವರು ಪ್ರಸಿದ್ಧಿಸಿದ್ದಾರೆ.

ಯುಕ್ತಪ್ರಾಂತದಲ್ಲಿ ಮನೆ ಕಟ್ಟಲು ಬೇಕಾಗುವ ಇಟ್ಟಿಂಗಿ, ಕಬ್ಬಿಣ, ಸಿಮೆಂಟ ಇವುಗಳ ಬೆಲೆ ನಿಯಂತ್ರಣಾಜ್ಞೆ ಹೊರಟಿದ್ದು ೧೫ ಸಾವಿರ ರೂಪಾಯಿಗಳಿಗಿಂತ ಹೆಚ್ಚು ಬೆಲೆಬಾಳುವ ಕಟ್ಟಡ ಸಾಮಗ್ರಿ ತಗಲುವಂಥ ಕಟ್ಟಡಗಳನ್ನು ಕಟ್ಟಲು ಅಪ್ಪಣೆ ಕೊಡಕೂಡದೆಂದು ಆಜ್ಞೆ ಹೊರಡಿಸುವ ವಿಚಾರವನ್ನು ಯುಕ್ತಪ್ರಾಂತ ಸರಕಾರವು ನಡೆಸಿದೆ.

ಬಿಹಾರ ಮತ್ತು ಯುಕ್ತಪ್ರಾಂತದ ಗಡಿಯಲ್ಲಿ ಹರಿಯುವ ಗಂಗಾ ಮತ್ತು ಗೋಗ್ರಾ ನದಿಗಳು ತಮ್ಮ ಪಾತ್ರವನ್ನು ಮೇಲಿಂದ ಮೇಲೆ ಬದಲಿಸುತ್ತ ಬಂದದ್ದರಿಂದ ಕಳೆದ ೧೦೦ ವರ್ಷಗಳಿಂದ ಈ ಎರಡೂ ಪ್ರಾಂತಗಳ ಗಡಿ ನಿರ್ಣಯದ ಬಗ್ಗೆ ವಾದವಿವಾದ ನಡೆದಿದೆ. ಇದನ್ನು ಸರಿಪಡಿಸಲು ಈಗ ನಾಲ್ಕು ಜನರ ಸಮಿತಿಯೊಂದನ್ನು ನೇಮಿಸಿದೆ. ಇದರಲ್ಲಿ ಯುಕ್ತಪ್ರಾಂತದವರು ಇಬ್ಬರು ಬಿಹಾರದವರು ಇಬ್ಬರು ಹೀಗೆ ಸದಸ್ಯರಿರುವರು.

ಹಿಂದುಸ್ತಾನ

ಮುಂಬಯಿ

ಹಿಂದುಸ್ತಾನದಲ್ಲೆಲ್ಲ ಬೇಗನೆ ಸೈನ್ಯ ಭರತಿ ಕಾರ್ಯಕ್ರಮವನ್ನು ಸರಕಾರದವರು ಕೈಕೊಳ್ಳಲಿರುವರೆಂದು ತಿಳಿಯುತ್ತದೆ. ಕನಿಷ್ಠ ೧೩೦ ಸಾವಿರ ಸೈನಿಕರು ಇರಬೇಕೆಂದು ಕಳೆದ ಸಪ್ಟಂಬರದಲ್ಲಿ ಹಿರಿಯೋಲಗದಲ್ಲಿ ಪಾಸಾದ ಕಾಯದೆಯಲ್ಲಿ ಹೇಳಿದೆ. ಸೈನ್ಯ ಭರತಿಗಾಗಿ ಭಾರತವನ್ನು ಎಂಟು ಭಾಗಗಳಾಗಿ ವಿಭಜಿಸಲಾಗಿದೆ.

ಮುಂಬಯಿ ಪ್ರಾಂತದ ಜಿಲ್ಹೆಗಳಲ್ಲಿ ಒಟ್ಟು ೪೦ ನೀರಾ ಕೇಂದ್ರಗಳಿದ್ದು ಈ ವಿಷಯದಲ್ಲಿ ಇಡೀ ಮುಂಬಯಿ ಪ್ರಾಂತದಲ್ಲಿಯೇ ಕರ್ನಾಟಕಕ್ಕೆ ನೀರಾಪಾನದಲ್ಲಿ ಅಗ್ರಸ್ಥಾನ ಸಿಕ್ಕಿದೆ. ಗುಜರಾಥದ ೬ ಜಿಲ್ಹೆಗಳಲ್ಲಿ ೨ ನೀರಾ ಕೇಂದ್ರ, ಮಹಾರಾಷ್ಟ್ರದ ೧೧ ಜಿಲ್ಹೆಗಳಲ್ಲಿ ೪ ನೀರಾ ಕೇಂದ್ರ ಮಾತ್ರ ಇರುವವು.

ಮಾರಾಟಕರದಿಂದ ಮುಂಬಯಿ ಸರಕಾರಕ್ಕೆ ಕಳೆದ ವರ್ಷ ೪ ಕೋಟಿ ರೂಪಾಯಿ ಉತ್ಪನ್ನ ಬಂದಿದ್ದರೆ ಈ ವರ್ಷ ೬ ಕೋಟಿ ರೂ. ಉತ್ಪನ್ನ ಬಂದಿದೆ. ಮಾರಾಟ ವಸೂಲಿಯಲ್ಲಿ ಹೆಚ್ಚು ದಕ್ಷತೆ ವಹಿಸಿದ್ದರಿಂದ ಮತ್ತು ಚೈನಿ ವಸ್ತುಗಳ ಮೇಲೆ ರೂ. ಗೆ ಒಂದಾಣೆಯಂತೆ ಕರ ಹೇರಿದ್ದರಿಂದ ಉತ್ಪನ್ನ ಹೆಚ್ಚಿದೆ.

ಅಹಮದಾಬಾದದ ಹತ್ತರದ ವಾಡಜ ಉಪನಗರದಲ್ಲಿ ಸುಮಾರು ೨೦೦೦ ಹರಿಜನ ನಿರಾಶ್ರಿತರು ಉಪವಾಸ ಪ್ರಾರಂಭಿಸಿದ್ದಾರೆ. ಸರಕಾರದವರು ೯ ಲಕ್ಷ ರೂಪಾಯಿ ವೆಚ್ಚ ಮಾಡಿ ಈ ನಿರಾಶ್ರಿತರಿಗೆ ವಸತಿ ಸೌಕರ್ಯ ಕಲ್ಪಿಸಿ ಕೊಟ್ಟಿದ್ದಾರೆ. ಈ ನಿರಾಶ್ರಿತರು ತಮ್ಮ ಸೀದಾ ಕಾರ್ಡುಗಳನ್ನೆಲ್ಲ ಕೂಡಿಸಿ ಒಂದು ಕೋಲಿಗೆ ಕಟ್ಟಿ ಅದರ ಸುತ್ತಲೂ ಭಜನೆ ಮಾಡುತ್ತ ಉಪವಾಸ ಕುಳಿತಿದ್ದಾರೆ. ಆಹಾರ ಧಾನ್ಯ ಕೊಳ್ಳಲು ಹಣವಿಲ್ಲದ್ದರಿಂದ ಸರಕಾರದವರು ಪುಕ್ಕಟೆ ಧಾನ್ಯ ಒದಗಿಸಬೇಕೆಂದು ಬೇಡಿಕೆ.

ಮುಂಬಯಿ ಸ್ಪೆಶಲ್ ಪೋಲೀಸರು ಬೇರೆ ಬೇರೆ ಪ್ರಾಂತಗಳಲ್ಲಿ ಶೋಧ ನಡೆಸಿ, ಗುಪ್ತ ಸಂಚು ಮತ್ತು ಇತರ ವಿಘಾತಕ ಚಟುವಟಿಕೆಗಳಲ್ಲಿ ತೊಡಗಿದ ಒಂದು ತಂಡದ ಪತ್ತೆ ಹಚ್ಚಿ ೮ ಜನರನ್ನು ಬಂಧಿಸಿದ್ದಾರೆ. ಮುಂಬಯಿಯಲ್ಲಿ ಅಷ್ಟೇ ಅಲ್ಲದೆ ಇತರ ಕಡೆಗಳಲ್ಲಿಯೂ ಈ ತಂಡದವರು ಚಟುವಟಿಕೆ ನಡೆಸಿದ್ದಾರೆಂದು ಈ ಶೋಧದಲ್ಲಿ ತಿಳಿದುಬಂದಿದೆ. ಶೋಧದಲ್ಲಿ ಪೋಲೀಸರಿಗೆ ಒಂದು ಪಿಸ್ತೂಲು ಮತ್ತು ಹೇರಳವಾದ ಮದ್ದು ಗುಂಡುಗಳು ಸಿಕ್ಕಿರುವವು. ಮುಂಬಯಿಯಲ್ಲಿಯೂ ಈ ಸಂಬಂಧದಲ್ಲಿ ಕೆಲವು ಕಡೆ ಝುಡ್ತಿಗಳು ನಡೆದವು.

ಪಶ್ಚಿಮ ಬಂಗಾಲ

ಹುಗಳಿ ಜಿಲ್ಹೆಯಲ್ಲಿಯ ರಾಜಬೀದಿಯಲ್ಲಿ ೧೫ ನೇ ತಾರೀಕು ಮಧ್ಯಾನ್ಹ ಹೊರಟ ಓರ್ವ ಅಂಚೆ ಓವರಸೀಯರನನ್ನು ಗುಂಡು ಹಾರಿಸಿ ಬೆದರಿಸಿ ಅವನ ಹತ್ತರ ಇದ್ದ ಎಷ್ಟೋ ಸಾವಿರ ರೂಪಾಯಿ ತುಂಬಿದ ಚೀಲವನ್ನು ಕಸಿದುಕೊಂಡು ಹೋಗಿದ್ದಾರೆ. ಗಾಯಗೊಂಡ ಅಂಚೆ ಜವಾನನನ್ನು ಆಸ್ಪತ್ರೆಗೆ ಸಾಗಿಸಲಾಗಿದೆ.

ಕಲಕತ್ತೆಯ ವೆಲಿಂಗ್ಟನ ಕೂಟದಲ್ಲಿ ೧೩ ನೇ ದಿನ ಸಾಯಂಕಾಲ ಸೇರಿದ್ದ ಸಾರ್ವಜನಿಕ ಸಭೆಯಲ್ಲಿ ಸ್ಫೋಟಕ ದ್ರವ್ಯಗಳನ್ನು ಕೆಲ ಕಿಡಿಗೇಡಿಗಳು ಒಗೆದದ್ದರಿಂದ ಗೊಂದಲವುಂಟಾಯಿತು. ಯಾರಿಗೂ ಗಾಯಗಳಾಗಿಲ್ಲ.

ಹಿಂದುಸ್ತಾನಕ್ಕೆ ಬಂದೊದಗಲಿರುವ ಗಂಡಾಂತರವನ್ನು ಎದುರಿಸುವದಕ್ಕಾಗಿ ಸದ್ಯದ ಅಧಿಕಾರಾರೂಢ ಪಕ್ಷಕ್ಕೆ ವಿರೋಧಿಯಾದ ಪ್ರಬಲ ಪಕ್ಷವೊಂದನ್ನು ಸಂಘಟಿಸಬೇಕಾದುದು ಅಗತ್ಯವಾಗಿದೆಂದು ಸಾಮ್ಯವಾದೀ ಪ್ರಜಾರಾಜ್ಯಪಕ್ಷದ ಸ್ಥಾಪಕರಾದ ಶ್ರೀ ಶರಚ್ಚಂದ್ರರು ಮುಂಬಯಿಯ ಒಂದು ಸತ್ಕಾರ ಸಭೆಯಲ್ಲಿ ಅಭಿಪ್ರಾಯಪಟ್ಟರು.

ಮದ್ರಾಸ

ಸೇಲಂದಲ್ಲಿಯ ಕೆಲ ಪ್ರವಾಸಿಕರು ಸತ್ಯಾಗ್ರಹ ಹೂಡಿ ರೇಲ್ವೆ ಅಧಿಕಾರಿಗಳಿಗೆ ತಿಳಿಸಿ ಸುಮಾರು ನೂರಕ್ಕಿಂತ ಹೆಚ್ಚು ಚೀಲ ಅಕ್ಕಿಯನ್ನು ಅನಧಿಕೃತ ರೀತಿಯಲ್ಲಿ ಸೇಲಂಕ್ಕೆ ತಂದಿದ್ದಾರೆ— ಈ ಪ್ರವಾಸಿಕರು ಅತ್ತೂರಿನಿಂದ ಸೇಲಂಕ್ಕೆ ಈ ಅಕ್ಕಿಯನ್ನು ತಂದು ಅದನ್ನು ಇಳಿಸಿಕೊಳ್ಳುವ ವರೆಗೆ ಗಾಡಿಯನ್ನು ಮುಂದಕ್ಕೆ ಹೋಗಗೊಡದೆ ಅನಧಿಕೃತವಾಗಿ ಅಕ್ಕಿಯನ್ನು ತೆಗೆದುಕೊಂಡು ಹೋದರು. ಈಗ ಅತ್ತೂರಿನಿಂದ ಬಿಡುವ ಗಾಡಿಗಳ ಮೇಲೆಲ್ಲ ಬಲವಾದ ಕಾವಲನ್ನಿಡಲಾಗಿದೆ.

ರೇಲ್ವೆ ಕೆಲಸಗಾರ ಮಹಾಮಂಡಳದವರು ರೇಲ್ವೆ ಖಾತೆಯವರೊಡನೆ ಇನ್ನೂ ಮಾತುಕತೆ ನಡೆಸಿರುವಾಗ ಸೌಥ ಇಂಡಿಯನ್ ರೇಲ್ವೆಯಲ್ಲಿಯ ಕಮ್ಯುನಿಸ್ಟರು ಉಪದ್ವ್ಯಾಪ ನಡೆಸಿ ಸಂಪು ಹೂಡಲು ಕೆಲಸಗಾರರನ್ನು ಪ್ರಚೋದಿಸುತಿರುವದು ಶೋಚನೀಯವಾಗಿದೆಂದೂ ಕಮ್ಯುನಿಸ್ಟರ ಈ ಉಪದ್ವ್ಯಾಪಕ್ಕೆ ರೇಲ್ವೆ ಕೆಲಸಗಾರರು ಬಲಿಬೀಳಬಾರದೆಂದೂ ಸೌಥ ಇಂಡಿಯನ್ ರೇಲ್ವೆ ಕೆಲಸಗಾರ ಸಂಘದ ಜನರಲ್ ಸೆಕ್ರೆಟರಿ ಜಿ. ರಾಮಚಂದ್ರನ್‌ರು ಪ್ರಕಟನೆಯ ಮೂಲಕ ಕೇಳಿಕೊಂಡಿದ್ದಾರೆ.

ಪಾಕಿಸ್ತಾನ

ಪಾಕಿಸ್ತಾನ ಮತ್ತು ಹೈದರಾಬಾದಗಳಲ್ಲಿ ನಡೆದ ೨೦ ಕೋಟಿ ರೂಪಾಯಿಗಳ ಸಾಲದ ವ್ಯವಹಾರವು ಸಂಪೂರ್ಣವಾಗಿ ಕ್ರಮಬದ್ಧವಾಗಿದೆ. ಈ ರೀತಿಯ ವ್ಯವಹಾರವನ್ನು ನಡೆಸಲು ಉಭಯ ಸರಕಾರಗಳಿಗೆ ಅಧಿಕಾರವಿದೆ ಮತ್ತು ಉಭಯ ಸರಕಾರಗಳೂ ಅದನ್ನು ಮನ್ನಿಸಿವೆ ಎಂದು ಪಾಕಿಸ್ತಾನದ ಅರ್ಥಸಚಿವ ಗುಲಾಮ ಮಹಮ್ಮದರು ಪಾಕಿಸ್ತಾನ ಹಿರಿಯೋಲಗದಲ್ಲಿ ಕೇಳಿದ ಪ್ರಶ್ನೆಗೆ ಉತ್ತರ ಕೊಟ್ಟರು.

ಕೋತಲಿ ಭಾಗದಲ್ಲಿ ೫೦ ಸಾವಿರ ನಿರಾಶ್ರಿತರಿಗೆ ಕಾಶ್ಮೀರದಲ್ಲಿಯ ಹಿಂದೀ ಪ್ರದೇಶದಲ್ಲಿ ಹಾಯ್ದು ಹೋಗಿ ಆಹಾರ ಪೂರಯಿಸಲು ಪಾಕಿಸ್ತಾನ ಮಿಲಿಟರಿ ಜನರಿಗೆ ಮಾರ್ಗ ಕೊಡಬೇಕೆಂದು ಪಾಕಿಸ್ತಾನ ಸರಕಾರವು ಕೇಳಿಕೊಂಡದ್ದಕ್ಕೆ ಹಿಂದುಸ್ತಾನ ಸರಕಾರದವರು ಒಪ್ಪಿದ್ದಾರೆಂದು ಪ್ರಸಿದ್ಧಿಸಲ್ಪಟ್ಟಿದೆ.

ಮುಸಲ್ಮಾನ ಪ್ರದೇಶಗಳ ಆಡಳಿತ ಇಸ್ಲಾಮ ಧರ್ಮದ ಪ್ರಕಾರ ನಡೆದು ಉತ್ತಮಗೊಂಡೀತೆಂಬ ಆಸೆಯಿಂದ ತಾವು ಪಾಕಿಸ್ತಾನ ಬಯಿಸಿದೆವು ಪಡೆದುಕೊಂಡೆವು. ಆದರೆ ಪಾಕಿಸ್ತಾನದ ಆಡಳಿತವು ಬ್ರಿಟಿಶರ ಆಡಳಿತಕ್ಕಿಂತ ಕೀಳುಮಟ್ಟಕ್ಕಿಳಿದಿದೆಯೆಂದೂ ತಮ್ಮ ಪ್ರಗತಿ ಕುಂಠಿತವಾಗಹತ್ತಿದೆಯೆಂದೂ ಮುಖ್ಯೀರರು ಲಾಹೋರ ಪತ್ರಿಕೆಯೊಂದರಲ್ಲಿ ಲೇಖವನ್ನು ಬರೆದಿದ್ದಾರೆ. ಇಲ್ಲಿನ ಪ್ರಾಂತೀಯ ಸರಕಾರಗಳು ಸಮರ್ಥವಾಗಿಲ್ಲ. ಇಷ್ಟೇ ಅಲ್ಲ ಕೇಂದ್ರ ಸರಕಾರವೂ ಸಮರ್ಥ ಸರಕಾರವಾಗಿಲ್ಲ. ಪಶ್ಚಿಮ ಪಂಜಾಬ ಸರಕಾರದ ಮೇಲೆ ಅಸಮರ್ಥತೆಯ ಆರೋಪ ಹೊರಿಸಿ ಕೇಂದ್ರ ಸರಕಾರದವರು ಅದನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ. ಕೇಂದ್ರ ಸರಕಾರಕ್ಕಿಂತ ವರಿಷ್ಠ ಸರಕಾರ ಬೇರೊಂದಿದ್ದರೆ ಕೇಂದ್ರ ಸರಕಾರವನ್ನೂ ವಶಪಡಿಸಿಕೊಳ್ಳದಿರುತಿರಲಿಲ್ಲ ಎಂದು ಮುಂತಾಗಿಯೂ ಮುಖ್ಯೀರರು ಲೇಖದಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ವಾಯವ್ಯ ಗಡಿನಾಡಿನ ಮುಖ್ಯಮಂತ್ರಿ ಅಬ್ದುಲ್ ಕಯಾಮಖಾನರ ಉಪದ್ವ್ಯಾಪದಿಂದ ಅಲ್ಲಿನ ಗವರ್ನರರು ಬೇಸತ್ತು ಹೋಗಿದ್ದು ನಿವೃತ್ತಿ ಹೊಂದಲಿಚ್ಛಿಸುತ್ತಾರೆ. ಅವರ ಸ್ಥಳಕ್ಕೆ ಸರ್ ಫಿರೋಜಖಾನ ನೂನರನ್ನು ನೇಮಿಸಬಹುದೆಂದು ತಿಳಿಯುತ್ತದೆ.

ಪಾಕಿಸ್ತಾನದ ಆಚೆಗಿರುವ ವಜೀರಿಸ್ತಾನದಲ್ಲಿ ಇಫಿಫಕೀರನು ವಿರುದ್ಧ-ಸೈನ್ಯ- ಸಿದ್ಧತೆಯನ್ನು ನಡೆಸಿದ್ದು ಪಾಕಿಸ್ತಾನವನ್ನು ಹಿಂಸಿಸುತ್ತಿರುವನೆಂದು ತಿಳಿಯುತ್ತದೆ. ಹಿಂದುಸ್ತಾನ. ಪಾಕಿಸ್ತಾನಗಳಲ್ಲಿ ಕಾಶ್ಮೀರ ಪ್ರಕರಣದಲ್ಲಿ ಆದ ಒಡಂಬಡಿಕೆಯನ್ನು ದಕ್ಕಿಸಗೊಡಬಾರದೆಂದು ವಿದೇಶೀಯರನೇಕರು ಗಡಿ ಪ್ರದೇಶದಲ್ಲಿ ಕುಹಕ ನಡೆಸಿರುವರೆಂದು ತಿಳಿಯುತ್ತದೆ. ಪರಿಸ್ಥಿತಿ ಯಾವಾಗ ಪ್ರಕ್ಷುಬ್ಧವಾಗುವದೆಂದೂ ಹೇಳಬಾರದು.

ಹಿರಿಯೋಲಗದಲ್ಲಿ ಒಂದು ವಾರ

(೪ನೇ ಪುಟದಿಂದ)

ಗಳ ಸ್ಪಷ್ಟೀಕರಣ ಕೇಳಲಾಗಿದೆಯೆಂದು ಪಂ. ಜವಾಹರಲಾಲರು ತಿಳಿಸಿದರು.

ಸಂಸ್ಥಾನಗಳು, ಪ್ರಾಂತಗಳು

ಸಂಸ್ಥಾನಗಳನ್ನೂ ಪ್ರಾಂತಗಳನ್ನೂ ಒಂದೇ ಮಟ್ಟಕ್ಕೆ ತರುವ ಪ್ರಯತ್ನಗಳನ್ನು ಸರಕಾರ ಮಾಡುತಿದೆಯೆಂದು ಸರದಾರ ಪಟೇಲರು ಒಂದು ಪ್ರಶ್ನೆಗೆ ಉತ್ತರಿಸಿದರು. ಸಂಸ್ಥಾನಗಳ ಆಡಳಿತೆಯನ್ನು ಪ್ರಾಂತಗಳ ಮಟ್ಟಕ್ಕೆ ತರುವ ಬಗ್ಗೆ ಸಂಸ್ಥಾನ ಒಕ್ಕೂಟಗಳ ಹೊಸ ಒಪ್ಪಂದದಲ್ಲಿ ಒಂದು ಕಲಮು ಜೋಡಿಸಲಾಗಿದೆಯಲ್ಲದೆ, ಸಂಸ್ಥಾನಗಳಿಗಾಗಿ ಒಂದೇ ಬಗೆಯಾದ ಮಾದರಿ ಘಟನೆಯನ್ನು ತಯಾರಿಸಲು ಒಂದು ಉಪಸಮಿತಿ ಘಟನಾ ಸಮಿತಿಯಿಂದ ನೇಮಿಸಲ್ಪಟ್ಟಿದೆ.

ಹೈದರಾಬಾದ, ಕಾಶ್ಮೀರ

ಹೈದರಾಬಾದಿನ ಸಂಬಂಧದ ಅನೇಕ ಪ್ರಶ್ನೆಗಳನ್ನು ಸಂಸ್ಥಾನ ಮಂತ್ರಿಗಳು ಉತ್ತರಿಸಿದರು. ಹೈದರಾಬಾದಿನಲ್ಲಿ ಪೋಲೀಸ ಕ್ರಮ ಕೈಕೊಂಡದ್ದಕ್ಕಾಗಿ ಬಂದ ವೆಚ್ಚವನ್ನು ಹೈದರಾಬಾದದಿಂದಲೆ ವಸೂಲ ಮಾಡುವ ವಿಚಾರವಿದೆ. ಸಿಡ್ನೆ ಕಾಟನ್ನನ ಮುಖಾಂತರ ಹೈದರಾಬಾದ ಸರಕಾರ ೧ ಕೋಟಿ ರೂಪಾಯಿಯ ನೋಟುಗಳನ್ನು ಹೊರಗೆ ಕಳಿಸಿತ್ತು. ಲಾಯಕ ಅಲಿ ಮಂತ್ರಿಮಂಡಲ ತನ್ನ ಅಧಿಕಾರಾವಧಿಯಲ್ಲಿ ಅಂತರ್ಬಾಹ್ಯ ಪ್ರಚಾರಕ್ಕಾಗಿ ೯ ಕೋಟಿ ೧೫ ಲಕ್ಷ ರೂ. ದುಂದು ಮಾಡಿರುವದು.

ಕಾಶ್ಮೀರ ಯುದ್ಧದ ವಿವರವನ್ನು ತಿಳಿಸುತ್ತ ಅರ್ಥಮಂತ್ರಿಗಳು ಹೇಳಿದ್ದು: ಕಾಶ್ಮೀರ ಯುದ್ಧದಲ್ಲಿ ೧೭೫೫ ಸೈನಿಕರು ನಿಧನ ಹೊಂದಿದರು. ೪೧೦೯ ಜನ ಗಾಯಗೊಂಡರು. ಕಾಶ್ಮೀರ ಸರಕಾರಕ್ಕೆ ೧ ಕೋಟಿ ರೂಪಾಯಿಯ ಎರಡು ಸಾಲ ಕೊಡಲಾಗಿದೆ, ಇನ್ನೂ ೧ ಕೋಟಿ ೨೦ ಲಕ್ಷ ಕೊಡಲಾಗುವದು. ೨॥ ಸಲೆ ಬಡ್ಡಿ ಸೇರಿಸಿ ೫ ವರ್ಷಗಳಲ್ಲಿ ಮುಟ್ಟಿಸಬೇಕೆಂದು ಕರಾರಿದೆ. ೨,೩೬,೩೦,೦೦೦ ರೂಪಾಯಿ ಸಹಾಯ ಧನ ಕೊಟ್ಟಿದ್ದನ್ನೂ ಸಾಲವೆಂದೇ ಬಗೆಯಲಾಗುವದು. ಕಾಶ್ಮೀರ ಯುದ್ಧದ ವೆಚ್ಚವನ್ನು ಮಾತ್ರ ಸಾರ್ವಜನಿಕ ಹಿತದೃಷ್ಟಿಯಿಂದ ಬಹಿರಂಗ ಪಡಿಸಲಿಲ್ಲ.

ಪಾಟಣಾ ವಿಶ್ವವಿದ್ಯಾಲಯದಲ್ಲಿ ಕೂಲಿಕಾರ ಹಾಗು ಸಾಮಾಜಿಕ ಹಿತ ರಕ್ಷಣ ಸಂಘವು ಸ್ಥಾಪಿತವಾಗಿದ್ದು ಹಿಂದುಸ್ತಾನ ಸರಕಾರದ ಕೂಲಿಕಾರ ಮಂತ್ರಿಗಳಾದ ಮಾನ್ಯ ಜಗಜೀವನ ರಾಮರು ಅದನ್ನು ಉದ್ಘಾಟಿಸಿದರು.

ಮಹಾರಾಷ್ಟ್ರ ಮತ್ತು ಯುಕ್ತ ಪ್ರಾಂತಗಳಲ್ಲಿ ನಡೆದದ್ದ ರಣಜಿ ಕ್ರಿಕೆಟ ಪಂದ್ಯದಲ್ಲಿ ಮಹಾರಾಷ್ಟ್ರದವರು ಒಂದು ಆಟ ಮತ್ತು ೧೮೪ ಓಟಗಳಿಂದ ವಿಜಯಿಗಳಾದರು. ಮಹಾರಾಷ್ಟ್ರದವರು ತಮ್ಮ ಮೊದಲನೇ ಆಟದಲ್ಲಿ ೩೯೬ ಓಟಗಳನ್ನು ಸಂಪಾದಿಸಿದರು. ಯುಕ್ತಪ್ರಾಂತದವರು ತಮ್ಮ ೧೫೧ ಮತ್ತು ಎರಡನೆ ಆಟದಲ್ಲಿ ಮೊದಲನೆ ಆಟದಲ್ಲಿ ೯೧ ಓಟಗಳನ್ನು ಮಾತ್ರ ತೆಗೆದರು.

ಮಂಗ್ರೋಲ ಮಾನವದಾರ ಮತ್ತು ಜುನಾಗಡ ಸಂಸ್ಥಾನಗಳು ಪಾಕಿಸ್ತಾನದ ಸೇರ್ಪಡೆ ಪತ್ರಿಕೆಗೆ ಸಹಿ ಹಾಕಿದ್ದರೂ ಹಿಂದುಸ್ತಾನ ಸರಕಾರದವರು ಅವನ್ನು ಆಕ್ರಮಿಸಿದ್ದನ್ನು ತಾವು ಮನ್ನಿಸುವದಿಲ್ಲ ಎಂದು ಪಾಕಿಸ್ತಾನದ ವಿದೇಶ ಮಂತ್ರಿ ಜಾಫರುಲ್ಲಾಖಾನರು ಹಿರಿಯೋಲಗದಲ್ಲಿ ಹೇಳಿದರು.

ನಾರದ ಭವಿಷ್ಯ

ಜ್ಯೋತಿಷಿ.. ಕೃಷ್ಣಶಾಸ್ತ್ರಿ ಭಿಡೆ ಭವಿಷ್ಯ ಕಥನ ಆಫೀಸ ಖಡೇಬಝಾರ, ಬೆಳಗಾವಿ

ಫೆಬ್ರುವರಿ ತಾ. ೨೧ ರಿಂದ ೨೭ ರ ವರೆಗೆ

ಮೇಷ

ತನ್ನವರೆನ್ನುವವರೇ ಈ ವಾರ ನಿಮಗೆ ಕ್ಲೇಶಕಾರಣರಾಗುವರು. ಮಕ್ಕಳ ವಿರೋಧ, ಬಂಧುಗಳ ತಿರಸ್ಕಾರ, ಮಿತ್ರರ ವಿಮುಖತೆಗಳನ್ನೂ ನೀವು ಎದುರಿಸುವಿರಿ. ಆದರೂ ಕಂಡಾಬಟ್ಟೆ ವೆಚ್ಚವೊಂದನ್ನು ಬಿಟ್ಟರೆ ಉಳಿದ ವಿಚಾರಗಳೆಲ್ಲ ನಿಮಗೆ ಅನುಕೂಲವೆ. ಉದ್ಯೋಗದಲ್ಲಾಗಲಿ ವಾದ ಸ್ಪರ್ಧೆಗಳಲ್ಲಾಗಲಿ ನಿಮ್ಮ ಮತ್ತು ಹೆಂಡತಿಯ ಆರೋಗ್ಯದಲ್ಲಾಗಲಿ ಕೊರತೆ ಬಾರದು. ಭೆಟ್ಟಿಗಿಂತ ಪತ್ರವ್ಯವಹಾರ ಒಳಿತು. ಅಶ್ವಿನಿಯ ಕೊನೆಯ ೩ ಮತ್ತು ಭರಣಿಯ ೧ ನೆ ಚರಣಗಳಿಗೆ ತೊಂದರೆ ಕಡಿಮೆ. ತಾ. ೨೨,೨೩,೨೭ ಉತ್ತಮ.

ವೃಷಭ

ಈ ವಾರ ನಿಮ್ಮ ಮನೆಯೆಂದರೆ ಕೌರವರ ಪಾಳೆಯದಂತೆ ಇರುವದು. ಪ್ರತಿಯೊಬ್ಬನೂ ತನ್ನ ಕೋಳಿಗೆ ಮೂರೇಕಾಲು ಎನ್ನುವನು. ಆಪ್ತರು, ಆಶ್ರಿತರು, ಹಿರಿಯರು ಎಲ್ಲರೂ ತಿರುಗಿಬೀಳುವರು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಕಡಿಮೆ ಲಾಭವೂ ಅಷ್ಟಕಷ್ಟೆ. ಕೈಯಲ್ಲಿದ್ದ ಅಧಿಕಾರ ಕೈಬಿಟ್ಟು ಹೋಗುವ ಸಂಭವವಿದೆ. ಆದರೆ ವಾದ ಸ್ಪರ್ಧೆಗಳಲ್ಲಿ ಒಮ್ಮೆ ಕೈ ಮೇಲು. ಪತ್ರವ್ಯವಹಾರ ಒಳಿತು. ರೋಹಿಣಿಯ ಕೊನೆಯ ಮೂರು ಮತ್ತು ಮೃಗಶಿರದ ೧ ನೆ ಚರಣಗಳಿಗೆ ತುಂಬ ತೊಂದರೆ. ತಾ. ೨೧, ೨೫,೨೬ ಲೇಸು.

ಮಿಥುನ

ಸ್ತ್ರೀಸುಖ ಉತ್ತಮ. ಆದರೆ ಮಕ್ಕಳ ಉಪದ್ವ್ಯಾಪದಿಂದ ಆಪ್ತೇಷ್ಟರು ಸಿಟ್ಟಿಗೇಳುವರು. ಉದ್ಯೋಗದಲ್ಲಿ ಎಲ್ಲವೂ ಅನುಕೂಲ. ಆದರೆ ಹೆರವರ ಉತ್ಕರ್ಷ ನೋಡಿ ನಿಮ್ಮ ಹೊಟ್ಟೆ ಉರಿಯುವದು. ವಾದ ಸ್ಪರ್ಧೆಗಳಲ್ಲಿ ಯಶ. ಮಿತ್ರಸುಖವೂ ಚೆನ್ನಾಗಿರುವದು. ಆಸ್ತಿಯ ಹೆಚ್ಚಳ. ಭೆಟ್ಟಿಯಾದರೆ ಕೆಲಸ ಸಾಧಿಸೀತು. ಆರ್ದ್ರೆಯ ಕೊನೆಯ ೩ ಮತ್ತು ಪುನರ್ವಸುವಿನ ೧ ನೆ ಚರಣಗಳಿಗೆ ಸ್ವಲ್ಪ ಸಾಹಸಪಟ್ಟರೇನೆ ಸಿದ್ಧಿದೊರಕಬಲ್ಲದು. ತಾ. ೨೨,೨೩,೨೭ ಒಳಿತು.

ಕರ್ಕ

ನಿಮ್ಮ ಪ್ರಕೃತಿ ಚನ್ನಾಗಿಯೆ ಇದ್ದರೂ ಹೆಂಡತಿ ಮಕ್ಕಳದು ಕೆಡುವದಲ್ಲದೆ ಮನೆಯಲ್ಲಿ ಜಗಳಗಳೂ ತೊಂದರೆಗಳೂ ಹೆಚ್ಚಿಕೊಂಡು ಕಾಡುವವು. ಪ್ರಗತಿ ಪ್ರತಿಷ್ಠೆ ಅಷ್ಟೇನೂ ಉತ್ತಮವಿಲ್ಲದಿದ್ದರೂ ಲಾಭ ಚನ್ನಾಗಿರುವದು. ವಾದ ಸ್ಪರ್ಧೆಗಳಲ್ಲಿ ಮಾತ್ರ ಶತ್ರುಗಳ ಕಿರಾಟಿಕೆ ಬಹಳ. ಮಿತ್ರಸುಖ ಉತ್ತಮ. ಪ್ರವಾಸ ಭೆಟ್ಟಿಗಳಿಗಿಂತ ಪತ್ರವ್ಯವಹಾರ ಒಳಿತು. ಪುಷ್ಯದ ಕೊನೆಯ ೪ ಮತ್ತು ಆಶ್ಲೇಷದ ೧ ನೆ ಚರಣಗಳಿಗೆ ತೊಂದರೆ ಕಡಿಮೆ. ತಾ. ೨೧,೨೪, ೨೫,೨೬ ಲೇಸು.

ಸಿಂಹ

ಹೆಂಡತಿಗೂ ನಿಮಗೂ ಹೆಜ್ಜೆಹೆಜ್ಜೆಗೆ ಜಗಳ. ಅಪ್ರಿಯ ಜನರು ಬರುವದರಿಂದ ಮನೆಯಲ್ಲಿ ವಿರಸ. ಇದು ಬಿಟ್ಟರೆ ಪ್ರಾಪಂಚಿಕ ಸುಖ ಉತ್ತಮ. ಉದ್ಯೋಗದಲ್ಲಿ ಪ್ರತಿಷ್ಠೆ ಲಾಭಗಳು ತೀರ ಕಡಿಮೆ. ಮಿತ್ರರೆ ವಿರೋಧ. ಪ್ರವಾಸವೇ ಲೇಸು. ಪತ್ರವ್ಯವಹಾರ ಉಪಯೋಗವಿಲ್ಲ. ಮಘೆಯ ಕೊನೆಯ ೩ ಮತ್ತು ಪೂರ್ವದ ೧ ನೆ ಚರಣಗಳು ವಿಶೇಷ ಚಿಂತಿಸಬೇಕಿಲ್ಲ. ತಾ. ೨೨,೨೩,೨೭ ಅನುಕೂಲ.

ಕನ್ಯಾ

ಸ್ವಂತದ ಮತ್ತು ಹೆಂಡತಿಯ ಪ್ರಕೃತಿ ಸೌಖ್ಯವಾಗಿದ್ದರೂ ಮಕ್ಕಳದು ಕೆಟ್ಟು ಹೋಗುವದು. ಸಾಲದ್ದಕ್ಕೆ ಮಕ್ಕಳ ಅಕೃತ್ಯಗಳಿಂದ ಜನರಲ್ಲಿ ಅನಾದರ ಹುಟ್ಟುವ ಪ್ರಸಂಗವಿದೆ. ಇತರ ಪ್ರಾಪಂಚಿಕ ತಾಪತ್ರಯಗಳೂ ಧಾರಾಳ! ಉದ್ಯೋಗದಲ್ಲಿ ಲಾಭಾದಿಗಳು ಚನ್ನಾಗಿದ್ದರೂ ವೆಚ್ಚವೂ ಅಗಾಧ. ವಾದ ಸ್ಪರ್ಧೆಗಳಲ್ಲಿ ವೆಚ್ಚವೂ ಒದ್ದಾಟವೂ ತುಂಬ, ಕೊನೆಗೆ ಜಯ. ಪತ್ರವ್ಯವಹಾರ ಸಾರ್ಥಕ. ಹಸ್ತದ ಕೊನೆಯ ೩ ಮತ್ತು ಚಿತ್ರದ ೧ ನೆ ಚರಣಗಳಿಗೆ ಕಷ್ಟಪಡದೆ ಇಷ್ಟಸಿದ್ಧಿಯಿಲ್ಲ. ತಾ. ೨೧,೨೫,೨೬ ಹಿತ.

ತುಲಾ

ಮಕ್ಕಳ ಆಹಾರ ವಿಹಾರಗಳ ಬಗ್ಗೆ ಎಚ್ಚರಿಕೆಯಿರಲಿ. ಏಕೆಂದರೆ ಅವರಿಗೆ ವಿಷಪ್ರಯೋಗ ಅಥವಾ ಅಪಘಾತವಾಗುವ ಸಂಭವವುಂಟು. ಉದ್ಯೋಗದಲ್ಲಿ ಲಾಭ ಮತ್ತು ಪ್ರತಿಷ್ಠೆ ಮಧ್ಯಮ. ವಾದ ಸ್ಪರ್ಧೆಗಳಿಗೆ ಅನುಕೂಲ. ದಾಯಾದ್ಯರ ಉನ್ನತಿ. ಪ್ರವಾಸಕ್ಕಿಂತ ಪತ್ರವ್ಯವಹಾರ ಒಳಿತು. ಸ್ವಾತಿಯ ಕೊನೆಯ ಮತ್ತು ವಿಶಾಖದ ಮೊದಲನೆ ಚರಣಗಳಿಗೆ ತೊಂದರೆ ಹೆಚ್ಚು. ೨೧, ೨೨, ೨೩, ೨೭ ಒಳಿತು.

ವೃಶ್ಚಿಕ

ಪ್ರಕೃತಿಯಲ್ಲಿ ಅಲ್ಪಸ್ವಲ್ಪ ಕ್ಲೇಶವಾದರೂ ಸ್ತ್ರೀ ಸುಖ ಪ್ರಾಪಂಚಿಕ ಸುಖ ಚೆನ್ನಾಗಿರುವದು. ಉದ್ಯೋಗದಲ್ಲಿ ಲಾಭ ಚನ್ನಾಗಿದ್ದರೂ ಪ್ರತಿಷ್ಠೆ ಇಳಿಮುಖ. ವಾದ ಸ್ಪರ್ಧೆಗಳಲ್ಲಿ ಜಯ. ಪತ್ರವ್ಯವಹಾರದಿಂದ ಕಾರ್ಯಸಿದ್ಧಿ. ಅನುರಾಧೆಯ ಕೊನೆಯ ೩ ಮತ್ತು ಜ್ಯೇಷ್ಠದ ೧ನೆ ಚರಣಗಳಿಗೆ ತೊಂದರೆ ಕಡಿಮೆ. ತಾ. ೨೨, ೨೩, ೨೪, ೨೫ ಒಳಿತು.

ಧನು

ಪ್ರಕೃತಿ, ಪ್ರಾಪಂಚಿಕ ಸುಖ ಸರಿಯಾಗಿದ್ದರೂ ಗಂಡಹೆಂಡಿರಲ್ಲಿ ಮತಭೇದ. ಉದ್ಯೋಗದಲ್ಲಿ ಪ್ರತಿಷ್ಠೆ, ಲಾಭ ಒಳಿತು. ಪ್ರಿಯ ಜನರ ಸಹವಾಸ. ವಾದ ಸ್ಪರ್ಧೆಗಳಲ್ಲಿ ಯಥಾಸ್ಥಿತಿ. ಪ್ರವಾಸಕ್ಕೆ ಅನುಕೂಲ ಕಾಲವಲ್ಲ. ಪತ್ರವ್ಯವಹಾರ ಮತ್ತು ಭೆಟ್ಟಿ ಹಿತಾವಹ. ಮೂಲದ ಕೊನೆಯ ೩ ಮತ್ತು ಪೂರ್ವಾಷಾಢದ ೧ನೆ ಚರಣಗಳಿಗೆ ತೊಂದರೆ ಕಡಿಮೆ. ತಾ. ೨೨,೨೩, ೨೭ ಅನುಕೂಲ.

ಮಕರ

ನಿಮ್ಮ ಪ್ರಕೃತಿ ಸಾಧಾರಣವೆ. ಹೆಂಡತಿ ಮಕ್ಕಳು ಆರೋಗ್ಯವಾಗಿರುವರು. ಆದರೂ ಪ್ರಾಪಂಚಿಕ ಸುಖ ಕಡಿಮೆ. ಲಾಭ ಚನ್ನಾಗಿದ್ದರೂ ವೆಚ್ಚವೂ ವಿಪರೀತ. ಮಿತ್ರರಲ್ಲಿ ವಿರೋಧ. ವಾದ ಸ್ಪರ್ಧೆಗಳಲ್ಲಿ ಮಧ್ಯಮ. ಪ್ರವಾಸಾದಿ ಹಿತಕರ. ಶ್ರವಣದ ಕೊನೆಯ ಮೂರು ಮತ್ತು ಧನಿಷ್ಠೆಯ ೧ನೆ ಚರಣಗಳಿಗೆ ಸಾಹಸಗುಣದ ಅವಶ್ಯಕತೆ ಹೆಚ್ಚು. ತಾ.೨೧, ೨೫, ೨೬ ಅನುಕೂಲ.

ಕುಂಭ

ನಿಮ್ಮ ಪ್ರಕೃತಿ ಉತ್ತಮ ಆದರೆ ಹೆಂಡತಿಯದು ಆಗಾಗ್ಗೆ ಕೆಡುವದು. ಮಕ್ಕಳಲ್ಲಿ ಒಬ್ಬನು ಹೀನ ದಶೆಯನ್ನು ಕಾಣಬಹುದು. ಉದ್ಯೋಗದಲ್ಲಿ ಅನುಕೂಲ. ವಾದ ಸ್ಪರ್ಧೆಗಳಲ್ಲಿ ಎರಡೂ ಪಕ್ಷಗಳೂ ಇದ್ದಂತೆಯೆ ಇರುವವು. ಸ್ಥಾವರದಲ್ಲಿ ಅಲ್ಪಸ್ವಲ್ಪ ಹಾನಿ. ಭೆಟ್ಟಿ ಅನುಕೂಲ. ಪತ್ರವ್ಯವಹಾರದಿಂದ ಕಾರ್ಯಸಿದ್ಧಿಯಿಲ್ಲ. ಶತತಾರೆಯ ಕೊನೆಯ ೩ ಮತ್ತು ಪೂರ್ವಾಭಾದ್ರದ ೧ನೆ ಚರಣಗಳಿಗೆ ತೊಂದರೆ ಹೆಚ್ಚು. ತಾ. ೨೨, ೨೩, ೨೭ ಅನುಕೂಲ.

ಮೀನ

ಕೈಯಲ್ಲಿದ್ದುದನ್ನು ಬಿಟ್ಟು ಬಿಸಿಲುಗುದುರೆಯ ಬೆನ್ನುಹತ್ತುವ ಹುಚ್ಚು ಬಿಡಿರಿ. ಈ ಹುಚ್ಚಿನಿಂದಲೆ ಈ ವಾರ ನಿಮ್ಮ ಸುಖಕ್ಕೆ ಧಕ್ಕೆಬರುವದು. ಉದ್ಯೋಗದಲ್ಲಿ ಪ್ರತಿಷ್ಠೆ ಲಾಭ ಉತ್ತಮ. ವೆಚ್ಚವೂ ಅಪರಿಮಿತ ವಾದ ಸ್ಪರ್ಧೆಗಳಲ್ಲಿ ಯಶ. ಪ್ರವಾಸ ಒಳಿತಲ್ಲ. ಪತ್ರವ್ಯವಹಾರ ಅನುಕೂಲ. ಉತ್ತರಾಭಾದ್ರದ ಕೊನೆಯ ೩ ಮತ್ತು ರೇವತಿಯ ೧ನೆ ಚರಣಗಳಿಗೆ ತೊಂದರೆ ಕಡಿಮೆ. ತಾ.೨೩, ೨೪, ೨೫, ೨೬ ಉತ್ತಮ.

ಪ್ರದರ್ಶನ

ನಗರ ಸಭೆಯು ಪಡೆಸಿತೊಬ್ಬ
ಮುದುಕಿಯರ ಪ್ರದರ್ಶನ..
ತಂದರು ಹಳೆ ಹಣ್ಣು ಮುದುಕಿ-
ಗಳಿಗೆ ಹಚ್ಚಿ ಅರಿಸಿನ!
ಅಜ್ಜಿಯನ್ನು ಇರಿಸಲೆಂದು
ನಾನು ಸಹಾ ಹೋದೆನು;
ಮೊದಲನೆಯಾ ಬಹುಮಾನದ
ಬಯಸಿ ಬಹಳ ಕಾದೆನು.
ಮುದುಕಿಗಳನು ನೋಡಿನೋಡಿ
ನಗರವೆಲ್ಲ ನಡೆಯಿತು;
ನನ್ನ ಅಜ್ಜಿಯೆದುರು ಮಾತ್ರ
ಹೆಚ್ಚು ಹೊತ್ತು ತಡೆಯಿತು.
ಅನಿಸಿತೆನಗೆ ಮೊದಲನೆಯಾ
ಬಹುಮಾನವೆ ಸಿಕ್ಕಿತು;
ಆದರೇನೊ ನಗರವೆಲ್ಲ
ಅಜ್ಜಿ ಕಂಡು ನಕ್ಕಿತು.
ಎಲ್ಲ ಮಂದಿ ತಾವು ತಂದ
ಮುದುಕಿ ಚೆಂದ ಬಣ್ಣಿಸಿ
ಒದರೆ, ನಾನು ನನ್ನಜ್ಜಿಗೆ
ಕೆಂಪುಕವಳ ತಿನ್ನಿಸಿ–
ಬನ್ನಿ ಬನ್ನಿ ನೋಡಿ ಇವಳ
ತುಟಿಯು ಥೇಟು ಹೊಸಾ ಹವಳ
ವೈಯ ಬಣ್ಣ ಸಿಂಬೆಯು;
ಇವಳು ವಿಶ್ವಕರ್ಮ ಕಡೆದ
ಒಂದೇ ಒಂದು ಗೊಂಬೆಯು,
ಎಂದು ಕೂಗಿ ಹೋಗುತಿರುವ
ಜನರನೆಲ್ಲ ಕರೆದೆನು;
ಒಬ್ಬರಿಗೂ ಕಣ್ಣೆ ಇಲ್ಲ
ಎಂದು ಅವರ ಜರೆದೆನು.
ನೆರವಿ ಕರಗೆ ಬಹುಮಾನದ
ಆಸೆಯನ್ನೆ ತೊರೆದೆನು.
ಕೊನೆಗೆ ಪ್ರದರ್ಶನಕೆ ತಂದ
ಮುದುಕಿಗಳನು ನೋಡಿದೆ.
ಇವರ, ನನ್ನ ಅಜ್ಜಿ ಚೆಲುವ
ತಿಳಿದು ತೂಕ ಮಾಡಿದೆ.
ಅನಿಸಿತೆನಗೆ ಪ್ರೀತಿಯೇ ಕು–
ರೂಪದೊಂದು ಕೋಶವು
ಪ್ರೀತಿಯುಳಿದು ನೋಡೆ ಪರಿವು-
ದೆನಿತೊ ದೃಷ್ಟಿದೋಷವು.

ವಿ. ಜಿ. ಬಿ.

ಪುಸ್ತಕ ಪರಿಚಯ

ತೆರೆಳು ಬಿಸಿಲು

ಬರೆದವರು: ಕೃಷ್ಣಕುಮಾರ: ಪ್ರಕಾಶಕರು: ಭಾರತೀ ಪ್ರಕಾಶನ ಮಂದಿರ ಮುಂಬಯಿ. ಪುಟ ೯೩. ಬೆಲೆ: ರೂ ೧.

ಇದು ೧೯೪೦ ರ ಸಾಲ ಹೋರಾಟವನ್ನು ಮಹಾತ್ಮರ ಜೀವನ ಸಂದೇಶವನ್ನು ಚಿತ್ರಿಸುವ ಎರಡು ಏಕಾಂಕಗಳುಳ್ಳ ಪುಸ್ತಕ. ಇದರಲ್ಲಿ ಮೊದಲನೆಯುದು ತಿರುಗುಬಿದ್ದ ಅಥವಾ ಜಾಗ್ರತರಾಷ್ಟ್ರ. ಇದರಲ್ಲಿ ೧೯೪೦ ರಲ್ಲಿ ದೇಶದ ತುಂಬೆಲ್ಲಾ ಸ್ವಾತಂತ್ರ್ಯದ ಕೋಲಾಹಲವೆದ್ದಾಗ ನಾವು ಮಕ್ಕಳಿಬ್ಬರು ನಡಾಡಿದ ಅಕ್ಕಯಿಪ್ಪವು ಚಿತ್ರಿತವಾಗಿದೆ; ಈ ಕಥೆಯ ವ್ಯಕ್ತಿಗಳು ಆಡುವ ಮಾತುಗಳೆಲ್ಲಾ ಹಳ್ಳಿಗರ ಗ್ರಾಮ್ಯವಾದ ಮಾತುಗಳಾಗಿರುವುದರಿಂದಲೂ ಅಲ್ಲಲ್ಲಿ ಸಮಯೋಚಿತವಲ್ಲದ ಸೀಂಗ ವಾಕ್ಯಗಳಿರುವುದರಿಂದಲೂ ಓದುವುದಕ್ಕೆ ಅಷ್ಟು ಹಿಡಿಸುವುದಿಲ್ಲ. ಎರಡನೆಯದು ಮುಸುಕು ಅಥವಾ ಉದುರಿದ ಚಿಕ್ಕೆ. ಸ್ವರ್ಗ ಮರ್ತ್ಯಗಳ ನಡುವಿನ ಪ್ರದೇಶದಲ್ಲಿ ದೇವದೂತನಿರುವನು. ಸ್ವರ್ಗದಿಂದ ಭೂಮಿಗೆ ಹೋಗುವವರಿಗೂ ಭೂಮಿಯಿಂದ ಸ್ವರ್ಗಕ್ಕೆ ಹೋಗುವವರಿಗೂ ದಾರಿ ತೋರಿಸುವುದೇ ಅವನ ಮುಖ್ಯ ಕೆಲಸ. ಆಗ ಸ್ವರ್ಗದಿಂದ, ಭೂಮಿಯಲ್ಲಿ ಹುಟ್ಟುವುದಕ್ಕೆಂದು ಒಂದು ಜೀವವು ಬರುವುದು. ಹಾಗೂ "ಭೂಲೋಕಕ್ಕೆ ಪ್ರೇಮದ ದಿವ್ಯ ಸಂದೇಶವನ್ನು ಹರಡುವುದಕ್ಕಾಗಿಯೇ ಅಲ್ಲಿ ತಾನು ಹುಟ್ಟುವೆನೆಂದೂ ಹೇಳುವುದು. ಅಷ್ಟರಲ್ಲಿ ಭೂಮಿಯಿಂದ ಸ್ವರ್ಗಕ್ಕೆ ಹೋಗುವ ಜೀವವೊಂದು ಮೋಹ, ಮಾಯೆ, ಆಶೆ, ಆಕಾಂಕ್ಷೆಗಳ ಬಣ್ಣಬಣ್ಣದ ಮುಸುಕನ್ನು ಹೊದ್ದುಕೊಂಡು ಅಲ್ಲಿಗೆ ಬರುವುದು. ಅದರ ಮುಸುಕನ್ನು ಕಳೆದು, ಅವನ್ನು ಶುದ್ಧಾತ್ಮವನ್ನಾಗಿ ಮಾಡಿ ಸ್ವರ್ಗಕ್ಕೆ ಕಳಿಸುವುದರೊಳಗಾಗಿ ಭೂಲೋಕಗಾಮಿ ಜೀವವು, ಸ್ವರ್ಗಗಾಮಿ ಜೀವದ ಮಾತಿಗೆ ಮರುಳಾಗಿ, ತನ್ನ ಕಣ್ಣ ಮುಂದಿನ ಉಚ್ಚ ಧ್ಯೇಯವನ್ನೆಲ್ಲ ಮರೆತು, ಅದು ಕಳೆದು ಹಾಕಿದ ಮುಸುಕನ್ನು ತಾನೇ ಹೊದೆದುಕೊಳ್ಳುವುದು. ಇದನ್ನು ನೋಡಿದ ದೇವದೂತನು, "ಇಂಥ ಧ್ಯೇಯವಾದಿಯಾದ ಆತ್ಮವು ತನ್ನ ಧ್ಯೇಯವನ್ನೇ ಮರೆತು ಈ ಕ್ಷುಲ್ಲಕವಾದ ಆಶೆಗೆ ಮರುಳಾಯಿತಲ್ಲ" ಎಂದು ನಿಟ್ಟುಸಿರುಬಿಡುವನು. ಇದು ಈ "ಮುಸುಕಿ" ನ ಸಾರಾಂಶ. ಒಟ್ಟಿನ ಮೇಲೆ ಈ ಪುಸ್ತಕವು ಅಷ್ಟು ರಸಪೂರ್ಣವಾಗಲಿಲ್ಲವೆಂದು ವಿಷಾದದಿಂದ ಹೇಳಬೇಕಾಗುತ್ತದೆ.

ಸಾದರ ಸ್ವೀಕಾರ

ರಾಷ್ಟ್ರೀಯ ಪದ್ಯಾವಲಿ

ಬರೆದವರು ರಾಜೇಸಾಹೇಬ ವಲ್ಲದ ರಹಿಮಾನ ಸಾಹೇಬ, ನರೇಗಲ್ಲ, ಕಲ್ಲೂರ. ಪ್ರಕಾಶಕರು ಶ್ರೀ ವೀರನಗೌಡ, ಬಿ. ಎಸ್. ಪಾಟೀಲ ಮೆಣಸಿಗಿ, ಭಾಗ್ಯೋದಯ ಪಂಚಾಂಗ ಕರ್ತರು ಮದಿಹಾಳ-ಧಾರವಾಡ. ಪುಟ ೧೩, ಬೆಲೆ ನಾಲ್ಕಾಣೆ.

ಗೀತಾನುಷ್ಠಾನ ಪದ್ಧತಿ

ಬರೆದವರು ಮತ್ತು ಪ್ರಕಾಶಕರು: ವೈದ್ಯ ಗ. ಮು. ಪಾಟೀಲ, ಬರಿಗೆ, ಪರಮಾರ್ಥ ಸಾಧನ ಸಂಘ, ಮಳಲಗದ್ದೆ, ಪೋ. ಉಳವಿ (ಜಿ. ಶಿವಮೊಗ್ಗ). ಪುಟ ೫೦. ಬೆಲೆ ? ಗೀತಾಭ್ಯಾಸಿಗಳಿಗೆ, ಅನುಷ್ಠಾನಪರರಿಗೆ ಈ ಪುಸ್ತಕ ಬಹಳ ಉಪಯುಕ್ತವಾಗಿದೆ. ಗೀತಾ ಪಠನದ ಫಲಶ್ರುತಿಯನ್ನೂ ಕ್ರಮವನ್ನೂ ಇದರಲ್ಲಿ ಚೆನ್ನಾಗಿ ವಿವರಿಸಲಾಗಿದೆ.

ಸ್ವತಂತ್ರ ಭಾರತದ ಶಿಕ್ಷಣರಂಗದಲ್ಲಿ ಭಾಷೆಗಳ ಸ್ಥಾನ

ಬರೆದವರು ಶ್ರೀ ಎಸ್. ಎಸ್. ವೀರಪ್ಪ. ಪ್ರಕಾಶಕರು ನವೋದಯ ಸಾಹಿತ್ಯ ಮಂದಿರ, ೧೩, ಕೃಷ್ಣರಾಜವನಂ, ಮೈಸೂರು. ಪುಟ ೬೨, ಬೆಲೆ ನಾಲ್ಕಾಣೆ.

ಗೊಬ್ಬರ

ಬರೆದವರು: ಶ್ರೀ ವೀ. ಜಿ. ಹಿತ್ತಲಮನಿ ಪ್ರಕಾಶಕರು: ಕಲ್ಲೂರ ರಾಯನಗೌಡರು ಪಾಟೀಲ, ಜನತಾಸೇವಕ ಸಮಾಜ, ಬೈಲಹೊಂಗಲ. ಪುಟ ೧೫೦, ಬೆಲೆ ರೂ ೨. ಈ ಪುಸ್ತಕದಲ್ಲಿ ಗೊಬ್ಬರದ ಬಗ್ಗೆ ವಿವಿಧ ವೈಜ್ಞಾನಿಕ ಬರಹಗಳಿವೆ. ಕೃಷಿಯಲ್ಲಿ ಆಸಕ್ತರಾದವರಿಗೆ ಇದರಿಂದ ಕೆಲಮಟ್ಟಿಗೆ ಪ್ರಯೋಜನವಾಗಬಹುದು.

ಭಾರತೀಯ ಶಿಕ್ಷಣರಂಗದ ಆಡಳಿತ ವ್ಯವಸ್ಥೆ

ಬರಹಗಾರರು: ಶ್ರೀ ಎಸ್. ಎಸ್. ವೀರಪ್ಪ ಪ್ರಕಾಶಕರು ನವೋದಯ ಸಾಹಿತ್ಯಮಂದಿರ ೧೩, ಕೃಷ್ಣರಾಜವನಂ, ಮೈಸೂರು. ಪುಟ ೧೪ ಬೆಲೆ ನಾಲ್ಕಾಣೆ.

ಚಿಕಾಗೊ ಉಪನ್ಯಾಸ

ಉಪನ್ಯಾಸಕಾರರು: ಸ್ವಾಮಿ ವಿವೇಕಾನಂದ ಪ್ರಕಾಶಕರು: ಶ್ರೀ ರಾಮಕೃಷ್ಣಾಶ್ರಮ, ಮೈಸೂರು. ಪುಟ ೩೨, ಬೆಲೆ ಆರಾಣೆ.

ಭಾರತದ ಮೂರ್ತಿಭಂಜಕ

ಬರೆದವರು: ಆಚಾರ್ಯ ಪ್ರ. ಕೇ. ಅತ್ರೆ. ಅನುವಾದಕರು: ಶ್ರೀ ಗು. ಮು. ಗೌರ ಬಾಗಲಕೋಟೆ. ಪುಟ ೨೦, ಬೆಲೆ ೪ ಆಣೆ.

ನೀತಿ ಸಾರಾವಳಿ

ಬರೆದವರು: ಜಗ್ಗುಶಿಂಗರಾರ್ಯರು. ಪ್ರಕಾಶಕರು: ನೀಲಕಂಠೇಶ್ವರ ಪ್ರಿಂಟಿಂಗ್ ವರ್ಕ್ಸ್, ಸುಲ್ತಾನ್ ಪೇಟೆ, ಬೆಂಗಳೂರು ಸಿಟಿ. ಪುಟ ೯೨, ಬೆಲೆ ೧ ರೂ.

ಶ್ರೀಗುರು ದತ್ತಾತ್ರೇಯ ಪಂಚಾಂಗವು

ಗಣಕರು: ಜ್ಯೋತಿರ್ವಿದ್ವಾನ್ ನಾಗೇಶ ಕೃಷ್ಣ ಜೋಶಿ ಕುಕನೂರ. ಪ್ರಕಾಶಕರು ಬ್ರ. ಶ್ರೀ. ದತ್ತಾತ್ರಯ ವಿರುಪಾಕ್ಷ ಪುರೋಹಿತ, ಕುಕನೂರ. ಪುಟ ೫೦, ಬೆಲೆ ?

ಅಮರ ಬಾಪೂಜಿ

ಬರೆದವರು: ಶ್ರೀ ಯು. ಗೋಪಾಲ ಶೆಟ್ಟಿ. ಪ್ರಕಾಶಕರು ನ್ಯೂ ಇಂಡಿಯಾ ಎಂಟರ್ ಪ್ರೈಜಸ್, ೨೫೭, ಫ್ರೆಯರ್ ರೋಡ್, ಬಾಂಬೆ ೧. ಪುಟ ೨೦, ಬೆಲೆ ಎಂಟಾಣೆ.

ನಾಗರಿಕ

ಸಂಪಾದಕರು ಶ್ರೀ ಎಸ್. ಕೆ. ಪೈ. 'ನಾಗರಿಕ' ಕಾರ್ಯಾಲಯ, ಕುಮಟಾ. ಪುಟ ೨೨, ಬೆಲೆ ಎರಡಾಣೆ. ಇದು 'ನಾಗರಿಕ' ದ ಗಾಂಧೀ ಸ್ಮಾರಕ ಸಂಚಿಕೆ. ಶ್ರೀ ಗೋವಿಂದ ಪೈಗಳ ಪದ್ಯದಿಂದ ಅಲಂಕೃತವಾಗಿದೆ.

ಕನ್ನಡ ಬಾಲಬೋಧೆ

ಬರಹಗಾರರು ಶ್ರೀ ರಾಘವೇಂದ್ರ ಭೀಮರಾವ್. ಮುದ್ರಕರು ಶ್ರೀ ಸೈಯದ್ ಅಬ್ದುಲ್ ಕಾದರ್ ಅಂಡ್ ಸನ್ಸ್ ಚಾರಕಮಾನ್, ಹೈದರಾಬಾದ್, ದಕ್ಷಿಣ. ಪುಟ ೫೬, ಬೆಲೆ ಒಂಬತ್ತಾಣೆ. ಈ ಬಾಲಬೋಧೆ ಸಚಿತ್ರವೂ ಸುಂದರ ಮುದ್ರಣದ್ದೂ ಬಾಲಕ ಬಾಲಿಕೆಯರಿಗೆ ಅಕ್ಷರ ಮತ್ತು ಪದಗಳನ್ನು ಕಲಿಯಲು ಬಹು ಸುಲಭವಾದ ಸಾಧನವೂ ಆಗಿದೆ.

सोव्हिएट रशियाचा सर्वांगीण सर्वोदय

ಬರೆದವರು: ಮತ್ತು ಪ್ರಕಾಶಕರು: ಶ್ರೀ. ಕೇ. ಗೋ. ಗೋಖಲೆ, ಬಿ. ಎ. ಕೃಷ್ಣಕುಂಜ ೧೪೩೪ ಬಸವಣಗಲ್ಲಿ, ಬೆಳಗಾವಿ. ಪುಟ ೩೪೪, ಬೆಲೆ ರೂ. ೬. ಈ ಪುಸ್ತಕದಲ್ಲಿ ಶ್ರೀ ಗೋಖಲೆಯವರು ರಶಿಯದ್ದು ವಿಶ್ವ ಕುಟುಂಬವಾದವೆಂದು ಕರೆದು ಅಲ್ಲಿಯ ಸತ್ಯ, ಅಹಿಂಸೆ, ಪ್ರಜಾಸತ್ತೆ, ವ್ಯಕ್ತಿಸ್ವಾತಂತ್ರ್ಯ ಮತ್ತು ವಿಶ್ವಸತ್ತೆ ಎಂಬ ಅಂಶಗಳನ್ನು ೧೭ ಪ್ರಕರಣಗಳಲ್ಲಿ ಸುವಿಸ್ತಾರವಾಗಿ ವರ್ಣಿಸಿದ್ದಾರೆ. ಆಸಕ್ತರು ಇದರಿಂದ ಬಹಳ ಪ್ರಯೋಜನ ಪಡೆಯುದಿರರು.

Introducing Our Flag

ಲೇಖಕರು ಮತ್ತು ಅನುವಾದಕರು: ಶ್ರೀ ಕೆ. ಸಿ. ರಾಜರತ್ನಂ. ಪ್ರಕಾಶಕರು ಹಿಂದ್ ಕಿತಾಬ್ಸ್ ಲಿಮಿಟೆಡ್ ಮುಂಬಯಿ. ಪುಟ ೪೮, ಬೆಲೆ ೧೨ ಆಣೆ.

Yarn and other Calculation

ಬರೆದವರು: ಮತ್ತು ಪ್ರಕಾಶಕರು ಶ್ರೀ ಎಸ್. ಜಿ. ದೇವಧರ, ಫಡಕೆ ಕಾಲೊನಿ, ಕೊಲ್ಹಾಪುರ. ಪುಟ ೧೨೪, ಬೆಲೆ ರೂ. ೩. ಈ ಪುಸ್ತಕದಲ್ಲಿ ನೂಲುವ ಮತ್ತು ನೇಯುವ ಕಲೆಗಳಿಗೆ ಸಂಬಂಧಿಸಿದ ಹಲವು ಉಪಯುಕ್ತವಾದ ತಾಂತ್ರಿಕ ಸಂಗತಿಗಳನ್ನು ವಿಸ್ತಾರವಾಗಿ ಕೊಡಲಾಗಿದೆ. ಸಂಬಂಧಪಟ್ಟ ಉದ್ಯಮಿಗಳಿಗೆ ಇದು ಬಹಳ ಪ್ರಯೋಜನಕಾರಿಯಾಗಬಲ್ಲದು.

Replies and Memorandae to The Linguistic Provinces Commission

ಬರೆದವರು : ಹಲವು ಪ್ರತಿನಿಧಿಗಳು ಮತ್ತು ಸಂಘಗಳು. ಪ್ರಕಾಶಕರು ಅ. ಕ. ಏಕೀಕರಣ ಸಂಘ, ಮಂಗಳೂರು. ಪುಟ ೧೫೫, ಬೆಲೆ?

Are Linguistic Provinces Necessary?

ಬರೆದವರು: ಶ್ರೀ ಟಿ. ಎಸ್. ಹಾಲಪ್ಪ, ಪ್ರಕಾಶಕರು ಅಖಿಲ ಕರ್ನಾಟಕ ಏಕೀಕರಣ ಸಂಘ, ಮಂಗಳೂರು. ಪುಟ ೧೯, ಬೆಲೆ ಎಂಟಾಣೆ.

ಈ ಪತ್ರಿಕೆಯನ್ನು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟಿನ" ಪರವಾಗಿ ಹ. ರಾ. ಪುರೋಹಿತರು ಮುದ್ರಿಸಿ ಪ್ರಕಟಿಸಿದರು.